ಗೌರಿ
ರಂಜನೆ ಬೋಧನೆ ಪ್ರಚೋದನೆ
ಲಂಕೇಶ್
28 ಡಿಸೆಂಬರ್ 2016 ಪುಟ 20 ರೂ. 15/-

ಜೀವ ಕಾರುಣ್ಯದ ಹೇಮರೆಡ್ಡಿ ಮಲ್ಲಮ್ಮ



ಮುದಿ ಮೇಟಜ್ಜನ ಕಾಮಗಾರಿ

ರೇಪಿಸ್ಟ್ ನ್ಯೂಮರಾಲಜಿಸ್ಟ್ ಎಸ್ಕೇಪ್



ಬೈಂದೂರು ಶಾಸಕ ಪೂಜಾರಿಯ ಅಕ್ರಮ-ಸಕ್ರಮ ಆಟ

ಮಂಡ್ಯ ಭೀಮಾನಾಯ್ಕನ ಬೆತ್ತಲು ಮಾಡಿದ ಡೆತ್‌ನೋಟ್

ದಾವಣಗೆರೆ ಕಳಚಿ ಬಿತ್ತು ಮಾದಾರ ಚೆನ್ನಯ್ಯನ ಮುಖವಾಡ

ಹೇಮರೆಡ್ಡಿ ಮಲ್ಲವ

'ದೇವರೇ ಅವರನ್ನು ಕ್ಷಮಿಸು, ಅವರು ಏನು ಮಾಡುತ್ತಿದ್ದಾರೆ ಎಂಬುದು ಅವರಿಗೇ ಗೊತ್ತಿಲ್ಲ' ಎಂದು ಏಸು ಕ್ರಿಸ್ತ ತನ್ನನ್ನು ಶಿಲುಬೆಗೆ ಏರಿಸಿದ ಜನರ ಕುರಿತು ದೇವರಲ್ಲಿ ಬೇಡಿಕೊಂಡ. ಇದು ಜೀವಕಾರುಣ್ಯದ ಅತ್ಯುನ್ನತ ಮಟ್ಟ. ಹೇಮರೆಡ್ಡಿ ಮಲ್ಲಮ್ಮ ಕೂಡ ಇಂಥ ಜೀವಕಾರುಣ್ಯದ ಸಾಧ್ವಿಯಾಗಿ ಲೋಕಕ್ಕೇ ಮಾರ್ಗದರ್ಶಿಯಾಗಿದ್ದಾಳೆ. ಗಂಡನ ಮನೆಯಲ್ಲಿ ನೀಡುತ್ತಿದ್ದ ಎಲ್ಲ ತೆರನಾದ ಅಪಮಾನ ಮತ್ತು ಕಿರುಕುಳವನ್ನು ಸಹಿಸುತ್ತ ಆ ಕುಟುಂಬವನ್ನು ಸಂರಕ್ಷಿಸಿದ ಘಟನೆ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥದ್ದಾಗಿದೆ.

ಜಗತ್ತನ್ನು ರಕ್ಷಿಸುವ ಶಕ್ತಿ ಜೀವಕಾರುಣ್ಯಕ್ಕೆ ಮಾತ್ರ ಇದೆ ಎಂಬ ಸತ್ಯದ ದರ್ಶನ ಮಲ್ಲಮನ ಜೀವನಕ್ರಮದಿಂದ ಆಗುತ್ತದೆ. ಅವಳ ಜೀವಕಾರುಣ್ಯದ ವಿಸ್ತಾರ ಅನಂತವಾಗಿದೆ. ಮರ ಗಿಡ ಬಳ್ಳಿ ಪ್ರಾಣಿಪಕ್ಷಿ ಮತ್ತು ಮಾನವಕುಲವನ್ನು ಅವಳು ಜೀವದಾಯಪಾರಳಾಗಿ ನೋಡುವ ಮೂಲಕ ಜೀವಲೋಕದ ತಾಯಿಯಾಗಿ ಕಾಣತೊಡಗುತ್ತಾಳೆ.

ಜೀವಕಾರುಣ್ಯ ಸುಮ್ಮನೆ ಬರುವಂಥದ್ದಲ್ಲ. ಜಗನ್ನಿಯಾಮಕನ ಬಗ್ಗೆ ಇರುವ ದೃಢನಂಬಿಕೆ, ಸುಸಂಸ್ಕೃತ ಮನಸ್ಸು, ಮಾನವೀಯ ಸಂಸ್ಕಾರಗಳು, ಐಹಿಕ ಆಸೆಗಳಿಂದ ಮುಕ್ತವಾದ ಚಿಂತನೆ, ಎಲ್ಲ ನೋವು ಮತ್ತು ಅಪಮಾನಗಳನ್ನು ಶಾಂತಚಿತ್ತದಿಂದ ಸ್ವೀಕರಿಸುವ ಅಪರಿಮಿತ ಸಹನಶಕ್ತಿ, ದ್ವೇಷದ ಬೆಂಕಿಯನ್ನು ಪ್ರೀತಿಯಿಂದ ಮಾತ್ರ ಆರಿಸಲು ಸಾಧ್ಯ ಎಂಬ ಮನವರಿಕೆ, ಜಗತ್ತಿಗೆ ಒಳ್ಳೆಯದನ್ನು ಮಾಡಲೇಬೇಕೆಂಬ ಸದ್ಭಾವನೆ, ಎಂಥ ಅನಿಷ್ಟಗಳ ಮಧ್ಯೆ ಕೂಡ ಒಳ್ಳೆಯದನ್ನೇ ನಿರೀಕ್ಷಿಸುವ ಗುಣ ಮತ್ತು ಜನರು ದುಷ್ಟತನವನ್ನು ಕಳೆದುಕೊಳ್ಳುತ್ತ ಶಿಷ್ಟರಾಗುವುದನ್ನು ನೋಡಿ ಸಂಭ್ರಮಿಸುವ ಪ್ರವೃತ್ತಿಯನ್ನು ಹೊಂದಿರುವವರು ಮಾತ್ರ ಜೀವಕಾರುಣ್ಯದ ಸಾಕಾರಮೂರ್ತಿಗಳಾಗಿರುತ್ತಾರೆ. ಸಂಸಾರದಲ್ಲಿದ್ದುಕೊಂಡೇ ಈ ಎಲ್ಲ ಸದ್ಗುಣಗಳ ಗಣಿಯಾಗಿದ್ದವಳು ಹೇಮರೆಡ್ಡಿ ಮಲ್ಲಮ್ಮ.

ಮಾನವರನೇಕರ ಗುಣಧರ್ಮವೇ ವಿಚಿತ್ರವಾಗಿರುತ್ತದೆ. ಅಂಥವರು ಒಳ್ಳೆಯವರ ಸದ್ಗುಣಗಳನ್ನು ಕೂಡ ದ್ವೇಷಿಸುತ್ತಾರೆ. ಸದ್ಗುಣಿಗಳ ದಿವ್ಯತೇಜಸ್ಸಿನ ಮುಂದೆ ಅವರ ವ್ಯಕ್ತಿತ್ವ ಗೌಣವಾಗಿ ಕಾಣುವುದರಿಂದಲೇ ಅವರು ದ್ವೇಷದ ದಾರಿ ಹಿಡಿಯುತ್ತಾರೆ. ಹೀಗೆ ಒಳ್ಳೆಯವರು ಸದಾ ಇಂಥ ದುಷ್ಟಶಕ್ತಿಗಳಿಂದ ಕಿರುಕುಳಕ್ಕೆ ಒಳಗಾಗುತ್ತಲೇ ಇರುತ್ತಾರೆ ಎಂಬುದಕ್ಕೆ ಇತಿಹಾಸ ನಿದರ್ಶನವಾಗಿದೆ. ಭಗವಾನ ಬುದ್ಧ, ಜೀಸಸ್, ಮಹಮ್ಮದ್ ಪೈಗಂಬರ್, ಶರಣಸಂಕುಲ, ಗಾಂಧಿ ಮುಂತಾದವರು ಮಾನವ ಕಲ್ಯಾಣದ ಹಾದಿಯನ್ನು ನಿರ್ಮಾಣ ಮಾಡುವಾಗ ಬಹಳ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ.

ಕೌಟುಂಬಿಕ ಜಗತ್ತಿನಲ್ಲಿ ಹೇಮರೆಡ್ಡಿ ಮಲ್ಲಮ್ಮ ಪಡಬಾರದ ನೋವು ಮತ್ತು ಅಪಮಾನಗಳನ್ನು ಸಹಿಸುತ್ತ, ಗಂಡನ ಮನೆಯವರು ತಮ್ಮ ಹೀನಗುಣಗಳಿಂದ ಹೊರಬಂದು ಸನ್ಮಾರ್ಗದಲ್ಲಿ ಮುನ್ನಡೆಯುವಂಥ ವಾತಾವರಣ ಸೃಷ್ಟಿಸಿದ್ದು ಎಲ್ಲ ಪವಾಡಗಳಿಗಿಂತ ದೊಡ್ಡದು.

ಎಂಟನೆಯ ಶತಮಾನದ ಇರಾಕ್ ದೇಶದ ಮಹಾನ್ ಸೂಫಿ ಸಂತಳಾಗಿದ್ದ ರಾಬಿಯಾ ಬಸ್ರಿ ಅಲ್ಲಾಹನನ್ನು ಪ್ರೀತಿಸುತ್ತ ಕುಟುಂಬ ಜೀವನಕ್ಕೆ ವಿಮುಖಳಾದಳು. 12ನೇ ಶತಮಾನದ ಶರಣೆ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡನೆಂದು ಸಾರುತ್ತ ವೀರವಿರಾಗಿಣಿಯಾದಳು. 16ನೇ ಶತಮಾನದ ಮೀರಾಬಾಯಿ ಸಂಸಾರದಲ್ಲಿ ಸಂಪೂರ್ಣ ನಿರಾಸಕ್ತಿ ತೋರಿ ಶ್ರೀಕೃಷ್ಣಪರಮಾತ್ಮನ ಧ್ಯಾನದಲ್ಲಿ ಮಗ್ನಳಾದಳು. ಇವರೆಲ್ಲ ಭಕ್ತಿಪಂಥದ ಮಹಾನ್ ಸಾಧಕರಾಗಿ ವಿಶ್ವಮಾನ್ಯವಾದ ಸಾಹಿತ್ಯ ರಚನೆ ಮಾಡಿದರು.

15ನೇ ಶತಮಾನದ ಹೇಮರೆಡ್ಡಿ ಮಲ್ಲಮ್ಮ ಅಂಥ ಯಾವುದೇ ಸಾಹಿತ್ಯ ರಚನೆ ಮಾಡಲಿಲ್ಲ, ಯಾವುದೇ ಪಂಥವನ್ನು ಅನುಸರಿಸಲಿಲ್ಲ, ಯಾವುದೇ ಪಂಥವನ್ನೂ ಸ್ಥಾಪಿಸಲಿಲ್ಲ. ಆದರೂ ಜನಮಾನಸದಲ್ಲಿ ಅಮರಳಾಗಿದ್ದಾಳೆ. ಪಾಮರರಿಂದ ಪಂಡಿತರವರೆಗೆ ಅವಳ ಬಗ್ಗೆ ಗೌರವಾದರಗಳಿವೆ. ಅವಳ ಮೇಲೆ ಜನಪದ ಕಾವ್ಯ ಪುರಾಣ, ಚರಿತೆ, ನಾಟಕ, ಗದ್ಯ ಪದ್ಯ ಗ್ರಂಥ, ಶಾಸನ ಮತ್ತು ಸಿನಿಮಾ ರಚನೆಯಾಗಿವೆ. ಕಳೆದ ಆರು ಶತಮಾನಗಳಿಂದ ಹೇಮರೆಡ್ಡಿ ಮಲ್ಲಮ್ಮನನ್ನು ಜನಸಮುದಾಯ ಜಾತಿ ಮತ್ತು ಧರ್ಮಗಳನ್ನು ಮೀರಿ ಸ್ತುತಿಸುತ್ತ ಬಂದಿದೆ. ಇದಕ್ಕೆ ಕಾರಣ ನಾಗರಿಕತೆಯ ಬೆಳವಣಿಗೆಯಲ್ಲಿ ಸೃಷ್ಟಿಯಾಗಿರುವ ಬಹುಮುಖ್ಯ ಸಂಸ್ಥೆಯಾದ ಕುಟುಂಬ ಸಂಸ್ಥೆಯನ್ನು ಉಳಿಸಿ ಬೆಳೆಸುವುದು ಹೇಗೆ ಎಂಬುದನ್ನು ಅವಳು ಮಾತು ಮತ್ತು ಬರಹದ ಮೂಲಕ ತೋರಿಸಿಕೊಡದೆ ಬದುಕಿ ತೋರಿಸುವ ಮೂಲಕ ನಮಗೆಲ್ಲ ಗುರು ಸ್ಥಾನದಲ್ಲಿದ್ದಾಳೆ.

ಹೇಮರೆಡ್ಡಿ ಮಲ್ಲಮ್ಮ ಸಂಸಾರ ತೊರೆದು ದೇವರ ಕಡೆಗೆ ಒಲವು ತೋರಿದವಳಲ್ಲ, ದೇವರ ಮೇಲೆ ಸಂಪೂರ್ಣ ಶ್ರದ್ಧೆ ಇಟ್ಟು ಸಂಸಾರದಲ್ಲಿ ನೆಮ್ಮದಿ ತರುವಲ್ಲಿ ಯಶಸ್ಸನ್ನು ಸಾಧಿಸಿದವಳು. ಆ ಮೂಲಕ ಜಗತ್ತಿನ ನಾರಿಯರಿಗೆ ಆದರ್ಶಪ್ರಾಯಳಾದವಳು. ಕುಟುಂಬ ಸಂಸ್ಕೃತಿಯನ್ನು ಎತ್ತಿಹಿಡಿದು ಮಾನವಕುಲದ ಉದ್ಧಾರಕ್ಕೆ ಮಾರ್ಗದರ್ಶಿಯಾದವಳು.

ಕುಟುಂಬ ಸಂಸ್ಥೆ ಎಲ್ಲ ನಾಗರಿಕತೆ, ಸಂಸ್ಕೃತಿ ಮತ್ತು ಎಲ್ಲ ಧರ್ಮಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಮಾನವ ಇತರೆ ಪ್ರಾಣಿವರ್ಗಕ್ಕಿಂತ ಭಿನ್ನ ಎಂಬುದನ್ನು ಸಾಬೀತುಪಡಿಸುವಲ್ಲಿ ಕುಟುಂಬ ಜೀವನ ಮಹತ್ವದ ಪಾತ್ರ ವಹಿಸುತ್ತದೆ. ಜಗತ್ತಿನ ಏಳೆಂಟುನೂರು ಕೋಟಿ ಜನರು ಭಾಷೆ, ಮಾನವ ಸಂಬಂಧ ಮತ್ತು ಸಂಸ್ಕಾರ ಪಡೆಯುವ ಮೊದಲ ಸ್ಥಾನ ಮನೆಯೆ ಆಗಿದೆ. ಕುಟುಂಬಗಳು ನಾಶವಾದರೆ ಇಡೀ ಜಗತ್ತೇ ಅನಾಥಪ್ರಜ್ಞೆಯಿಂದ ಬಳಲುತ್ತದೆ. ಧರ್ಮ, ಅರ್ಥ ಮತ್ತು ಕಾಮವಿಕೃತ ರೂಪ ತಾಳುತ್ತವೆ. ಇಂದು ಜಾಗತಿಕ ಮಟ್ಟದಲ್ಲಿ ಆಧುನಿಕ ಸಮಾಜ ಸಾವಕಾಶವಾಗಿ ಕುಟುಂಬ ವ್ಯವಸ್ಥೆಯಿಂದ ದೂರ ಸರಿಯುತ್ತಿದೆ. ಅವಿಭಕ್ತ ಕುಟುಂಬಗಳು ಕಾಲದ ಕಟ್ಟಳೆಯ ಒತ್ತಡಕ್ಕೆ ಸಿಲುಕಿ ಗಂಡಹೆಂಡತಿ ಮತ್ತು ಮಕ್ಕಳಿಗೆ ಮಾತ್ರ ಸೀಮಿತವಾಗಿರುವ ನ್ಯೂಕ್ಲಿಯರ್ ಕುಟುಂಬಗಳಾಗುತ್ತಿವೆ. ಇಂಥ ಕುಟುಂಬಗಳು ಹಿಂದಿಗಿಂತಲೂ ಹೆಚ್ಚು ಒತ್ತಡಕ್ಕೆ ಸಿಲುಕುತ್ತಿವೆ. ಈ ರೀತಿಯ ಆಧುನಿಕ ಕುಟುಂಬಗಳಲ್ಲಿ ಒಬ್ಬರಿಗೊಬ್ಬರು ಅರಿತು ಬಾಳುವ ಮನಸ್ಥಿತಿ ಬದಲಾಗುತ್ತಿದೆ. ಕೌಟುಂಬಿಕ ಕಲಹಗಳಿಂದಾಗಿ



ದನಕರುಗಳೊಂದಿಗೆ ಹೇಮರೆಡ್ಡಿ ಮಲ್ಲಮ್ಮ

ವಿವಾಹ ವಿಚ್ಛೇದನದ ಪ್ರಮಾಣವೂ ಹೆಚ್ಚಾಗುತ್ತಿದೆ. ಇಂಥ ವಿಷಮ ವಾತಾವರಣದಲ್ಲಿ ನಮಗೆ ಹೇಮರೆಡ್ಡಿ ಮಲ್ಲಮ್ಮ ನೆನಪಾಗುತ್ತಾಳೆ. ಕುಟುಂಬ ಸಂಸ್ಕೃತಿಯ ದೇವತೆಯಾಗಿ ಕಂಗೊಳಿಸುತ್ತಾಳೆ. ದೇವರು ಮತ್ತು ಕುಟುಂಬ ವ್ಯವಸ್ಥೆಯ ಮಧ್ಯೆ ಅವಿನಾಭಾವ ಸಂಬಂಧದ ಅವಳ ಪರಿಕಲ್ಪನೆ ಇಂದು ಇಡೀ ಜಗತ್ತಿಗೆ ಮಾರ್ಗದರ್ಶಿಯಾಗಿದೆ.

ದೇಹವೇ ದೇಗುಲ ಎಂದು ಬಸವಣ್ಣನವರು ಹೇಳಿದ್ದಾರೆ. ಮಲ್ಲಮನ ದೇಹವು ಶ್ರೀಶೈಲ ಮಲ್ಲಿಕಾರ್ಜುನನ ದೇಗುಲವಾಗಿತ್ತು. ಆಕೆ ತನ್ನೊಳಗಿನ ದೇವರ ಜೊತೆ ಮಾತನಾಡುತ್ತಿದ್ದಳು. ಈ ಅಂತಃಶಕ್ತಿಯೆ ಅವಳ ದೈನಂದಿನ ಬದುಕಿನ ಶಕ್ತಿಯಾಗಿತ್ತು. ಆದ್ದರಿಂದಲೇ ಅವಳಿಗೆ ಎಲ್ಲ ನೋವು ಮತ್ತು ಅಪಮಾನಗಳನ್ನು ಸಹಿಸುವ ಶಕ್ತಿ ಬಂದಿತ್ತು. ಅಷ್ಟೇ ಅಲ್ಲ ಆ ರೀತಿ ನೋವು ಕೊಡುವ ಅತ್ತೆ ಮತ್ತು ನಾದಿನಿಯರು ಪಶ್ಚಾತ್ತಾಪ ಪಟ್ಟು ಸಂಸ್ಕಾರವಂತರನ್ನಾಗಿ ಮಾಡುವಲ್ಲಿ ಈ ಆಕೆಯೊಳಗಿನ ಅಂತಃಶಕ್ತಿಯಾದಂಥ ಶ್ರೀಶೈಲ ಮಲ್ಲಿಕಾರ್ಜುನ ಶಕ್ತಿ ಸಹಾಯ ಮಾಡಿತು.

ಶ್ರೀಶೈಲ ಮಲ್ಲಿಕಾರ್ಜುನನ ಮೇಲೆ ಹೇಮರೆಡ್ಡಿ ಮಲ್ಲಮ ಹೊಂದಿದ್ದ ಅನನ್ಯ ಶ್ರದ್ಧೆಯು ಅಧಃಪತನಗೊಂಡ ಗಂಡನ ಮನೆಯ ಇಡೀ ಕುಟುಂಬವನ್ನು ಕಾಪಾಡಿತು. ಮತ್ತೆ ಆ ಕುಟುಂಬ ತಲೆ ಎತ್ತಿ ಬದುಕುವಂತೆ ಮಾಡಿತು.

ಮಲ್ಲಮನ ಮಾರ್ಗದರ್ಶನದಂತೆ ನಾವು ಬದುಕುವ ಮೂಲಕ, ಅವಳ ಶ್ರದ್ಧೆ, ಇಡೀ ಜಗತ್ತನ್ನು ಕಾಪಾಡುವಂತೆ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ರೆಡ್ಡಿ ಜನಾಂಗಕ್ಕೆ ಬಡತನ ಬಾರದಿರಲಿ ಎಂದು ಹೇಮರೆಡ್ಡಿ ಮಲ್ಲಮ್ಮ ದೇವರಲ್ಲಿ ಬೇಡಿಕೊಂಡಿದ್ದಾಳೆ. ಬಡತನ ಎಂಬುದು ಕೇವಲ ಸಂಪತ್ತಿಗೆ ಸಂಬಂಧಿಸಿದ್ದಲ್ಲ, ನಾವು ನೈತಿಕತೆಯಲ್ಲಿ, ಸಂಸ್ಕಾರದಲ್ಲಿ, ಕೌಟುಂಬಿಕ ನೆಮ್ಮದಿಯಲ್ಲಿ, ಜನಸೇವೆಯೆ ಜನಾರ್ದನನ ಸೇವೆಯೆಂದು ಭಾವಿಸಿ ಜಾತಿ ಮತ ಎಣಿಸದೆ ಅಸಹಾಯಕ ಜನರಿಗೆ ಸಹಾಯಹಸ್ತ ಚಾಚುವುದರಲ್ಲಿ, ಜ್ಞಾನದಲ್ಲಿ, ಸರ್ವಜನರು ಒಂದಾಗಿ ಬಾಳುವಂತೆ ಮಾಡುವ ಹೃದಯ ವೈಶಾಲ್ಯದಲ್ಲಿ ಬಡತನ ನುಸುಳದಂತೆ ನೋಡಿಕೊಳ್ಳಬೇಕಿದೆ. ಇದುವೆ ನಾವು ಹೇಮರೆಡ್ಡಿ ಮಲ್ಲಮ್ಮನಿಗೆ ತೋರಿಸುವ ಅತ್ಯುನ್ನತ ಗೌರವ.

'ನಿನ್ನದೆಂಬುದು ಜ್ಞಾನರತ್ನ' ಎಂದು ಅಲ್ಲಮಪ್ರಭುಗಳು ಹೇಳಿದ್ದಾರೆ. ಹೇಮರೆಡ್ಡಿ ಮಲ್ಲಮ್ಮನ ಜ್ಞಾನರತ್ನವನ್ನು ಸಂಪಾದಿಸುವುದೇ ನಮ್ಮ ಶ್ರೀಮಂತಿಕೆ. ಆ ಜ್ಞಾನರತ್ನ ಜಗತ್ತಿನ ಪಾಲಾಗುವಂತೆ ನೋಡಿ... ನಮ್ಮ ನೈತಿಕ ಜವಾಬ್ದಾರಿಯಾಗಿದೆ.

ಶ್ರೀಶೈಲದ ದಕ್ಷಿಣ ಭಾಗದಲ್ಲಿರುವ ರಾಮಪುರದ ಶ್ರೀಮಂತ... ಮನೆತನದ ನಾಗರೆಡ್ಡಿ ಮತ್ತು ಗೌರಮ್ಮ ದಂಪತಿಯ ಮಗಳಾ... ಕ್ರಿಸ್ತ ಶಕ 1424ರಲ್ಲಿ ಜನಿಸಿದಳು. ಮಕ್ಕಳಿಲ್ಲದ ಈ ದಂಪತಿ... ಮಲ್ಲಿಕಾರ್ಜುನನಿಗೆ ಬೇಡಿಕೊಂಡ ನಂತರವೆ ಈಕೆ ಹುಟ್ಟಿದ್ದರಿಂದ... ಎಂದು ಹೆಸರಿಡಲಾಯಿತು. ಮಲ್ಲಮ್ಮ ಬಾಲ್ಯದಿಂದಲೇ... ಮಲ್ಲಿಕಾರ್ಜುನನ ಮಗಳಾಗಿ ಬೆಳೆದಳು. ಗೊಂಬೆಗಳ ಜೊತೆ ಆಡುವ... ಕಲ್ಲನ್ನು ನೆಟ್ಟಗೆ ನಿಲ್ಲಿಸಿ ಶ್ರೀಶೈಲ ಮಲ್ಲಿಕಾರ್ಜುನ ಎಂದು... ಪೂಜಿಸುವಷ್ಟು ತಾದಾತ್ಮ್ಯವನ್ನು ಆಕೆ ಹೊಂದಿದ್ದಳು. ಶ್ರೀಮಂತರ ಮ... ನಯವಿನಯವೇ ಆಕೆಯ ಶ್ರೀಮಂತಿಕೆಯಾಗಿತ್ತು.

ದನಕರುಗಳಿಗೆ ಮೇವು ನೀರು ಕೊಟ್ಟು, ಅವುಗಳ... ಮಾತನಾಡುವುದರಲ್ಲಿ ಆನಂದ ಪಡುತ್ತಿದ್ದಳು. ಅವು ಕಣ್ಣುಗಳ... ಕೃತಜ್ಞತೆ ವ್ಯಕ್ತಪಡಿಸುತ್ತಿದ್ದವು. ಮನೆಯ ಸುತ್ತ ಬೆಳೆದ ಗಿಡಗಳ... ಹಾಕುವುದರ ಮೂಲಕ ಅವುಗಳ ಯೋಗಕ್ಷೇಮವನ್ನು ನೋಡಿಕೆ... ಬಾಲ್ಯದಲ್ಲೇ ಅವಳು ಜೀವಕಾರುಣ್ಯದ ಮೂರ್ತಿಯಾಗಿದ್ದಳು. ... ರೋಗಿಯೊಬ್ಬ ನೀರಿಗಾಗಿ ಹಲುಬುತ್ತಿದ್ದಾಗ ಜನ ನೋಡಿಯೂ ... ಮೂಗು ಮುಚ್ಚಿಕೊಂಡು ಹೋಗುತ್ತಿದ್ದರು. ಭಾವಪೂರ್ಣ ಬಾ... ನೀರು ಕೊಟ್ಟು ಆ ರೋಗಿಗಿಂತಲೂ ಹೆಚ್ಚಿನ ತೃಪ್ತಿ ಪಡೆದಳು... ಜನರ ಮತ್ತು ಊರ ಜನರ ಕಣ್ಮಣಿಯಾಗಿ ಬೆಳೆದಳು.

ಮಲ್ಲಮ್ಮ ದೊಡ್ಡವಳಾದ ಮೇಲೆ ಹೊಲ ಮತ್ತು ಮನೆಯ ... ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದಳು. ದನಕರುಗಳಿಗೆ ಮೇವು ... ಹಾಲು ಕರೆಯುವುದು, ಕಸಗುಡಿಸುವುದು ಮುಂತಾದ ಕೆಲಸ... ದೇವರ ಪೂಜೆಯಷ್ಟೆ ಮಹತ್ವದ್ದಾಗಿ ಕಂಡವು. ಆಕೆ ಸಹಜವಾಗಿಯೇ... ಕೈಲಾಸ ಕಂಡವಳಾಗಿದ್ದಳು.

ಬೆಳೆದುನಿಂತ ಮಲ್ಲಮನನ್ನು ಶ್ರೀಶೈಲ ಸಮೀಪದ ಸಿದ್ಧಾಪು... ಹೇಮರೆಡ್ಡಿ ಮನೆತನದ ಗಿರಿರೆಡ್ಡಿ ಮತ್ತು ಪದ್ಮಾವತಿ ದಂಪತಿ... ಮಕ್ಕಳಲ್ಲಿ ಮೂರನೆಯ ಮಗನಾದ ಭರಮರೆಡ್ಡಿಗೆ ಕ್ರಿಸ್ತ ಶಕ ... ಮದುವೆ ಮಾಡಿ ಕೊಡಲಾಯಿತು.

ಸೇವಾಮನೋಭಾವದ ಮಲ್ಲಮ್ಮ ಮನೆಗೆಲಸಗಳನ್ನು ... ಮಾಡತೊಡಗಿದಳು. ಅತ್ತೆ ಮಾವ ಮತ್ತು ಪತಿಯ ಸೇವೆಯ... ದೇವರ ಸೇವೆ ಎನ್ನುವ ರೀತಿಯಲ್ಲೇ ಮಾಡುತ್ತಿದ್ದಳು. ನೆಗೆಣ್ಣಿಯರಾದ ... ನಾಗಮ್ಮ ಮತ್ತು ನೆರೆಹೊರೆಯವರನ್ನು ತನ್ನ ಸಹಜ ಮನೋಭಾ... ಗೌರವದಿಂದ ಕಾಣುತ್ತಿದ್ದಳು. ಮನೆ ಮುಂದೆ ಬಂದ ಭಿಕ್ಷುಕರ... ಜೀವಕಾರುಣ್ಯದಿಂದ ಕಾಣುತ್ತ ಭಿಕ್ಷೆ ನೀಡುತ್ತಿದ್ದಳು. ಸಹನೆ, ... ಪರೋಪಕಾರದಿಂದ ಕೂಡಿದ ಮಲ್ಲಮ್ಮನ ರೀತಿನೀತಿಗಳು ... ಮನೆ ಮಾತಾಯಿತು. ಜನ ಅವಳನ್ನು ಆದರ್ಶಮೂರ್ತಿಯಾಗಿ ಕಾಣ... ಇದುವೆ ಅತ್ತೆ ಮತ್ತು ನೆಗೆಣ್ಣಿಯರು ದ್ವೇಷ ಸಾಧಿಸಲು ಕಾರಣ...

ಹೇಮರೆಡ್ಡಿ ಮನೆತನಕ್ಕೆ ರಾಜಮನೆತನದ ಹಿನ್ನೆಲೆ ಇರುವುದ... ಮಾವ ಗಿರಿರೆಡ್ಡಿ ಧಾರ್ಮಿಕ ಕಾರ್ಯಗಳಲ್ಲೇ ತಲ್ಲೀನನಾಗಿದ್ದು ಅತ್ತೆ... ಮನೆಯ ವ್ಯವಹಾರವನ್ನು ನಿಭಾಯಿಸುವುದರಲ್ಲಿ ಚಾಣಾಕ್ಷ... ಸಹಜವಾಗಿಯೆ ಆಕೆಯ ಜೀವನಶೈಲಿ ಅಧಿಕಾರಯುಕ್ತವಾಗಿತ್ತು. ... ಗೌರವ ಸೂಚಿಸದೆ ಮೊನ್ನೆ ಮೊನ್ನೆ ಬಂದ ಈ ಹುಡುಗಿ ... ಗೌರವಿಸುವುದು ಅವಳ ವ್ಯಕ್ತಿತ್ವಕ್ಕೆ ಕುಂದು ಬಂದಂತಾಯಿ... ಸೊಸೆಯಂದಿರಾದ ಮಹಾದೇವಿ ಮತ್ತು ನಾಗಮ್ಮ ಸೇರಿ ಅತ್ತೆ ಪ... ತಲೆಯಲ್ಲಿ ಮಲ್ಲಮನ ಬಗ್ಗೆ ದ್ವೇಷ ಹುಟ್ಟುವ ಹಾಗೆ ವಿಷಬೀಜ... ಈ ಮೂವರು ಸೇರಿ ಮಲ್ಲಮನ ವಿರುದ್ಧ ದ್ವೇಷ ಕಾರತೊಡಗಿ...

ಮಲ್ಲಮ್ಮ ಭಿಕ್ಷುಕರಿಗೆ ಯಥೇಚ್ಛ ದಾನ ಧರ್ಮ ಮಾಡುವ... ಪೂಜೆಯಲ್ಲಿ ನಿರತಳಾಗಿರುವುದಕ್ಕೆ ಅತ್ತೆ ಮತ್ತು ನೆಗೆಣ್ಣಿಯರು ... ಅರ್ಥ ಕಲ್ಪಿಸಿದರು. ಮನೆ ಹಾಳು ಮಾಡುವವಳು ಎಂದು ... 'ಮನೆಗೆಲಸ ಮಾಡುವುದು ಸಾಕು, ಹೊಲದಲ್ಲಿ ... ಹಾಕಿಕೊಂಡು ಇದ್ದು ಅಲ್ಲಿಯೆ ಹೊಲದ ಕೆಲಸ ... ದನಕರುಗಳನ್ನು ಸಾಕು' ಎಂದು ಆಜ್ಞಾಪಿಸಿದಳು. ಇದು ... ಧ್ಯಾನಕ್ಕಾಗಿ ಕಲ್ಪಿಸಿದ ಅವಕಾಶ ಎಂದು ಮಲ್ಲಮ್ಮ ಸಂತ... ಒಪ್ಪಿದಳು. ಪ್ರಾಣಿ, ಪಕ್ಷಿ ಮತ್ತು ನಿಸರ್ಗದ ಮಡಿಲಲ್ಲಿ ... ಶ್ರೀಶೈಲ ಮಲ್ಲಿಕಾರ್ಜುನನ ಧ್ಯಾನದಲ್ಲಿ ನಿರತಳಾಗು... ಅನುಭವಿಸಿದಳು. ಹೀಗೆ ಎಂಥ ಕಠಿಣ ಪರಿಸ್ಥಿತಿಯಲ್ಲೂ ... ಕಳೆದುಕೊಳ್ಳದೆ 'ಆಗುವುದೆಲ್ಲ ಒಳ್ಳೆಯದಕ್ಕಾಗಿ' ಎಂಬ ಮನೋಭಾವ ಹೊಂದಿದ್ದ ಸಾಧ್ವಿ ಮಲ್ಲಮ್ಮ ಸಹನ... ಸಾಕಾರಮೂರ್ತಿಯಾಗಿ ಜನಮಾನಸದಲ್ಲಿ ಅಮರಳಾಗಿದ...

ಮಲ್ಲಮ್ಮ ಇಷ್ಟೆಲ್ಲ ದುಡಿದು ಸಾಯಂಕಾಲ ಮನೆ... ಮನೆಗೆಲಸವನ್ನೂ ಮಾಡುತ್ತಿದ್ದಳು. ಅವಳು ಇಷ್ಟೆಲ್ಲ ... ದಣಿಯದೆ ಸಂತೋಷದಿಂದ ಇರುವುದನ್ನು ನೋಡಿ ... ಮತ್ತು ನಾಗಮ್ಮರಿಗೆ ಅಸೂಯೆ ಇನ್ನೂ ಹೆಚ್ಚಿತು. ... ಮನೆಗೆಲಸಗಳಲ್ಲಿ ತಪ್ಪು ಹುಡುಕುವುದೇ ಅವರ ಕೆಲಸ...



ಆಂಧ್ರಪ್ರದೇಶ ಕರ್ನೂಲ್ ಜಿಲ್ಲೆ ಶ್ರೀಶೈಲದಲ್ಲಿರುವ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನ

ಸುಪ್ರೀಂಕೋರ್ಟಿನಲ್ಲಿ ಯಾಕೆ ರಾಷ್ಟ್ರಗೀತೆ ಮೊಳಗುವುದಿಲ್ಲ?



ಈಗ ಎಲ್ಲರಿಗೂ ಗೊತ್ತಿರುವ ಹಾಗೆ ನವೆಂಬರ್ [illegible]ರಂದು ಸುಪ್ರೀಂಕೋರ್ಟ್ ಹೊರಡಿಸಿದ ಆದೇಶದನ್ವಯ [illegible]ದ ಎಲ್ಲಾ ಚಿತ್ರಮಂದಿರಗಳಲ್ಲಿ ಪ್ರತಿ ಶೋ ಪ್ರಾರಂಭವಾಗುವ ಮುನ್ನ ರಾಷ್ಟ್ರಧ್ವಜವನ್ನು ಪ್ರದರ್ಶಿಸಲಾಗುತ್ತಿದೆ ಮತ್ತು ರಾಷ್ಟ್ರಗೀತೆಯನ್ನು ಮೊಳಗಿಸಲಾಗುತ್ತಿದೆ. ಅಷ್ಟೇ [illegible]ಲ್ಲ, ರಾಷ್ಟ್ರಗೀತೆ ಮೊಳಗಿದಾಗ ಎಲ್ಲರೂ ಎದ್ದುನಿಲ್ಲುವ ಮೂಲಕ ರಾಷ್ಟ್ರಭಕ್ತಿಯನ್ನು ತೋರಿಸಬೇಕು ಎಂದೂ ಸುಪ್ರೀಂಕೋರ್ಟ್ ಫತ್ವಾ ಹೊರಡಿಸಿದೆ.

ಕಳೆದ ವಾರ ತಿರುವನಂತಪುರಂನಲ್ಲಿ ಕೇರಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಾರಂಭವಾದಾಗ ಅದರ ಆಯೋಜಕರು ಸುಪ್ರೀಂಕೋರ್ಟಿಗೆ ಒಂದು ಮನವಿಯನ್ನು ಸಲ್ಲಿಸಿದ್ದರು. ಅದರಲ್ಲಿ "ಈ ಚಲನಚಿತ್ರೋತ್ಸವದಲ್ಲಿ 400ಕ್ಕಿಂತಲೂ ಹೆಚ್ಚು ಸಿನಿಮಾಗಳನ್ನು ಪ್ರದರ್ಶಿಸುತ್ತಿದ್ದೇವೆ ಮತ್ತು 1,500 ಕ್ಕೂ ಹೆಚ್ಚು ವಿದೇಶಿ ಅತಿಥಿಗಳಿದ್ದಾರೆ. ಅವರೆಲ್ಲರಿಗೂ ರಾಷ್ಟ್ರಗೀತೆ ಮೊಳಗಿಸಿದಾಗ ಎದ್ದು ನಿಲ್ಲಬೇಕು ಎಂಬುದು ಗೊತ್ತಿರಲಿಕ್ಕಿಲ್ಲ, ಆದ್ದರಿಂದ ರಾಷ್ಟ್ರಗೀತೆಯನ್ನು ಮೊಳಗಿಸುವುದರಿಂದ ನಮಗೆ ರಿಯಾಯಿತಿ [illegible]ಡಲು ಸಾಧ್ಯವೇ?" ಎಂದು ಕೋರಿದ್ದರು. ಆದರೆ [illegible]ವರ ಮನವಿಯನ್ನು ತಿರಸ್ಕರಿಸಿದ ಕೋರ್ಟ್ "ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಗೌರವ ತೋರಿಸಿದಾಗ ಮಾತೃಭೂಮಿಯ ಬಗೆಗಿನ ಪ್ರೀತಿ ಮತ್ತು ಗೌರವ ವ್ಯಕ್ತವಾಗುತ್ತದೆ. ಜೊತೆಗೆ ರಾಷ್ಟ್ರೀಯತೆ ಮತ್ತು ದೇಶಭಕ್ತಿಯನ್ನು ಅವುಗಳು ಹುಟ್ಟಿಸುತ್ತವೆ" ಎಂದಿದ್ದಾರೆ. ಅಂದಹಾಗೆ, ಆಯೋಜಕರ ಮನವಿಯನ್ನು ತಿರಸ್ಕರಿಸಿದ್ದು ಈ ಹಿಂದೆ ರಾಷ್ಟ್ರಗೀತೆಯನ್ನು ಸಿನಿಮಾಮಂದಿರಗಳಲ್ಲಿ ಕಡ್ಡಾಯ ಗೊಳಿಸಿದ ಅದೇ ನ್ಯಾಯಾಧೀಶರಿದ್ದ ಪೀಠ.

ಸುಪ್ರೀಂಕೋರ್ಟಿನ ಈ ತೀರ್ಪು ಈಗ ಎಲ್ಲೆಡೆ ಚರ್ಚೆಗಳನ್ನು ಹುಟ್ಟುಹಾಕಿದೆಯಲ್ಲದೆ ಹಲವರು ಅದನ್ನು ಕಟುವಾಗಿ ಟೀಕಿಸಿದ್ದಾರೆ. ಯಾರ ಮೇಲೂ ರಾಷ್ಟ್ರಭಕ್ತಿಯನ್ನು ಹೇರುವುದು ಸರಿಯಲ್ಲವೆಂದೂ, ರಾಷ್ಟ್ರಗೀತೆ ಮೊಳಗಿದಾಗ ಎದ್ದು ನಿಂತ ಮಾತ್ರಕ್ಕೆ ದೇಶಭಕ್ತಿ ಸೃಷ್ಟಿಯಾಗುವುದಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಸುಪ್ರೀಂಕೋರ್ಟಿನ ತೀರ್ಪನ್ನು ಪ್ರತಿಭಟಿಸಿದ್ದಾರೆ. ಅವರಲ್ಲಿ ಹನ್ನೊಂದು ಜನ ಅದೇ ಚಿತ್ರೋತ್ಸವದಲ್ಲಿ ರಾಷ್ಟ್ರಗೀತೆಗೆ ಎದ್ದು ನಿಲ್ಲದೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಆ ಕಾರಣಕ್ಕೇ ಆ ಹನ್ನೊಂದು ಮಂದಿಯ ವಿರುದ್ಧ ಕೆಲ ಚೆಡ್ಡಿಗಳು ಪ್ರತಿಭಟಿಸಿದ್ದರಿಂದ "ರಾಷ್ಟ್ರಗೀತೆಗೆ ಅವಮಾನ ಮಾಡಿದರು" ಎಂದು ಆರೋಪಿಸಿ ಅವರನ್ನೆಲ್ಲ ಬಂಧಿಸಿ ಆನಂತರ ಬಿಡುಗಡೆ ಮಾಡಲಾಗಿದೆ. ಅವರ ಬಂಧನವನ್ನು ವಿರೋಧಿಸಿ ಪ್ರತಿಭಟನೆಗಳೂ ನಡೆದಿವೆ. ಕೆಲವರು "ಡೀಯರ್ ಸುಪ್ರೀಂಕೋರ್ಟ್, ನೋ ಲವ್ ಕ್ಯಾನ್ ಬಿ ಫೋರ್ಸ್ಡ್" ಎಂಬ ಬರಹವಿರುವ ಚೀಟಿಗಳನ್ನು ತಮ್ಮ ತೋಳುಗಳ ಮೇಲೆ ಅಂಟಿಸಿಕೊಂಡು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ವಾಸ್ತವವಾಗಿ ಇಂತಹ ತೀರ್ಪು ಕೊಡುವ ಗೋಜಿಗೆ ಸುಪ್ರೀಂಕೋರ್ಟ್ ಯಾಕೆ ಹೋಯಿತು ಎಂಬುದು ಯಾರಿಗೂ ಅರ್ಥವಾಗಿಲ್ಲ. ಈಗಾಗಲೇ ನಮ್ಮ ನ್ಯಾಯಾಲಯಗಳು ಇದಕ್ಕಿಂತಲೂ ಮುಖ್ಯವಾದ ಅರ್ಜಿಗಳನ್ನೇ ನಿಭಾಯಿಸಲಾಗದೆ ತತ್ತರಿಸುತ್ತಿವೆ. ನ್ಯಾಯಾಧೀಶರ ಕೊರತೆಯೂ ಸುಪ್ರೀಂಕೋರ್ಟ್ ಮೇಲಿನ ಒತ್ತಡವನ್ನು ಹೆಚ್ಚಿಸಿದೆ. ಪ್ರಸ್ತುತ ಸುಪ್ರೀಂಕೋರ್ಟ್ ಮುಂದೆ 6,000ಕ್ಕಿಂತಲೂ ಹೆಚ್ಚು ವಿಚಾರಣೆಗಳು ಇತ್ಯರ್ಥ ಕಾಣದೆ ಕೂತಿವೆ. ಹೈಕೋರ್ಟುಗಳ ಮುಂದೆ ಹತ್ತಿರ ಹತ್ತಿರ ನಲವತ್ತು ಲಕ್ಷ ಕೇಸುಗಳಿವೆ. ಇನ್ನು ಜಿಲ್ಲಾ ನ್ಯಾಯಾಲಯಗಳಲ್ಲಿ ಎರಡು ಕೋಟಿ ಕೇಸುಗಳು ಪೆಂಡಿಂಗ್ ಇವೆ. ಕೋಟ್ಯಂತರ ಜನರು ನ್ಯಾಯಕ್ಕಾಗಿ ಕಾದುಕೂತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸುಪ್ರೀಂಕೋರ್ಟ್ ವ್ಯಾಪ್ತಿಗೆ ಬರದೆ ಇರುವ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರೀಯತೆ, ದೇಶಭಕ್ತಿ ಇತ್ಯಾದಿಗಳಿಗೆ ಗೌರವ ತೋರುವುದನ್ನು ಕಡ್ಡಾಯಗೊಳಿಸಿರುವುದು ಸೋಜಿಗವಾಗಿದೆ.

ಚಿತ್ರಮಂದಿರ ತರಹದ ರಂಜನೆಯ ಸ್ಥಳದಲ್ಲಿ ಇದನ್ನು ಕಡ್ಡಾಯಗೊಳಿಸಿರುವುದು ಕುತೂಹಲಕಾರಿಯಾಗಿದೆ. ರಂಗಮಂದಿರಗಳಲ್ಲಿ ಯಾಕೆ ಬೇಡ? ಸರ್ಕಾರಿ ಕಚೇರಿಗಳಲ್ಲೂ ಯಾಕೆ ರಾಷ್ಟ್ರಗೀತೆಯನ್ನು ಕಡ್ಡಾಯ ಗೊಳಿಸಬಾರದು? ದೇವಸ್ಥಾನ, ಮಸೀದಿ, ಚರ್ಚು, ಗುರುದ್ವಾರ, ಮಠಗಳಲ್ಲಿ ಯಾಕಿಲ್ಲ? ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಏರ್‌ಪೋರ್ಟ್‌ಗಳಲ್ಲೂ ಮೊಳಗಿಸ ಬಾರದೇಕೆ? ಟಿವಿ ಚಾನೆಲ್‌ಗಳಲ್ಲೂ ಪ್ರತಿ ಕಾರ್ಯಕ್ರಮದ ಮುನ್ನ ಮೊಳಗಿಸುವುದು ಸೂಕ್ತವಲ್ಲವೇ? ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಚಿಕಿತ್ಸೆ ಸೂಚಿಸುವ ಮುನ್ನ ಅಥವಾ ಶಸ್ತ್ರಚಿಕಿತ್ಸೆ ಪ್ರಾರಂಭಿಸುವ ಮುನ್ನ ರಾಷ್ಟ್ರಗೀತೆ ಮೊಳಗಿಸಿದರೆ ಭಾರತ ಎಂತಹ ಮಹಾನ್ ದೇಶ ಎಂಬ ಅರಿವು ಎಲ್ಲರಿಗೂ ಆಗುತ್ತದಲ್ಲವೇ? ಈಗ ಹವಾನಿಯಂತ್ರಿತ ಕಟ್ಟಡಗಳಲ್ಲಿ ಕೆಲಸ ಮಾಡುವ ಟೆಕ್ಕಿಗಳಿಗೆ ದೇಶದ ಆಗುಹೋಗುಗಳ ಅರಿವು ಹೆಚ್ಚಾಗಿ ಇಲ್ಲದಿರುವ ಕಾರಣ ಅವರಲ್ಲೂ ದೇಶದ ಬಗ್ಗೆ ಆಸಕ್ತಿ ಮೂಡಿಸಲು ಪ್ರತಿ ದಿನದ ಕೆಲಸ ಪ್ರಾರಂಭಿಸುವ ಮುನ್ನ ರಾಷ್ಟ್ರಗೀತೆಯನ್ನು ಕಡ್ಡಾಯಗೊಳಿಸಿದರೆ ಸೂಕ್ತವಲ್ಲವೇ? ಈಗ ಬ್ಯಾಂಕ್ ಮತ್ತು ಎಟಿಎಂಗಳ ಮುಂದೆ ಜನ ಸಾಲುಗಟ್ಟಿ ನಿಂತಿರುವಾಗ ಅವರು ಅಲ್ಲಿ ಬೇಸರಗೊಳ್ಳದೆ ರಾಷ್ಟ್ರಗೀತೆಯನ್ನು ಹಾಡಿದರೆ ಅನಾಣ್ಯೀಕರಣ ಎಷ್ಟು ಸೂಕ್ತವಾದ ಕ್ರಮ ಎಂದು ಅವರೆಲ್ಲರಿಗೆ ಮನದಟ್ಟಾಗುತ್ತದೆ ಯಲ್ಲವೇ? ಭಾರತೀಯರೆಲ್ಲರೂ ಹೀಗೆ ಏನನ್ನೇ ಮಾಡುವ ಮುನ್ನ ರಾಷ್ಟ್ರಗೀತೆಗೆ ಗೌರವ ತೋರಿಸಿದರೆ ನಮ್ಮ ಮಾತೃಭೂಮಿ ತಂತಾನೆ ಉದ್ಧಾರವಾಗುತ್ತದಲ್ಲವೇ?

ಅಂದಹಾಗೆ, ನಮ್ಮ ಸಂಸತ್ತು ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಪ್ರತಿ ಅಧಿವೇಶನ ಪ್ರಾರಂಭವಾದಾಗ ರಾಷ್ಟ್ರಗೀತೆಯನ್ನು ಮೊಳಗಿಸಲಾಗುತ್ತದೆ. ಆದರೆ ಇವತ್ತು ದೇಶದಾದ್ಯಂತ ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆಯನ್ನು ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟಿನಲ್ಲಿ ಅದೇ ರಾಷ್ಟ್ರಗೀತೆಯನ್ನು ಒಮ್ಮೆಯೂ ಮೊಳಗಿಸುವುದಿಲ್ಲ. ಆಚಾರ ಹೇಳೋಕೆ, ಬದನೆಕಾಯಿ ತಿನ್ನೋಕೆ ಎಂಬ ನೀತಿ ನಮ್ಮ ಸುಪ್ರೀಂ ಕೋರ್ಟಿನದಾ ಎಂದು ಪ್ರಶ್ನಿಸದೆ ವಿಧಿ ಇಲ್ಲ!

(ಇಲ್ಲಿರುವ ಕೆಲವು ವಿಷಯಗಳನ್ನು ನ್ಯೂಸ್ ಲಾಂಡ್ರಿಯ 'ವೈ ಸೋ ಸೀರಿಯಸ್' ಎಂಬ ಕಾರ್ಯಕ್ರಮದಿಂದ ಪಡೆಯಲಾಗಿದೆ) ■



• ಗೌರಿ ಲಂಕೇಶ್
editorlankesh@gmail.com

ಧರೆಗೆ ದೊಡ್ಡವರೆಂದರೆ ಇವರೆಯಂತಲ್ಲಾ

ಥೂತ್ತೇರಿ

► ಯಾಹೂ

ಚಾತುರ್ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣ ಬುದ್ಧಿಯ [illegible]ಕೇತ. ತನ್ನ ಜ್ಞಾನ ಬಲದಿಂದಲೇ ಆತ ಭಾರತವನ್ನು [illegible]ಳಿಗಿದವನು. ಆ ಸುವರ್ಣ ಯುಗದಿಂದ ಮಾತ್ರ ಎಲ್ಲರ [illegible]ದ್ಧಾರ ಸಾಧ್ಯ. ಅಂತಹ ಸಮಾಜವನ್ನು ಮುಂದುವರಿ[illegible]ಣ. ಅದಕ್ಕಾಗಿ ಎಲ್ಲರೂ ಭಿನ್ನಾಭಿಪ್ರಾಯಗಳನ್ನು ಬಿಟ್ಟು [illegible]ಹೋರಾಡೋಣ ಎಂದು ಬೆಳಗಾವಿಯಲ್ಲಿ ಸೇರಿದ್ದ ಬ್ರಾಗಳ [illegible]ಯಲ್ಲಿ ಕೇಂದ್ರ ಸರಕಾರದ ಮಂತ್ರಿಯೊಬ್ಬ ಹೇಳಿದ್ದಾನಲ್ಲಾ. [illegible]ಗೆ ಭಾರತದ ತುಂಬ ಹರಡುತ್ತಿರುವ ಚೆಡ್ಡಿಗಳ [illegible]ಘೋಷಿತ ಅಜೆಂಡ ಅನಾವರಣಗೊಂಡಂತಾಗಿದೆಯಲ್ಲ.

ಮತ್ತೊಬ್ಬ ಕರ್ನಾಟಕದ ಮಂತ್ರಿ ಬ್ರಾಗಳು ದೇಶದ [illegible]ಸತ್ತು, ಅವರಿಂದಲೇ ದೇಶ ಸ್ವಾತಂತ್ರ್ಯ ಪಡೆದದ್ದು, [illegible]ದ ಅಭಿವೃದ್ಧಿಯಲ್ಲಿ ಅವರದೇ ಸಿಂಹಪಾಲು. ದೇಶದ ಅಭಿವೃದ್ಧಿಯೇ ಅವರಿಂದ ನಡೆಯುತ್ತಿದೆ ಎಂದು [illegible]ಬಿದ್ದಾನಲ್ಲಾ. ಇಂತಹ ಅಜ್ಞಾನಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿಗಳಾಗಿರುವುದೇ ಒಂದು [illegible]ಂತವಂತಲ್ಲಾ, ಥೂತ್ತೇರಿ!

* * *

ಒಬ್ಬ ಹಲ್ಲುಬೀರ ನಮ್ಮ ಜ್ಞಾನದಿಂದಲೇ ದೇಶ [illegible]ಗುತ್ತಿರುವುದು ಎನ್ನುತ್ತಾನೆ. ಹಾಗಾದರೆ ಈತನ ಜ್ಞಾನ [illegible]ಮಟ್ಟ್ಯಸದು ಎಂದರೆ ಈತನ ಜ್ಞಾನದ ಉಪಯೋಗದ [illegible] ಸೂತ್ರಗಳಲ್ಲೂ ದೇಶವನ್ನೇ ಬಾಳೆಎಲೆ ಮಾಡಿಕೊಂಡು [illegible] ಸೂತ್ರ ಅಡಗಿದ್ದವು. ಈತನ ಜ್ಞಾನದಿಂದ [illegible] ಸುಧಾರಣೆಗಳು ಸಾಮಾಜಿಕವಾಗಿ [illegible]ಯೆಂದರೆ ಮಲ ಹೊರುವ ಪದ್ಧತಿ ಈತನ [illegible]ಗೆ ಗೌರವಯುತವಾದ ಸ್ಥಾನ ಪಡೆದಿದೆ. ಊರ [illegible] ಉಳಿದ ಕಟ್ಟಕಡೆ ಜನರಿಗೆ ಈತ ಹೇಳುವ [illegible] ಯಾವುದೆಂದರೆ "ನೀವು ದೃಢವಾಗಿ ನಿಲ್ಲಿ, ಈ [illegible] ಅದಿಗಲ್ಲ ನೀವು. ಒಂದು ಜ್ಞಾನಾಧಾರಿತ ಸಮಾಜ [illegible]ಬೇಕಾದರೆ ನೀವು ನಿಮ್ಮ ನಿಮ್ಮ ಜಾಗದಲ್ಲಿ ದೃಢವಾಗಿ ನಿಲ್ಲಬೇಕು" ಎಂಬುದು. ಹೀಗೆ ಹೇಳಿಕೊಂಡೇ ಬಂದ ಈ ನರಿಗಳ ಹುನ್ನಾರಿನಲ್ಲಿ ಜಾತಿರಹಿತ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯವೇ, ಥೂತ್ತೇರಿ!!

* * *

ಜ್ಞಾನವೇ ಪ್ರಧಾನವೆಂದು ಹೇಳಿಕೊಂಡೇ ಭೋಜನಪ್ರಿಯ ಸಮೂಹವೊಂದನ್ನು ಸೃಷ್ಟಿಸಿದ ಈ ಅಜ್ಞಾನಿಗೆ ಅಂಬೇಡ್ಕರ್ ಜ್ಞಾನ ಜ್ಞಾನವೇ ಅಲ್ಲ. ಅದಕ್ಕಾಗಿ ಈತನ ರಾಷ್ಟ್ರೋತ್ಥಾನ ಸಾಹಿತ್ಯದಲ್ಲಿ ಅಂಬೇಡ್ಕರ್ ಬಗ್ಗೆ ಒಂದೇ ಒಂದು ಸಾಲೂ ಇಲ್ಲ. ಅಂದರೆ ಜ್ಞಾನ ಬ್ರಾಗಳಿಂದ ಮಾತ್ರ ಹರಿಯಬೇಕು. ಭೋಜನ ಪಾರ್ಟಿಯಲ್ಲಿ ಹೀಗೆ ಹೊಂಚುಹಾಕಿ ಕುಳಿತಿರುವ ಈತನ ಕುತಂತ್ರದಿಂದಲೇ ಕರ್ನಾಟಕದ ಎರಡು ಕೋಡು ಮುರುಕ ಹೋರಿಗಳು ಪುನಃ ಗುದ್ದಾಟಕ್ಕೆ ಬಿದ್ದಿವೆ. ಒಂದು ಜಾತಿಯೇ ಇಲ್ಲವೆಂದು ಸಾರಿಹೋದ ಕನಕದಾಸನ ಸಮುದಾಯಕ್ಕೆ ಸೇರಿದರೆ ಮತ್ತೊಂದು ಬಸವ ಧರ್ಮಕ್ಕೆ ಸೇರಿದ್ದು. ಒಂದು ಜಾತಿ ಅನಿಷ್ಟದಿಂದ ಅಂದರೆ ಜಾತಿ ಎಂಬ ಮೂಢನಂಬಿಕೆಯಿಂದಾಗುವ ಅನಾಹುತ ಹೇಳಬೇಕಿತ್ತು, ಮತ್ತೊಂದು ಕಾಯಕ ದಾಸೋಹ, ಲಿಂಗಪೂಜೆ ಹೇಳಬೇಕಿತ್ತು. ಆದರೆ ಅವುಗಳು ದುಡಿಯುತ್ತಿರುವ ಪಾರ್ಟಿಯಲ್ಲಿ ಅದಾವುದಕ್ಕೂ ಸ್ಥಾನವಿಲ್ಲ. ಅಲ್ಲೇನಿದ್ದರೂ ಜ್ಞಾನದ ವಕ್ತಾರನಾದ ಹಲ್ಲುಬೀರನ ಅಜೆಂಡಾವೇ ಅಂತಿಮವಂತಲ್ಲಾ, ಥೂತ್ತೇರಿ!!

* * *

ಬೆಳಗಾವಿಯಲ್ಲಿ ಬ್ರಾಗಳು ಸೇರಿ, ಚಾತುರ್ವರ್ಣ ಸಮಾಜದ ಸದೃಢತೆಗೆ ಸಂಚು ರೂಪಿಸುತ್ತಿರುವಾಗಲೇ ಈ ಹಿಂದೂ ಧರ್ಮದ ಕಟ್ಟಕಡೆ ಸದೃಢ ಜನಗಳಾದ ಮಾದಿಗರು ಸಮಾವೇಶ ಮಾಡಿ "ನಮಗೆ ಬೇರೆಯದೇ ಆದ ಮೀಸಲಾತಿ ಬೇಕು" ಎಂದು ಹಟ ಹಿಡಿದರಂತಲ್ಲಾ. ಇವರಿಗ್ಯಾವ ಮೀಸಲು ಬೇಕು ಎಂದು ಕರ್ನಾಟಕದ ಜನ ತಲೆ ಕೆರೆಯುವಾಗ, ಈವರೆಗೆ ಇದ್ದ ಸಂವಿಧಾನಬದ್ಧ ಮೀಸಲಾತಿಯನ್ನ ಹರಿಜನರೇ ಗಬರಿಕೊಂಡಿದ್ದಾರಂತಲ್ಲಾ. ರಾಜಕೀಯವಾಗಿ ಮೀಸಲು ಸ್ಥಾನಗಳನ್ನೆಲ್ಲಾ ಆಕ್ರಮಿಸಿಕೊಂಡು, ಶೈಕ್ಷಣಿಕವಾಗಿ ಸವಲತ್ತುಗಳನ್ನು ಕಬಳಿಸುತ್ತಾ ಬಂದ ಹರಿಜನರು ಅತ್ತ ಮಾದಿಗರ ಕಡೆ ತಿರುಗಿಯೂ ನೋಡಿಲ್ಲವಂತಲ್ಲಾ. ಮಾದಿಗ ಎಂದರೆ ಯಾರು? ಮಹಾ ಆದಿಗ. ಕನ್ನಡದ ಮೂಲ ಪುರುಷರು. ಅವರಿಗೆ ದಕ್ಕಬೇಕಾದುದನ್ನು ಅವರಿಗಿಂತ ಮೇಲಿನವರು ಕಬಳಿಸಿದ ಫಲವಾಗಿ, ಇಷ್ಟು ವರ್ಷಗಳ ನಂತರ ತಮ್ಮ ಪಾಲು ತಮಗಿರಲಿ ಎಂದು ಕೂಗುತ್ತಿರುವುದು ನ್ಯಾಯವಲ್ಲವೆ. ಹಾಗೇ ನೋಡಿದರೆ, ದೇವಸ್ಥಾನದ ಒಳಗೇ ಪಾಕಶಾಲೆ ನಿರ್ಮಿಸಿಕೊಂಡು, ಸಮಯಕ್ಕೆ ಸರಿಯಾಗಿ ಭೋಜನ ಬಾರಿಸುತ್ತ, ಕಲೆ, ಸಾಹಿತ್ಯ, ಸಂಗೀತ, ಗೀತಾವಾಚನ ಮತ್ತು ಪುರಾಣ ಪುಣ್ಯಕತೆ ಸೃಷ್ಟಿಸುತ್ತ ಬಂದ ಜನರೊಂದು ಕಡೆ ಜಮಾವಣೆಯಾಗಿ, ಅಂತಹ ಸ್ಥಿತಿ ಮುಂದುವರಿಕೆಗೆ ಹಾತೊರೆಯುವ ಸಮಯದಲ್ಲೇ ಊರ ಹೊರಗಿದ್ದು, ಹಿಂದೂ ಧರ್ಮದ ಎಲ್ಲ ಅನಿಷ್ಟಗಳನ್ನು ಸಹಿಸಿಕೊಂಡು, ಹರಿಜನರಿಂದಲೇ ಶೋಷಣೆ ಅನುಭವಿಸಿ, ಈಗ ಪಾಲಿಗೆ ಕೂತ ಮಾದಿಗರು ನಿಜಕ್ಕೂ ಧರೆಗೆ ದೊಡ್ಡವರಂತಲ್ಲಾ, ಥೂತ್ತೇರಿ!!

* * *

ಇತ್ತ ರಾಜಕಾರಣದ ಸುದ್ದಿ ಶಾನೆ ರಾಸಲೀಲೆಯಿಂದ ಕೂಡಿದೆಯಂತಲ್ಲಾ. ಅಬಕಾರಿ ಸಚಿವರಾದ ಮೇಟಿಯವರು ಯಾರೋ ಲಿಕ್ಕರ್ ಕುಳ ತಂದು ಕೊಟ್ಟ ಗುಂಡು ಸೇವನೆಯ ನಂತರ ದೈಹಿಕವಾಗಿ ಕಾವೇರಿ, ಅದರ ಫಲವಾಗಿ ಯಾರೋ ಹೆಣ್ಣು ಮಗಳ ಮೇಲೆ ಬಿದ್ದರಂತಲ್ಲಾ. ಇಂತಹ ದೃಶ್ಯಗಳ ಫಲಾನುಭವಿಗಳು ಅದನ್ನ ಸೆರೆ ಹಿಡಿದು ಬ್ಲಾಕ್‌ಮೇಲ್ ಮಾಡತೊಡಗಿದ್ದಾರಂತಲ್ಲಾ. ಮೇಟಿಯ ಮುಗ್ಧತೆ ಬಗ್ಗೆ ಅರಿವಿರುವ ರಾಯರೆಡ್ಡಿ "ಅವರಿಗಾಗಲೇ ಎಂಬತ್ತು ವರ್ಷ ವಯಸ್ಸಾಗಿದೆ. ಈ ಅವಧಿಯಲ್ಲಿ ಅವರಿಂದ ಯಾವ ರಾಸಲೀಲೆ ಸಾಧ್ಯ?" ಎಂಬ ಅಭಿಪ್ರಾಯವನ್ನು ತೇಲಿಬಿಟ್ಟಿರುವಾಗಲೇ, ಅತ್ತ ಕಾಗೋಡು ತಿಮ್ಮಪ್ಪನವರು "ಇದರಲ್ಲೇನೋ ಮೋಸವಿದೆ" ಎಂದಿದ್ದಾರಂತಲ್ಲಾ. ಮೇಟಿ ಕಂಡರಾಗದವರು ಇದೆಲ್ಲಾ ನೀರ್‌ದೋಸೆ ಸಿನಿಮಾ ಪ್ರಭಾವ. ಲೈಂಗಿಕ ಉದ್ದೀಪನಕ್ಕೆ ಬೇಕಾದ ಸಾಮಗ್ರಿಗಳೆಲ್ಲಾ ಸಿಗುತ್ತಿರುವ ಈ ಸಮಯದಲ್ಲಿ ಏನನ್ನು ಹೇಳಲು ಬರುವುದಿಲ್ಲ. ಈ ಹಿಂದೆ ಮಾಜಿ ಮುಖ್ಯಮಂತ್ರಿಯೊಬ್ಬ ವಿಧಾನಸೌಧದ ತನ್ನ ಕೊಠಡಿಯ ಆಂಟಿ ಚೇಂಬರಿನಲ್ಲೇ ಕನ್ನೆಯೊಬ್ಬಳನ್ನು ಕೂಡಿದ್ದನಂತೆ. ವಯೋವೃದ್ಧನ ಲೈಂಗಿಕ ಸಾಮರ್ಥ್ಯಕ್ಕೆ ಬೆರಗಾದ ಆ ಕನ್ಯೆ ಮದುವೆಯಾಗದೆ ಹಾಗೇ ಉಳಿದಳಂತೆ. ಈ ಕತೆಯೂ ಕೂಡ ಭಾರತವನ್ನ ಜ್ಞಾನಾಧಾರಿತವಾಗಿ ನಿರ್ಮಿಸಲು ಹೊರಟ ಬ್ರಹ್ಮಜ್ಞಾನಿಯಿಂದಲೇ ಹೊರಬಿದ್ದಿತಂತೆ. ಅದೇನಾದರಾಗಲಿ ಮೇಟಿ ಕತೆಯೂ ಮುಗಿಯಿತಲ್ಲಾ, ಥೂತ್ತೇರಿ!!!


* * *

ಪ್ರಾಣ ಹೋದರೂ ಬ್ರಾಗಳೆಂದೂ ತಮ್ಮ ಹಟ ಬಿಡಲಾರರು ಎಂಬುದಕ್ಕೆ ತಾಜಾ ಉದಾಹರಣೆಯೊಂದು ಶ್ರೀರಂಗಪಟ್ಟಣದ ಕಾವೇರಿ ತಟದಿಂದ ಹೊರಬಿದ್ದಿದೆಯಲ್ಲಾ.


ಕನ್ನಡದ ಮಣ್ಣಿನ ಮಗಳಾದ ಜಯಲಲಿತಾ, ತಮಿಳುನಾಡಿನ ಸಮುದ್ರ ತೀರದ ಮಣ್ಣಲ್ಲಿ ಮಲಗಿದ್ದನ್ನು ಸಹಿಸಲಾಗದ ಕೆಲ ಅಯ್ಯಂಗಾರಿಗಳು ಆಕೆಯ ಪ್ರತಿಕೃತಿಯನ್ನು ದರ್ಬೆಯಿಂದ ಮಾಡಿ, ಅದನ್ನು ಸುಟ್ಟು ವೇದಘೋಷ ಕೂಗಿಕೊಂಡು ವೈಷ್ಣವ ಪದ್ಧತಿಯಂತೆ ಸಂಸ್ಕಾರ ಮಾಡಿದವಂತಲ್ಲಾ. ಬದುಕಿದ್ದಾಗ ಆಕೆಯ ಹತ್ತಿರಕ್ಕೂ ಹೋಗದ ಈ ಯಾಚಕ ಮಹಾಶಯರನ್ನು, ಜಯಲಲಿತಾ ಯಾಕೆ ದೂರ ಇಟ್ಟಿದ್ದಳು ಎಂಬುದಕ್ಕೆ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ನಡೆಸಿದ ಅಣುಕು ಪ್ರದರ್ಶನ ಸಾಕ್ಷಿಯಾಗಿದೆಯಲ್ಲಾ.

ಅನಾದಿಕಾಲದಿಂದಲೂ ಮನುಷ್ಯನ ಅಂತ್ಯ ಮಣ್ಣು ಸೇರುತ್ತಲೇ ಬಂದಿದೆ. ಅದು ನಿಸರ್ಗದಲ್ಲಿ ನಡೆಯುವ ಸಹಜವಾದ ಸಂಸ್ಕಾರ. ಆದರೆ ಚಿತಾಗ್ನಿ ಸಂಸ್ಕಾರ ಯಾವಾಗ ಯಾರಿಂದ ಬಂತೊ ಏನೊ. ಸತ್ತ ಮನುಷ್ಯನನ್ನು ಸುಡುವುದು ಈ ಆಧುನಿಕ ಜಗತ್ತಿನಲ್ಲಿ ತುಂಬ ದುಬಾರಿ ಮತ್ತು ಹೊಸದ ಮಾಲಿನ್ಯ ಹಾಗು ನಾಶದಿಂದ ಕೂಡಿದ ಆಚರಣೆ. ಅದ್ದರಿಂದ ಮನುಷ್ಯ ಮಣ್ಣಿಗೋಗುವುದೇ ಸಹಜ ಧರ್ಮ. ಇದೆಲ್ಲ ಒತ್ತಟ್ಟಿಗಿರಲಿ ಜಯಲಲಿತಾಳ ಶರೀರ ಮಣ್ಣಲ್ಲಿ ಮಲಗಿರುವಾಗಲೇ ಇತ್ತ ದರ್ಬೆ ಸುಟ್ಟು ತಮ್ಮ ಸೇಡಿನ ಧರ್ಮಪಾಲನೆ ಮಾಡಿದ ಜಯಲಲಿತಾಳ ಸಂಬಂಧಿಗಳದು ಹಾಸ್ಯಾಸ್ಪದ ಕ್ರಿಯೆಯಾಗಿದೆಯಂತಲ್ಲಾ, ಥೂತ್ತೇರಿ!! ■


ಬೈಂದೂರು: ಶಾಸಕ ಪೂಜಾರಿಯ ಅಕ್ರಮ-ಸಕ್ರಮ-ಅಕ್ರಮ ಆ



ಗೋಪಾಲ ಪೂಜಾರಿ- ಶಾಸಕ ಬೈಂದೂರು



ಲ್ಯಾಂಡ್ ಫೋಟೋ



ವಿಜಯಕುಮಾರ್ ಶೆಟ್ಟಿ


ಬೈಂದೂರು ಶಾಸಕ ಗೋಪಾಲ ಪೂಜಾರಿಯ ನಿತ್ಯ ನೂತನ ಗೋಲ್‌ಮಾಲ್ ಅಬ್ಬರಕ್ಕೆ ಇಡೀ ಅಸೆಂಬ್ಲಿ ಕ್ಷೇತ್ರವೇ ಕಕ್ಕಾಬಿಕ್ಕಿಯಾಗಿ ಕೂತಿದೆ. ಅವಾಂತರ-ಅಕ್ರಮ-ಅವ್ಯವಹಾರ-ಅನ್ಯಾಯಗಳೇ ಶಾಸಕತ್ವದ ಆದ್ಯ ಕರ್ತವ್ಯ ಎಂಬಂತೆ ಅಂಧಾ ದರ್ಬಾರು ನಡೆಸುತ್ತಿರುವ ಎಮ್ಮೆಲ್ಲೆ ಗೋಪು ಈ ಭ್ರಷ್ಟಾಚಾರದ ಕೇಸಲ್ಲಿ ಬಿದ್ದು ಒದ್ದಾಡುತ್ತಿರುವುದು ಮೋಜಾಗಿದೆ! ಮೂಲತಃ ಹೋಟೇಲು ಉದ್ಯಮಿಯಾದ ಈತ ರಾಜಕಾರಣವನ್ನೂ ದಂಧೆಯಾಗಿಸಿಕೊಂಡು ವ್ಯಾಪಾರಿ ತಂತ್ರಗಾರಿಕೆಯಿಂದ ನಿಭಾಯಿಸಲು ಹವಣಿಸಿ ಎಡವಿಬಿದ್ದು ನಗೆಪಾಟಲಿಗೀಡಾಗಿದ್ದಾರೆ. ಹಣದ ಹಪಾಹಪಿಯ ಶಾಸಕ ಗೋಪು ಎದುರು ಕಂಡದ್ದೆಲ್ಲ ನುಂಗಿ ನೊಣೆಯುತ್ತಿದ್ದರೆ, ಆತನ ಹಿಂಬಾಲಕರು ಬಾಸ್‌ನ ದೌರ್ಬಲ್ಯ ಬಳಸಿಕೊಂಡು ಬಕಾಸುರರಂತಾಗಿ ಹೋಗಿದ್ದಾರೆ.

ಎಮ್ಮೆಲ್ಲೆಯಾಗಿ ನಾಲ್ಕು ಬಾರಿ ಗೆದ್ದಿರುವ ಗೋಪುಗೆ ನಾಲ್ಕಾಣೆಯಷ್ಟೂ ಜನಪರ ರಾಜಕಾರಣದ ಗಂಧಗಾಳಿಯೇ ಇಲ್ಲ! ಸದಾ ದೋನಂಬರ್ ವ್ಯವಹಾರಸ್ಥರು ಮತ್ತು ಸರ್ಕಾರಿ ಕಾಮಗಾರಿ ಮಾಡುವ ಕಳ್ಳ ಕಂಟ್ರಾಕ್ಟರ್‌ಗಳ ಗುಂಪು ಗೋಪು ಸುತ್ತ ಗಿರಕಿ ಹೊಡೆಯುತ್ತಿರುತ್ತದೆ. ಐತಿಹಾಸಿಕ ಹೆಮ್ಮಾಡಿ ಹೈಸ್ಕೂಲ್ ಆಪೋಷನ ಪಡೆದ ಈ ಎಮ್ಮೆಲ್ಲೆ ಸಾಹೇಬನ ಕ್ಷೇತ್ರದ ಉದ್ದಗಲಕ್ಕೆ ಆಗಿರುವ ಸರ್ಕಾರಿ ಕಾಮಗಾರಿಗಳಲ್ಲಿ ಬಹಳಷ್ಟು ಬರೀ ಕಾಗದದಲ್ಲಷ್ಟೇ ಮುಗಿದಿದೆ. ಶಾಸಕ ದೊರೆಗೆ ಅನೂಚಾನಾಗಿ ಕಪ್ಪ ಒಪ್ಪಿಸುವ ಗುತ್ತಿಗೆದಾರರ ಮಾಫಿಯಾ ಕೊಲ್ಲೂರು ದೇವಳದ ಧರ್ಮದರ್ಶಿ ಮಂಡಳಿ ಮೇಲೆ ಕಣ್ಣು ಹಾಕಿ ಹಾರಾಡಿದ್ದು ದೊಡ್ಡ ಭಾನ್ಗಡಿಯಾಗಿಬಿಟ್ಟಿದೆ.

ಭೂರಹಿತರಿಗೆ ಅಕ್ರಮ-ಸಕ್ರಮದಲ್ಲಿ ಭೂಮಿ ಮಂಜೂರಿ ಮಾಡುವ ರಾಜಕಾರಣ ಬೈಂದೂರಲ್ಲಿ ಐ.ಎಂ. ಜಯರಾಮಶೆಟ್ಟರ ಕಾಲದಿಂದಲೂ ನಡೆದುಕೊಂಡು ಬಂದಿದೆಯಾದರೂ ಈ ಬನಾವಟಿಯಲ್ಲಿ ಗೋಪುಗೆ ಎದ್ದು ಕಾಣುವಷ್ಟು ದೊಡ್ಡದಾದ ಕಳಂಕ ಮೆತ್ತಿಕೊಂಡಿದೆ! ಅಕ್ರಮ-ಸಕ್ರಮದಲ್ಲಿ ಭರ್ಜರಿ ಅಕ್ರಮ ಮಾಡಿದ ಸಾಧನೆ ಗೋಪುನದು. ಅಕ್ರಮ-ಸಕ್ರಮ ಮಾಡುವುದಕ್ಕೊಂದು ಕ್ರಮವಿದೆ; ನೀತಿ-ನಿಯಮವಿದೆ. ಒಂದಿಷ್ಟು ಷರತ್ತು ಇದೆ. ಇದೆಲ್ಲ ಬುದ್ಧಿಪೂರ್ವಕವಾಗೇ ಎಮ್ಮೆಲ್ಲೆ ಗೋಪು ಕಡೆಗಣಿಸಿ ತನ್ನ ಚೇಲಾಗಳಿಗೆ ಬೇಕಾಬಿಟ್ಟಿಯಾಗಿ ಸರ್ಕಾರಿ ಭೂಮಿ ಹಂಚಿದ್ದಾರೆ.

ಎಮ್ಮೆಲ್ಲೆ ಗೋಪುನೇ ಅಕ್ರಮ-ಸಕ್ರಮ ಕಮಿಟಿ ಅಧ್ಯಕ್ಷ. ಆತನ ಆಜ್ಞೆ ಮೀರದ ಅನುಯಾಯಿಗಳು ಸದಸ್ಯರು. ತಹಸೀಲ್ದಾರ್‌ಗಳು ನಾಮಕಾವಾಸ್ತೆ. ಕುಂದಾಪುರದಲ್ಲಿ ತಹಶೀಲ್ದಾರ್ ಆಗಿದ್ದ ದುಡ್ಡಿನ ದಾಹದ ಗಾಯತ್ರಿ ನಾಯಕ್ ಶಾಸಕ ಗೋಪುನ ಒಳ ಆಸೆ ಈಡೇರಿಸುವ ಸೋಗಿನಲ್ಲಿ ತನಗೊಂದು ದೊಡ್ಡ ಪಾಲು ಪಡೆದುಕೊಂಡಿದ್ದಾರೆ. ಹಣವಿಲ್ಲದೆ ಯಾವ ಕೆಲಸವನ್ನೂ ಮಾಡದ ಗಾಯತ್ರಿಯಮ್ಮ ಜಿಲ್ಲಾ ಮಂತ್ರಿಯಾಗಿದ್ದ ವಿನಯಕುಮಾರ್ ಸೊರಕೆಗೂ ಪರಮಾಪ್ತಳೇ ಆಗಿದ್ದಳು. ಕುಂದಾಪುರದ ಎಡಬಿಡಂಗಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯೂ ಈ ಗಾಯತ್ರಿ ನಾಯಕ್ ನುಂಗಾಟ ಕಂಡೂಕಾಣದಂತಿದ್ದರು. ಹೀಗಾಗಿ ಕುಂದಾಪುರದಲ್ಲಿದ್ದಷ್ಟು ದಿನವೂ ಗಾಯತ್ರಿಯಮ್ಮ ಸುಗ್ಗಿಹಬ್ಬ ಆಚರಿಸಿಯೇ ಹೋಗಿದ್ದಾರೆ. ಈಯಮ್ಮ ಗೋಪುನ ಅಕ್ರಮ-ಸಕ್ರಮ-ಅಕ್ರಮ ಆಟದ ಕ್ಯಾಪ್ಟನ್ ಎಂದೇ ಹೆಸರುವಾಸಿಯಾಗಿದ್ದಾರೆ! ಶಾಸಕರಾದ ಹಾಲಾಡಿ-ಗೋಪುರ ಲ್ಯಾಂಡ್ ಬಿಸ್ನೇಸ್‌ನ ಭೂಪರಿವರ್ತನೆಗೆ ಈಕೆ ರಹಸ್ಯವಾಗಿ ಸಹಕರಿಸಿದ ಸಾಹಸ ಜನಜಿತ.

ಶಾಸಕ ಗೋಪು ಹಾಗು ತಹಸೀಲ್ದಾರ್ ಗಾಯತ್ರಿ ನಾಯಕ್ ಬುದ್ಧಿಪೂರ್ವಕವಾಗೇ ಅಕ್ರಮವಾಗಿ ಕಬ್ಜಾ ಮಾಡಿಕೊಂಡಿದ್ದ ಭೂಮಿಯನ್ನು ಸಕ್ರಮವಾಗಿಸಿ ಮಂಜೂರಿ ಕೊಡುವಾಗ ಎಲ್ಲಾ ಕಾನೂನುಕಟ್ಟಳೆ ಧಿಕ್ಕರಿಸಿ ಕಮಾಯಿ ಮಾಡಿದ್ದಾರೆಂಬುದು ಕುಂದಾಪುರದಲ್ಲಿ ಟಾಕ್ ಆಫ್ ದ ತಾಲ್ಲೂಕ್. ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿರುವಾತ ಕನಿಷ್ಠ ಹದಿನೈದು ವರ್ಷ ಅಲ್ಲಿ ಉತ್ತು-ಬಿತ್ತು ಬೆಳೆ ತೆಗೆದಿರಬೇಕು. ಅದು ಕೃಷಿಗಾಗಷ್ಟೇ ಬಳಕೆಯಾದ ಜಾಗವಾಗಿರಬೇಕು; ವಾಣಿಜ್ಯ ಉದ್ದೇಶಕ್ಕೆ ಬಳಕೆಯಾಗಿದ್ದರೆ ಅಂಥ ಜಾಗ ಅಕ್ರಮ-ಸಕ್ರಮ ನಿಯಮದಲ್ಲಿ ಮಂಜೂರಿ ಮಾಡುವಂತಿಲ್ಲ. ಒಬ್ಬರಿಗೆ ನಾಲ್ಕು ಎಕರೆಗಿಂತ ಹೆಚ್ಚು ಭೂಮಿ ಮಂಜೂರಿ ಮಾಡುವ ಹಾಗಿಲ್ಲ. ಈ ಷರತ್ತು-ನಿಯಮವನ್ನೆಲ್ಲ ಕಡೆಗಣಿಸಿ ಶಾಸಕ ಗೋಪು ಮತ್ತು ತಹಸೀಲ್ದಾರ್ ಗಾಯತ್ರಿ ನಾಯಕ್ ಹತ್ತಾರು ಎಕರೆ ಮೂಲ್ಕಿ ಜಮೀನು ಇರುವವರಿಗೆ, ಒಂದೇ ಮನೆಯ ಇಬ್ಬಬ್ಬರಿಗೆ, ಗಂಡ-ಹೆಂಡತಿಗೆಲ್ಲ ಸರ್ಕಾರಿ ಭೂಮಿ ಬಳುವಳಿಯಾಗಿ ನೀಡಿದ್ದಾರೆ. ಅಕ್ರಮ-ಸಕ್ರಮ ಕಮಿಟಿಯ ಸದಸ್ಯರೇ ಅಕ್ರಮವಾಗಿ ಎಕ್ರೆಗಟ್ಟಲೆ ಭೂಮಿ ಹೊಡೆದುಕೊಂಡಿದ್ದಾರೆ.



ಡಾಕ್ಯುಮೆಂಟ್

ಕುಂದಾಪುರ ತಾಲ್ಲೂಕು ಪಂಚಾಯ್ತಿ ಸದಸ್ಯ ವಿಜಯಕುಮಾರ್ ಶೆಟ್ಟಿ ಸ್ಥಳೀಯ ಅಕ್ರಮ-ಸಕ್ರಮ ಕಮಿಟಿಯ ಸದಸ್ಯನೂ ಹೌದು. ಶಾಸಕ ಗೋಪುನ ಪರಮಾಪ್ತ ಬಂಟನಾದ ಈತ ತನ್ನ ಹೆಸರಿಗೆ ಮೂರ್ನಾಲ್ಕು ಎಕರೆ ಜಾಗ ಮಂಜೂರಿ ಮಾಡಿಸಿಕೊಂಡಿದ್ದಾನೆ. ಇಷ್ಟಕ್ಕೂ ಆತನ ಆಸೆ ತಣಿದಿಲ್ಲ. ಹೆಂಡತಿ ಜ್ಯೋತಿ ಹೆಸರಲ್ಲೂ ಮೂರ್ನಾಲ್ಕು ಎಕರೆ ಪಡೆದುಕೊಂಡಿದ್ದಾನೆ. 1999ರಿಂದ ಈತನ ಅಕ್ರಮ-ಸಕ್ರಮ ಭೂ ಬೇಟೆ ನಡೆಯುತ್ತ ಬಂದಿದೆ. ಹೆರಂಜಾಲದ ಸರ್ವೆ ನಂಬರ್ 94, 94/1, 94/2 ರಲ್ಲಿ ವಿಜಯಕುಮಾರ್- ಜ್ಯೋತಿ ಜೋಡಿ ಕಬಳಿಸಿರುವ ಭೂಮಿ ಹತ್ತಿರತ್ತಿರ ಏಳು ಎಕರೆಯಷ್ಟಾಗುತ್ತದೆ. ಈ ಬಾರಿ ಅಕ್ರಮ-ಸಕ್ರಮ ಕಮಿಟಿಯ ಕಾರ್ಯದರ್ಶಿ ಗಾಯತ್ರಿ ನಾಯಕ್ ಮತ್ತು ಅಧ್ಯಕ್ಷ-ಶಾಸಕ ಗೋಪು ಕೃಪೆಯಿಂದ ಹೆರಂಜಾಲದ ಸರ್ವೆ ನಂಬರ್ 94 ರಲ್ಲಿ 0.90 ಸೆಂಟ್ಸ್ ಮತ್ತು 94/2ರಲ್ಲಿ ಒಂದು ಎಕರೆ 21 ಸೆಂಟ್ಸ್ ಇನಾಮಾಗಿ ಬಂದಿದೆ.

ಈ ವಿಜಯಕುಮಾರ್ ಶೆಟ್ಟಿ ಅಕ್ರಮ-ಸಕ್ರಮದಲ್ಲಿ ಸರ್ಕಾರಿ ಭೂಮಿ ಪಡೆಯುವ ಯಾವ ಅರ್ಹತೆಯೂ ಇಲ್ಲದ ಪುಢಾರಿ. ಈತನ ಹೆಸರಿಗೆ ಸ್ವಂತ ಮೂಲ್ಕಿ ಭೂಮಿಯೇ ಎಂಟು ಎಕರೆಯಷ್ಟಿದೆ. ಈತನೇ ಹಾಕಿದ ಅರ್ಜಿಯಲ್ಲಿ ತಾನು ಸರ್ಕಾರಿ ಗುತ್ತಿಗೆದಾರನೆಂದು ಹೇಳಿಕೊಂಡಿದ್ದಾನೆ. ವಾರ್ಷಿಕ ಆದಾಯ ಲಕ್ಷಾಂತರ ಎಂದು ಘೋಷಿಸಿದ್ದಾನೆ. ಹೀಗಿರುವಾಗ ಈತನಿಗೆ ಬಡವರಿಗೆ-ಭೂರಹಿತರಿಗೆ ಸಲ್ಲಬೇಕಾದ ಭೂಮಿ ದಕ್ಕಿದ್ದಾದರೂ ಹೇಗೆ? ಇದು ಶಾಸಕ ಗೋಪು ಪವಾಡ. ತನಗೆ ಬಂಟರ ಓಟು ಕೊಡಿಸುತ್ತಾನೆ ಈ ವಿಜಯಕುಮಾರ ಶೆಟ್ಟಿ ಎಂಬ ದುರಾಸೆಯಿಂದ ಶಾಸಕ ಗೋಪು ಕರ್ಮಕಾಂಡ ಮಾಡಿದ್ದಾನೆ. ಇಷ್ಟಾದರೂ ವಿಜಯಕುಮಾರ್ ಶೆಟ್ಟಿಯ ಭೂದಾಹ ಹೆಚ್ಚಾಗುತ್ತಲೇ ಇದೆ.

ಹೆರಂಜಾಲದ ಸರ್ವೆ ನಂಬರ್ 94/1 ಮತ್ತು ಸರ್ವೆ ನಂಬರ್ 94/2ರಲ್ಲಿ 2 ಎಕರೆ 11 ಸೆಂಟ್ಸ್‌ಗೆ ಈತ ಬೇಡಿಕೆ ಇಟ್ಟಿದ್ದಾನೆ. ಸರ್ವೆ ನಂಬರ್ 2/11 ರಲ್ಲಿ ಸುಮಾರು ಮೂರು ಸಾವಿರ ಚದರ ಅಡಿಯ ಅಂಗಡಿ ಕಟ್ಟಿದ್ದಾನೆ. ಈ ಜಾಗವೂ ತನಗೇ ಸೇರಿದ್ದೆಂದು ಹಾರಾಡುತ್ತಿದ್ದಾನೆ. ಇಲ್ಲೆಲ್ಲ ಆತ ದೋ ನಂಬರ್ ದಂಧೆ ನಡೆಸುತ್ತಾನೆ. ಕೋಳಿ ಅಂಕ, ಹೆಂಡ ಮಾರಾಟ, ಇಸ್ಪೀಟು ಆಟದ ಆತನ ಅಡ್ಡೆಯಿದು. ಹೆರಂಜಾಲದ ಸರ್ವೆ ನಂಬರ್ 94ರ ಸುಮಾರು 15 ಎಕರೆ ಪ್ರದೇಶದಲ್ಲಿ ಈತ ಕೆಂಪು ಕಲ್ಲು (ಲೇಟರೈಟ್ ಕಲ್ಲು) ತೆಗೆದು ಕಳ್ಳ ಕುಬೇರನಾಗಿದ್ದಾನೆ. ಈ ಗಣಿ ಕಳ್ಳನಿಗೆ 2002, 2005, 2010, 2015 ಮತ್ತು 2016ರಲ್ಲಿ ಸತತವಾಗಿ ಅಕ್ರಮ ಸಕ್ರಮದ ಹೆಸರಲ್ಲಿ ಪಕ್ಕಾ ಅಕ್ರಮವಾಗಿ ಎಕರೆಗಟ್ಟಲೆ ಭೂಮಿ ಮಂಜೂರಾಗಿದೆ!!



ಗಾಯತ್ರಿ ನಾಯಕ್

ವಿಜಯಕುಮಾರ್ ಶೆಟ್ಟಿಯ ಲ್ಯಾಂಡ್ ಲೂಟಿ ಮತ್ತು ಶಾಸಕ ಗೋಪು ತನ್ನ ರಾಜಕೀಯ ತೆವಲಿಗೆ ಈ ಭೂ ಬಕಾಸುರನಿಗೆ ನೆರವಾಗುತ್ತಿರುವುದನ್ನು ಹೆರಂಜಾಲದ ಪಕ್ಕದ ಕಾಲ್ತೋಡು ಗ್ರಾಮದ ಸುರೇಶ್ ಶೆಟ್ಟಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಲೇ ಇದ್ದರು. ವಿಜಯಕುಮಾರ್ ಶೆಟ್ಟಿ ಎದುರು ತಾಪಂ ಚುನಾವಣೆಗೆ ಸ್ಪರ್ಧಿಸಿ ಸೋಲುತ್ತ ಬಂದ ಬಿಜೆಪಿಯ ಸುರೇಶ್ ಶೆಟ್ಟಿ ವೈರಿಯ ಬಾಲ ಕತ್ತರಿಸಿ ಸೇಡು ತೀರಿಕೆಗೆ ಸಮಯ ಸಾಧಿಸುತ್ತಲೇ ಇದ್ದರು. ಅಂಥದೊಂದು ಮುಹೂರ್ತ ಈ ಅಕ್ರಮ ಸಕ್ರಮದ ಅಕ್ರಮ ಆಟದಲ್ಲಿ ಸುರೇಶ್ ಶೆಟ್ಟಿಗೆ ಸಿಕ್ಕಿಬಿಟ್ಟಿತು. ವಿಜಯಕುಮಾರ್-ಸುರೇಶ್ ನಡುವಿನ ದ್ವೇಷಾಸೂಯೆಗೆ ಎರಡು ದಶಕಗಳ ಭೀಕರ ಇತಿಹಾಸವೇ ಇದೆ.

ಸುರೇಶ್ ಶೆಟ್ಟಿಯ ತಂದೆ ಬಿ.ಎಸ್. ಪ್ರಭಾಕರ ಶೆಟ್ಟಿ ಒಂದು ಕಾಲದಲ್ಲಿ ಬೈಂದೂರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಗೋಪಾಲ ಪೂಜಾರಿ ಕಾಂಗ್ರೆಸ್ ಶಾಸಕನಾಗುವ ಆತ ಬಿಜೆಪಿ ಪಾಲಾಗಿದ್ದರು. ಕಾಲ್ತೋಡು ವಿ ಪ್ರಭಾಕರ ಶೆಟ್ಟರು ಪಾಳೇಗಾರನಂತೆ ದ ನಡೆಸಿಕೊಂಡಿದ್ದರು. ಆತನ ಮಗ ಸುರೇಶ್ ಶೆಟ್ಟಿ ಕಾ ಹೆರಂಜಾಲದಲ್ಲಿ ಒಂಥರಾ ಯುವ ರಾಜನಂತಿದ್ದರು ಎದುರಾಗಿ ವಿಜಯಕುಮಾರ್ ಶೆಟ್ಟಿಯನ್ನು ನಿಲ್ಲಿಸಿ ಶಾಸಕ ಗೋಪು. ಎರಡು ಬಾರಿ ತಾಪಂ ಸ ವಿಜಯಕುಮಾರ್ ಎದುರು ಸುರೇಶ್ ಬ ಹೋದರು. ಶಾಸಕ ಗೋಪು ಬಲದಿಂದ ಹೈರಾಣಾಗಿಸಿದ ದೋ ನಂಬರ್ ಕಿಂಗ್ ವಿಜಯ ಹಣೆಯಲು ಹೊಂಚು ಹಾಕಿ ಕುಳಿತಿದ್ದ ಸುರೇ ಈ ಅಕ್ರಮ-ಸಕ್ರಮ-ಅಕ್ರಮ ಪಾತಕವನ್ನು ಬಳ ಬಿಟ್ಟರು.

ಈಗ ಸುರೇಶ್ ಶೆಟ್ಟಿ ಕುಂದಾಪುರ ನ್ಯಾಯಾ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಕೇಸು ದಾಖ




ಅಕ್ರಮ-ಸಕ್ರಮ ಕಮಿಟಿ ಸದಸ್ಯನಾಗಿದ್ದು ವಿಜಯಕುಮಾರ್ ಶೆಟ್ಟಿ ಅಧಿಕಾರ ದ ಮಾಡಿಕೊಂಡಿದ್ದಾನೆ; ತನ್ನ ಮತ್ತು ತನ್ನ ಹೆಂಡತಿ ಎಕರೆಗಟ್ಟಲೆ ಭೂಮಿ ಕಾನೂನುಬಾಹಿರವಾಗಿ ಪಡೆದಿದ್ದಾನೆಂಬುದು ಸುರೇಶ್ ಶೆಟ್ಟಿ ದೂರಿನ ಈ ಕೇಸಲ್ಲಿ ಅಕ್ರಮ-ಸಕ್ರಮ ಕಮಿಟಿ ಅಧ್ಯಕ್ಷ ಗೋಪು, ಸದಸ್ಯ ಕಾರ್ಯದರ್ಶಿ ಗಾಯತ್ರಿ ನಾಯ ಇನ್ನಿಬ್ಬರು ಪಾಪದ ಸದಸ್ಯರು ಆರೋಪಿಗಳು. ಆರೋಪಿ ವಿಜಯಕುಮಾರ್ ಶೆಟ್ಟಿ ಮತ್ತಾತನ

ಕುಂದಾಪುರದ ವಿಶೇಷ ನ್ಯಾಯಾಲಯ ದೂರ ತನಿಖೆಗೆ ಡಿವೈಎಸ್‌ಪಿಗೆ ಆದೇಶಿಸಿದೆ. ಶಾಸಕ ತಹಸೀಲ್ದಾರ್ ಗಾಯತ್ರಿ ನಾಯಕ್ ಈಗ ಇಂ ಮಂಗನಂತಾಗಿದ್ದಾರೆ. ವಿಜಯಕುಮಾರ್ ಶೆಟ್ಟಿ ಸಿಕ್ಕಿ ಭಯದಲ್ಲಿ ಚಡಪಡಿಸುತ್ತಿದ್ದಾನೆ. ಕೆಂಪು ಕಲ್ಲು ಬೃಹದಾಕಾರದ ಗಣಿ ಹೊಂಡ ಮಾಡಿದಲ್ಲೆಲ್ಲ ತುಂಬಿ ಸಾಕ್ಷ್ಯನಾಶಕ್ಕೆ ತಿಪ್ಪರಲಾಗ ಹಾಕು ವಿಜಯಕುಮಾರ್ ಶೆಟ್ಟಿ ಎಕರೆಗಟ್ಟಲೆ ಭೂ ಒಡೆಯನೆಂದು ಗೊತ್ತಿದ್ದೂ ಸರ್ಕಾರಿ ಕಾನೂನುಬಾಹಿರವಾಗಿ ಮಂಜೂರಿ ಮಾಡಿದ ಶಾಸಕ ಗೋಪು-ತಹಸೀಲ್ದಾರ್ ಗಾಯತ್ರಿ ನಾ ಪ್ರಾಯಶ್ಚಿತ್ತ ಆಗಲೇಬೇಕೆಂದು ಕುಂದಾಪುರ ಹೇಳುತ್ತಿದ್ದಾರೆ.


ಈ ಕೇಸು ನಿಯತ್ತು-ನಿಯಮ ಬಿಟ್ಟು ಹಪಗುಡುವ ಶಾಸಕ-ತಹಸೀಲ್ದಾರ್‌ಗೆ ಪಾಠವ ಇನ್ನಾದರೂ ಮಾನ-ಮರ್ಯಾದೆ ಕಲಿಯುವರಾ ದ್ರೋಹದ ಕಾರ್ಯಾಚರಣೆ ಬಿಟ್ಟು ಮನುಷ್ಯರಾ ಹಾಗಂತ ಕುಂದಾಪುರ-ಬೈಂದೂರು ಚರ್ಚಿಸುತ್ತಿದ್ದಾರೆ.

■ ನಾ



ಮಂಡ್ಯ

ಭ್ರಷ್ಟ ಭೀಮಾನಾಯ್ಕನ ಬೆತ್ತಲು ಮಾಡಿದ 'ಡೆತ್‌ನೋಟ್'



ಅಂತೂಇಂತೂ ಮಹಾಭ್ರಷ್ಟ ವಿಶೇಷ ಭೂಸ್ವಾಧೀನಾ ...ರಿ ಭೀಮಾನಾಯ್ಕ್ ತನ್ನ ಅಖಂಡ ಅಕ್ರಮಗಳ ಸಮೇತ ...ಡಿ ಅಧಿಕಾರಿಗಳ ಕೈಗೆ ತಗುಲಿಕೊಂಡಿದ್ದಾನೆ. ಜನಾರ್ದನ ...ಯ 25 ಕೋಟಿ ಕಪ್ಪುಹಣವನ್ನು ವೈಟ್ ಮಾಡಿದ್ದು ...ವನಿಗೆ ಸಂಕಟ ತಂದಿಟ್ಟಿದೆ. ಆತನ ಕಾರುಚಾಲಕ ...ರಮೇಶ್ ಎಂಬಾತ ವಿಷ ಕುಡಿದು ಮದ್ದೂರಿನ ಲಾಡ್ಜ್‌ನಲ್ಲಿ ಆತ್ಮಹತ್ಯೆಗೆ ಶರಣಾಗುವ ಮುನ್ನ ತನ್ನ ಡೆತ್ ನೋಟ್‌ನಲ್ಲಿ ಭೀಮಾನಾಯ್ಕ್‌ನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಹೊರಗೆಳೆದಿದ್ದಾನೆ. ರಮೇಶ್ ಆತ್ಮಹತ್ಯೆ ಪ್ರಕರಣದಲ್ಲಿ ಭೀಮಾನಾಯ್ಕನೇ ಪ್ರಥಮ ಆರೋಪಿ. ಘಟನೆ ಬೆಳಕಿಗೆ ...ದಾಗಿನಿಂದ ಕಣ್ಮರೆಯಾಗಿದ್ದ ಭೀಮಾನಾಯ್ಕ್‌ನನ್ನು ಮಂಡ್ಯ ಮತ್ತು ಕಲಬುರ್ಗಿ ಪೊಲೀಸರು ನಡೆಸಿದ ಜಂಟಿ ಕಾರ್ಯಾ...ಚರಣೆಯಲ್ಲಿ ಬಂಧಿಸಿ ಸಿಐಡಿ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ...ಡಿ ಎಸ್ಪಿ ಮಾರ್ಟಿನ್ ನೇತೃತ್ವದ ತಂಡ ಬರೋಬ್ಬರಿ ...ಗಂಟೆಗಳ ಕಾಲ ಸೋಮನಹಳ್ಳಿಯ ತೋಟದ ಮನೆ ...ಂದರಲ್ಲಿ ಭೀಮಾನಾಯ್ಕನ ವಿಚಾರಣೆ ನಡೆಸಿ ...ಎಂಎಫ್‌ಸಿ ನ್ಯಾಯಾಧೀಶ ಪಿ.ಎಂ. ಪ್ರಕಾಶ್‌ರವರ ಸಮ್ಮುಖ...ದಲ್ಲಿ ಹಾಜರುಪಡಿಸಿ 5 ದಿನಗಳ ಕಾಲ ತನ್ನ ವಶಕ್ಕೆ ...ಡೆದಿದ್ದಾರೆ. ಪ್ರಾಥಮಿಕ ವಿಚಾರಣೆ ವೇಳೆ ತನ್ನ ಬ್ಲಾಕ್ ...ಟು ವೈಟ್ ದಂಧೆಯನ್ನು ಒಪ್ಪಿಕೊಂಡಿರುವ ...ಮಾನಾಯ್ಕ್ ಈಗಾಗಲೇ ಹಲವು ಅಧಿಕಾರಿಗಳು ಹಾಗೂ ...ಕಾರಣಿಗಳ ತೊಳ್ಳೆ ನಡುಗುವಂತೆ ಮಾಡಿದ್ದಾನೆ.

ಕಾರು ಚಾಲಕ ರಮೇಶ್ ಆತ್ಮಹತ್ಯೆ

ಕೆಎಎಸ್ ಅಧಿಕಾರಿ ಎಲ್.ಭೀಮಾನಾಯ್ಕ್ ಭ್ರಷ್ಟ ...ಗಳ ವಾರಸುದಾರ. ಪ್ರಸ್ತುತ ಬೆಂಗಳೂರಿನ ವಿಶೇಷ ...ಸ್ವಾಧೀನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಇವನ ... ಮದ್ದೂರು ತಾಲ್ಲೂಕಿನ ಕಾಡುಕೊತ್ತನಹಳ್ಳಿಯ ...ಮೂಳೆಗೌಡ ಮತ್ತು ಸಾಕಮ್ಮ ದಂಪತಿಯ ಕಿರಿಯ ...ಗ ಕೆ.ಸಿ.ರಮೇಶ್ ಎಂಬಾತ ಕಾರು ಚಾಲಕನಾಗಿದ್ದ. ...ಮಾನಾಯ್ಕ್‌ನ ಅಷ್ಟೂ ಅಕ್ರಮಗಳ ಬಗ್ಗೆ ರಮೇಶ್‌ನಿಗೆ ...ಷ್ಟು ಮಾಹಿತಿಯಿತ್ತು, ಅದರಲ್ಲೂ ಗಣಿಕುಳ ಗಾಲಿ ...ನಾರ್ದನ ರೆಡ್ಡಿಯೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದ ...ಮಾನಾಯ್ಕ್ ರೆಡ್ಡಿ ಮಗಳ ಮದುವೆ ಹಿನ್ನೆಲೆಯಲ್ಲಿ ... 25 ಕೋಟಿಯಷ್ಟು ಕಪ್ಪುಹಣವನ್ನು ವೈಟ್ ಮಾಡಿಕೊಟ್ಟಿದ್ದ ಸಂಗತಿ ರಮೇಶನಿಗೆ ತಿಳಿದಿತ್ತು. ನರೇಂದ್ರ ಮೋದಿ ಐನೂರು ಮತ್ತು ಸಾವಿರ ರೂಪಾಯಿ ಮುಖ ...ಲೆಯ ನೋಟು ರದ್ದು ಮಾಡಿದ ಬಳಿಕ ನಡೆದ ಇದೇ ...ಲ್ಲಿ ಅರಮನೆ ಮೈದಾನದಲ್ಲಿ 300 ಕೋಟಿಗೂ ಹೆಚ್ಚು ರೊಕ್ಕ ಸುರಿದು ದೇಶವೇ ಬೆಚ್ಚಿಬೀಳುವಂತೆ ಮಗಳ ಮದುವೆ ಮಾಡಿದ್ದ. ಜನ ಯಃಕಶ್ಚಿತ್ ಎರಡು ಸಾವಿರ ರೂಪಾಯಿಗೆ ...ಂಗಳ ಮುಂದೆ ಕ್ಯೂನಿಂತು ಬೆವರು ಸುರಿಸುತ್ತಿದ್ದರೆ ...ಗೆ ಈ ಪಾಟಿ ದುಡ್ಡು ಅದೆಲ್ಲಿಂದ ಬಂತು ಅಂತ ಜನ ...ಮಾಡಿಕೊಳ್ಳುವ ಹೊತ್ತಿಗೆ ಸರಿಯಾಗಿ ಆದಾಯ ತೆರಿಗೆ ...ಕಾರಿಗಳು ರೆಡ್ಡಿಯ ಮನೆ, ಕಚೇರಿ ಮೇಲೆ ದಾಳಿ ...ಡಿ ಮದುವೆಗೆ ಕೋಟಿಕೋಟಿ ಹಣ ಎಲ್ಲಿಂದ ಬಂತು ...ದು ಉತ್ತರ ಕೇಳಿ ನೋಟಿಸ್ ಕೊಟ್ಟಿದ್ದರು.

ಯಾವಾಗ ಐಟಿ ಅಧಿಕಾರಿಗಳು ರೆಡ್ಡಿ ಮೇಲೆ ...ರುಕೊಂಡು ಬಿದ್ದರೋ ಆಗ ಭೀಮಾನಾಯ್ಕ್‌ನಿಗೆ ಭಯ ...ವಾಗಿತ್ತು, ತನ್ನೆಲ್ಲಾ ಅಕ್ರಮಗಳ ಜೊತೆಗೆ ಜನಾರ್ದನ ...ಯ ಬ್ಲಾಕ್ ಮನಿಯನ್ನ ವೈಟ್ ಆಗಿಸಿದ್ದ ವಿಚಾರ ...ವರ್ ರಮೇಶ್‌ನಿಗೆ ಗೊತ್ತಿದ್ದರಿಂದ ಆತ ಬಾಯಿ ...ಬಿಡುತ್ತಾನೆಂಬ ಆತಂಕ ಭೀಮಾನಾಯ್ಕ್‌ನಿಗಿತ್ತು. ಅಲ್ಲದೆ ...ಕಪ್ಪುಹಣ ಬಿಳಿ ಮಾಡುವ ದಂಧೆಯಲ್ಲಿ ಭೀಮಾನಾಯ್ಕ್‌ನ ಜೊತೆ ಕೈಜೋಡಿಸಿದ್ದ ರಮೇಶನಿಗೂ ಆತನಿಗೂ ವ್ಯವಹಾರದ ಸಂಬಂಧ ಗಲಾಟೆಯಾಗಿತ್ತು, ನೀನು ಸುಮಾರು 8 ಲಕ್ಷದಷ್ಟು ...ಹಣವನ್ನು ಬಳಸಿಕೊಂಡಿದ್ದೀಯ ಮತ್ತು ಅದನ್ನು ವಾಪಾಸ್ ...ಕೊಡು ಎಂದು ಭೀಮಾನಾಯ್ಕ್, ಹಾಗೂ ಆತನ ...ಇನ್ನೊಬ್ಬ ಕಾರಿನ ಚಾಲಕ ಮೊಹಮದ್, ರಮೇಶ್‌ಗೆ ಬೆದರಿಕೆ ಹಾಕಿದ್ದರು. ಅಲ್ಲದೆ ಅವರು ರಮೇಶನ ಮೇಲೆ ಹಲ್ಲೆಯನ್ನೂ ನಡೆಸಿದ್ದರು. ಗುತ್ತಿಗೆ ಆಧಾರದ ಮೇಲೆ ಕಾರು ಚಾಲಕನಾಗಿದ್ದ ರಮೇಶನ 3 ತಿಂಗಳ ಸಂಬಳವನ್ನು ಬಿಡುಗಡೆ ಮಾಡದೆ ಭೀಮಾನಾಯ್ಕ್ ಸತಾಯಿಸುತ್ತಿದ್ದ.

ಹಲ್ಲೆ, ಬೆದರಿಕೆಯಿಂದ ಬೇಸತ್ತಿದ್ದ ರಮೇಶ ಈ ಬಗ್ಗೆ ತನ್ನ ಸ್ನೇಹಿತ ಶಶಿಕುಮಾರ್, ಅಣ್ಣ ಮಹೇಂದ್ರನಿಗೂ ಹೇಳಿದ್ದ. ಯಾವಾಗ ಭೀಮಾನಾಯ್ಕ್ ಹಾಗೂ ಮಹಮದ್‌ನಿಂದ ಬೆದರಿಕೆ ಕರೆಗಳು ಜಾಸ್ತಿಯಾದವೋ ಆಗ ಆತ್ಮಹತ್ಯೆಯ ನಿರ್ಧಾರಕ್ಕೆ ಬಂದ ರಮೇಶ ಡಿಸೆಂಬರ್ 6ರಂದು ಮದ್ದೂರಿನ ಸಮೃದ್ಧ ಲಾಡ್ಜ್‌ನ 14 ನಂ. ರೂಂಗೆ ಬಂದು ಮಧ್ಯಾಹ್ನ 12ರ ಸುಮಾರಿಗೆ ಡ್ರಿಂಕ್ಸ್‌ನಲ್ಲಿ ಕ್ರಿಮಿನಾಶಕ ಬೆರೆಸಿ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದ. ಅದಕ್ಕೂ ಮುನ್ನ ಭೀಮಾನಾಯ್ಕನ ಅಷ್ಟೂ ಅಕ್ರಮಗಳ ಪಿನ್ ಟು ಪಿನ್ ಡೀಟೇಲ್ಸ್‌ಗಳನ್ನು ಬರೋಬ್ಬರಿ 10 ಪುಟಗಳ ತನ್ನ ಡೆತ್‌ನೋಟಲ್ಲಿ ದಾಖಲಿಸಿದ್ದ.


ಅವತ್ತು ಮಧ್ಯಾಹ್ನ 1.30ರ ಸುಮಾರಿಗೆ ರಮೇಶನಿಗೆ ಫೋನ್ ಮಾಡಿದರೂ ತೆಗೆದಿರಲಿಲ್ಲ ಮತ್ತು ಆತ ಲಾಡ್ಜ್‌ನಲ್ಲಿ ರೂಂ ಮಾಡಿದ್ದನ್ನು ತಿಳಿದಿದ್ದ ಅವನ ಗೆಳೆಯ ಶಶಿಕುಮಾರ್ ಎಷ್ಟೇ ಬಾಗಿಲು ಬಡಿದರೂ ತೆಗೆಯಲಿಲ್ಲ. ಇದರಿಂದ ಗಾಬರಿಯಾದ ಆತ ರಮೇಶನ ಅಣ್ಣ ಮಹೇಂದ್ರನಿಗೆ ಫೋನ್ ಮಾಡಿ ವಿಷಯ ಮುಟ್ಟಿಸಿದ್ದ. ಕೊನೆಗೆ ಇಬ್ಬರೂ 3 ಗಂಟೆಗೆ ಲಾಡ್ಜ್‌ಗೆ ಬಂದು ಮ್ಯಾನೇಜರ್‌ಗೆ ವಿಷಯ ತಿಳಿಸಿ ಏಣಿ ಹಾಕಿಕೊಂಡು ರೂಮಿನೊಳಗೆ ನೋಡಿದಾಗ ರಮೇಶ ಬೋರಲಾಗಿ ಮಂಚದ ಮೇಲೆ ಬಿದ್ದಿರುವುದು ಕಂಡಿತ್ತು. ಆಗಲೇ ಅವರಿಗೆ ಅನಾಹುತದ ವಾಸನೆ ಬಡಿದಿತ್ತು. ನಂತರ ಪೊಲೀಸರ ಸಮ್ಮುಖದಲ್ಲಿ ಬಾಗಿಲು ಒಡೆದು ನೋಡಿದರೆ ಅಲ್ಲಿ ರಮೇಶ್ ವಿಷ ಕುಡಿದು ಸತ್ತುಹೋಗಿದ್ದ. ಟೇಬಲ್ ಮೇಲೆ 10 ಪುಟದ ಡೆತ್‌ನೋಟ್ ಕೂಡಾ ಇತ್ತು.

ಡೆತ್‌ನೋಟ್ ಬರೆದಿಟ್ಟಿದ್ದ

ರಮೇಶ ಕಳೆದ 5 ವರ್ಷಗಳಿಂದ ಭೀಮಾನಾಯ್ಕ್‌ನ ಕಾರಿಗೆ ಡ್ರೈವರ್ ಆಗಿದ್ದ. ಹಾಗಾಗಿ ಭೀಮಾನಾಯ್ಕ್ ಮಾಡಿದ ಆಸ್ತಿಯ ಬಗ್ಗೆ ರಮೇಶನಿಗೆ ಚೆನ್ನಾಗಿಯೇ ಗೊತ್ತಿತ್ತು. ಭೀಮಾನಾಯ್ಕ್ ಎಲ್ಲೆಲ್ಲಿ ಅಕ್ರಮ ಸಂಪತ್ತು ಖರೀದಿಸಿದ್ದ? ಯಾರ್ಯಾರ ಬಳಿ ಲಂಚ ತಿಂದಿದ್ದ? ಯಾವ ಅಕ್ರಮಗಳಲ್ಲಿ ಭಾಗಿಯಾಗಿದ್ದ? ಯಾರ ಕಪ್ಪುಹಣವನ್ನು ವೈಟ್ ಮಾಡಿದ್ದ? ಎಂಬ ಮಾಹಿತಿಗಳು ರಮೇಶನಿಗೆ ತಿಳಿದಿತ್ತು. ತನ್ನ ಡೆತ್‌ನೋಟ್‌ನಲ್ಲಿ ಅದೆಲ್ಲವನ್ನೂ ಬಹಿರಂಗಗೊಳಿಸಿದ್ದಾನೆ.

ಬೆಳಗಾವಿಯ ಸದಾಶಿವನಗರದಲ್ಲಿರುವ ಕೋಟ್ಯಾಂತರ ಮೊತ್ತದ ಬಂಗಲೆ, ಹೊಸಪೇಟೆಯ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸಾಲ ಮಾಡಿ ಅಲ್ಲಿನ ಬಂಬೂಬಜಾರ್‌ನಲ್ಲಿ ಖರೀದಿಸಿರುವ 20 ಗುಂಟೆ ಖಾಲಿ ನಿವೇಶನ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹೊಲ್ಲಬಾಪುರದಲ್ಲಿ ಖರೀದಿಸಿರುವ 27 ಎಕರೆ ಜಮೀನು, ಬೆಂಗಳೂರಿನ ಎಂ.ಎಸ್.ಪಾಳ್ಯದ ಬಳಿ ಡೋನಾಟಾ ಕಂಪನಿಯ ಅನಿಲ್ ಜೈನ್ ಎಂಬುವರ ಬಳಿ 5 ಕೋಟಿ ರೂ. ಮೌಲ್ಯದ ಆಸ್ತಿ ಖರೀದಿ, ಯಲಹಂಕದ ಅಟ್ಟೂರಿನಲ್ಲಿ ಸ್ವಂತ ಮನೆ, ಪಕ್ಕದಲ್ಲೇ ಹೆಂಡತಿ ಅಕ್ಕಂದಿರ ಹೆಸರಿನಲ್ಲಿ ಖರೀದಿಸಿರುವ ಮೂರು ನಿವೇಶನಗಳು, ಮರಿಯಮ್ಮನಹಳ್ಳಿಯಲ್ಲಿ ಅಣ್ಣ-ತಮ್ಮಂದಿರ ಹೆಸರಿನಲ್ಲಿ ಖರೀದಿಸಿದ 10 ಎಕರೆ ಜಮೀನು, ತಮ್ಮ ಕೃಷ್ಣನಾಯ್ಕ್ ಹೆಸರಿನಲ್ಲಿ ಮಾಡಿರುವ ಪೆಟ್ರೋಲ್ ಬಂಕ್, ಅದೇ ಕೃಷ್ಣನಾಯ್ಕ್‌ನ ಹೆಸರಿನಲ್ಲಿ 2 ದುಬಾರಿ ಕಾರು, ಇನ್ನೊಬ್ಬ ತಮ್ಮ ಅರ್ಜುನ್‌ನಾಯ್ಕ್ ಹೆಸರಿನಲ್ಲಿ ತವೇರಾ ಕಾರು, ಬೆಂಗಳೂರಿನ ಕೃಷ್ಣಯ್ಯ ಚೆಟ್ಟಿ ಅಂಡ್ ಸನ್ಸ್‌ನಲ್ಲಿ ಒಂದು ಕೋಟಿ ರೂ.ಗಳ ಚಿನ್ನಾಭರಣ ಖರೀದಿ ಇದೆಲ್ಲವನ್ನೂ ರಮೇಶ್ ಬರೆದಿಟ್ಟಿದ್ದಾನೆ. ಅಂದಹಾಗೆ, ಭೀಮಾನಾಯ್ಕ್ ತೊಟ್ಟಿರುವ ವಜ್ರದ ಉಂಗುರವೇ ಬರೋಬ್ಬರಿ 50 ಲಕ್ಷ ರೂಪಾಯಿ ಬೆಲೆಬಾಳುತ್ತದಂತೆ.

ಅದೇರೀತಿ, 28.10.2016ರಂದು ಮಾಜಿ ಸಚಿವ ರೆಡ್ಡಿ ಮತ್ತು ಸಂಸದ ಶ್ರೀರಾಮುಲುರನ್ನು ಭೀಮಾನಾಯ್ಕ್, ಪಾರಿಜಾತ ಗೆಸ್ಟ್‌ಹೌಸ್‌ನಲ್ಲಿ ಭೇಟಿ ಮಾಡಿ, 25 ಕೋಟಿ ರೂಪಾಯಿ ಹಳೇ ನೋಟುಗಳಿಗೆ ಬದಲಾಗಿ ಹೊಸ ನೋಟುಗಳನ್ನು ಬದಲಿಸಿಕೊಟ್ಟಿದ್ದಲ್ಲದೇ ಅವರ ನೆರವಿನಲ್ಲಿ 2018ರ ವಿಧಾನಸಭಾ ಚುನಾವಣೆಯಲ್ಲಿ ಹಗರಿಬೊಮ್ಮನ ಹಳ್ಳಿಯಿಂದ ಸ್ಪರ್ಧಿಸಲು ಆತ ನಡೆಸಿದ್ದ ಮಾತುಕತೆಯ ರಹಸ್ಯವನ್ನೂ ಆ ಡೆತ್‌ನೋಟ್ ಬಯಲು ಮಾಡಿದೆ.


ರಮೇಶ್ ಬರೆದಿದ್ದ ಡೆತ್‌ನೋಟ್

ಜೊತೆಗೆ, ತನ್ನ ಮೇಲಿದ್ದ ಇಲಾಖೆ ಪ್ರಕರಣಗಳನ್ನು ಮುಚ್ಚಿಹಾಕಲು ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ ನಾಗರಾಜು ಎಂಬುವರಿಗೆ ಭೀಮಾನಾಯ್ಕ್ 25 ಲಕ್ಷ ಲಂಚ ನೀಡಿದ್ದ ಎನ್ನುವ ಮಾಹಿತಿಯೂ ಅದರಲ್ಲಿದೆ. ತಮ್ಮ ಕೃಷ್ಣನಾಯ್ಕನಿಗೆ ಆಕ್ಸಿಡೆಂಟ್ ಆದಾಗ ಸುಮಾರು 30 ಲಕ್ಷಕ್ಕೂ ಅಧಿಕ ಹಣವನ್ನು ಸ್ಪರ್ಶ ಆಸ್ಪತ್ರೆಗೆ ಕಟ್ಟಿದ್ದ, ಕೃಷ್ಣನಾಯ್ಕ್‌ನ ಮಗನ ಚಿಕಿತ್ಸೆಗೆ 20 ಲಕ್ಷ ಹಣ ಖರ್ಚು ಮಾಡಿದ್ದ, ತನ್ನ ಹೆಂಡತಿ ತಮ್ಮ ಅರುಣ್ ವಿವಾಹಕ್ಕೆ 50 ಕೋಟಿಯಷ್ಟು ಅಕ್ರಮ ಹಣವನ್ನು ಗುಲ್ಬರ್ಗದಲ್ಲಿ ಬದಲಾವಣೆ ಮಾಡಿದ್ದ ಎಂಬೆಲ್ಲ ಆಘಾತಕಾರಿ ವಿಷಯಗಳ ಸುಳಿವನ್ನೂ ರಮೇಶ್ ಬಿಟ್ಟುಹೋಗಿದ್ದಾನೆ.

ಭೀಮಾನಾಯ್ಕ್ ಮತ್ತು ಮಹಮದ್ 8 ಲಕ್ಷ ಹಣ ತಂದುಕೊಡದಿದ್ದರೆ ರೌಡಿಗಳಿಂದ ಕೊಲೆ ಮಾಡಿಸುವ ಜೀವಬೆದರಿಕೆ ಹಾಕಿದ್ದರು. ಹಾಗಾಗಿ ಮಾನಸಿಕವಾಗಿ ನೊಂದು ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ ಎಂದು ಸ್ಪಷ್ಟವಾಗಿ ಅವರಿಬ್ಬರನ್ನೂ ಆರೋಪಿಯಾಗಿಸಿದ್ದಾನೆ.

ಅಕ್ರಮ ಆಸ್ತಿಯ ಸರದಾರ

ಭೀಮಾನಾಯ್ಕ್ ಮೂಲತಃ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ತಾಂಡದವನು. ಈತನ ತಂದೆ ಲಕ್ಷ್ಮಣ ನಾಯ್ಕ್, ಲಕ್ಷ್ಮಣನಾಯ್ಕ್‌ನ ಹತ್ತು ಮಕ್ಕಳ ಪೈಕಿ ಭೀಮಾನಾಯ್ಕ್‌ನೇ ಹಿರಿಯ ಮಗ. ಇಂಜಿನಿಯರಿಂಗ್ ಪದವಿ ಪಡೆದಿರುವ ಈತ ಲೂಟಿ ಮಾಡಲೆಂದೇ ಸರ್ಕಾರಿ ಕೆಲಸಕ್ಕೆ ಬಂದವನು. 1998ನೇ ಬ್ಯಾಚಿನ ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಮೊದಲು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿನಲ್ಲಿ ವೃತ್ತಿ ಆರಂಭಿಸಿದ ಭೀಮಾನಾಯ್ಕ್ ಕೆಲಸ ಮಾಡಿದ ಭಾಗದಲ್ಲೆಲ್ಲ ಗೆಬರಿ ತಿಂದ ಪರಿಣಾಮ ಇಂದು ನೂರಾರು ಕೋಟಿಗೆ ತೂಗುತ್ತಾನೆ. 2008-09ರಲ್ಲಿ ಬಳ್ಳಾರಿ ತಹಸೀಲ್ದಾರ್ ಆಗಿದ್ದಾಗ ಹಗರಿಬೊಮ್ಮನಹಳ್ಳಿ ಸಮೀಪದ ಚಿಂತ್ರಪಳ್ಳಿ ಪ್ರದೇಶದ ವಲ್ಲಭಾಪುರ ಸರ್ವೆ ನಂ. 141ರಲ್ಲಿ 16.31 ಎಕರೆ ಜಮೀನು ಮತ್ತು ಮದ್ದೂರು ಪ್ರದೇಶದ ಸರ್ವೆ ನಂ. 134ರಲ್ಲಿ 10.7 ಎಕರೆ ಜಮೀನನ್ನು ತನ್ನ ಮಕ್ಕಳಾದ ತೇಜಸ್ ಬಿ ನಾಯ್ಕ್ ಹಾಗೂ ಪೃಥ್ವಿರಾಜ್ ಬಿ ನಾಯ್ಕ್ ಹೆಸರಿನಲ್ಲಿ ಓಜಿನಲ್ಲಿ ಗವಿಸಿದ್ದಪ್ಪ ಎನ್ನುವವರಿಂದ ಖರೀದಿಸಿದ್ದಾನೆ. ಚಿಂತ್ರಪಳ್ಳಿಯಲ್ಲಿ ಒಂದು ಎಕರೆ ಜಮೀನು 10 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುತ್ತದೆ. ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ತಹಸೀಲ್ದಾರ್ ಆಗಿದ್ದಾಗ ಅಕ್ರಮ ಗಣಿಗಾರಿಕೆ ನಡೆಸುವವರ ಜೊತೆ ಕೈ ಜೋಡಿಸಿದ ಭೀಮಾನಾಯ್ಕ್ ಅಕ್ರಮ ಜಲ್ಲಿ ಕ್ರಷರ್ ಗಣಿಗಾರಿಕೆಗೆ ಬೆಂಬಲ ನೀಡಿದ್ದ. ಗಂಗಾವತಿ ತಾಲ್ಲೂಕಿನ ರಂಗಾಪುರ ಗ್ರಾಮದಲ್ಲಿರುವ ಸರ್ವೆ ನಂ. 4ರಲ್ಲಿರುವ 340.30 ಎಕರೆಯ ಪೈಕಿ ಬಹುತೇಕ ಜಮೀನಿಗೆ ಕಂದಾಯ ಇಲಾಖೆ ನಿಯಮಾವಳಿ ಮೀರಿ ಕೇವಲ ಒಂದು ವಾರದಲ್ಲಿ ಎಲ್ಲ ಪ್ರಕ್ರಿಯೆ ಮುಗಿಸಿ ಸಾಗುವಳಿ ಪಟ್ಟಾ ನೀಡಿದ್ದ ಭೀಮಾನಾಯ್ಕ್ ಇದೊಂದು ವ್ಯವಹಾರದಲ್ಲೇ ಕೋಟಿಕೋಟಿ ರೊಕ್ಕ ಬಾಚಿದ್ದ. ಈ ಅವ್ಯವಹಾರ ಗಮನಿಸಿದ ಕಲಬುರ್ಗಿಯ ಆಗಿನ ಪ್ರಾದೇಶಿಕ ಆಯುಕ್ತ ರಜನೀಶ್ ಗೋಯೆಲ್, ಭೀಮಾನಾಯ್ಕ್‌ನ ಮೇಲೆ ಎಫ್‌ಐಆರ್ ದಾಖಲಾಗುವಂತೆ ಮಾಡಿದ್ದರು.


ಗಂಗಾವತಿ ಪಟ್ಟಣದಿಂದ ಕೇವಲ 2 ಕಿ.ಮೀ. ದೂರದಲ್ಲಿರುವ ಸರ್ವೆ ನಂ. 41/5ರಲ್ಲಿದ್ದ 1.17 ಎಕರೆ ಸರ್ಕಾರಿ ಭೂಮಿಯನ್ನು ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ ಪಂಚನಾಮೆ ವರದಿ ಇಲ್ಲದೆಯೇ ಅನಧಿಕೃತವಾಗಿ ಸುಂದರಮ್ಮ ಎನ್ನುವವರಿಗೆ ಸಾಗುವಳಿ ಮಾಡುವ ಅವಕಾಶ ಮಾಡಿಕೊಟ್ಟಿದ್ದ ಭೀಮಾನಾಯ್ಕ್, ಅದಕ್ಕೆಂದೇ ಪ್ರತ್ಯೇಕ ಕಾಣಿಕೆ ಪಡೆದು ಸಿಕ್ಕಿಬಿದ್ದಿದ್ದ. ಈ ಪ್ರಕರಣದಲ್ಲೂ ಈತನ ಮೇಲೆ ಗಂಗಾವತಿ ಠಾಣೆಯಲ್ಲಿ ದೂರು ದಾಖಲಾಗಿತ್ತು. ಒಂದೊಂದು ಪ್ರಮಾಣಪತ್ರಕ್ಕೂ ಇಂತಿಷ್ಟು ಮಾಮೂಲಿ


⏭ 07





ದಾವಣಗೆರೆ: ಕಳಚಿಬಿತ್ತು ಮಾದಾರ ಚೆನ್ನಯ್ಯನ 'ಶರಣ' ಮುಖವಾಡ!


ಮಾದಾರ ಚೆನ್ನಯ್ಯ ಸ್ವಾಮೀಜಿ


ಮುರುಘಾ ಶರ...

ಚಿತ್ರದುರ್ಗ ಮಾದಾರ ಚೆನ್ನಯ್ಯ ಸ್ವಾಮೀಜಿಯ ಬಗ್ಗೆ ಇದ್ದ ಅನುಮಾನಗಳೆಲ್ಲವು ಸಾರಾಸಗಟಾಗಿ ಸಾಬೀತಾಗಿವೆ. ಮೊನ್ನೆ ದಾವಣಗೆರೆಯ ಮೋತಿವೀರಪ್ಪ ಕಾಲೇಜು ಆವರಣದಲ್ಲಿ ಸಂಘ ಪರಿವಾರ ನಡೆಸಿದ ಸುದರ್ಶನ ಹೋಮದಂತಹ ವೈದಿಕಶಾಹಿ ಆಡಂಬರಕ್ಕೆ ಮುಂದಾಳತ್ವ ವಹಿಸುವ ಮೂಲಕ ಶ್ರಮ ಸಂಸ್ಕೃತಿಯ ಶರಣ ಪರಂಪರೆಯನ್ನು ಗಾಳಿಗೆ ತೂರಿದ್ದಾರೆ. ಅಲ್ಲಿಗೆ ಕಾವಿ ತೊಟ್ಟ ಮಾದಾರ ಚೆನ್ನಯ್ಯ ಸ್ವಾಮೀಜಿಗಿಂತ, ಆ ದೇಹದೊಳಗೆ ಬಚ್ಚಿಟ್ಟುಕೊಂಡಿರುವ ಪೂರ್ವಾಶ್ರಮದ ಸಮಯಸಾಧಕ ಜರ್ನಲಿಸ್ಟ್ ಕೃಷ್ಣನೇ ಹೆಚ್ಚು ಸಕ್ರಿಯವಾಗಿರೋದು ಅಕ್ಷರಶಃ ದೃಢಪಟ್ಟಿದೆ.

ದಲಿತ ಸಮುದಾಯ ಜಾಗೃತಿಗೊಳಿಸುವ ನೆಪದಲ್ಲಿ ತಲೆಯೆತ್ತಿದ ಈ ಬಸವಮೂರ್ತಿ ಮಾದಾರ ಚೆನ್ನಯ್ಯನ ಮಠ ಈಗ ಅದೆತ್ತ ಹೊರಟಿದೆ ಎನ್ನುವುದು ಚಿದಂಬರ ರಹಸ್ಯವೇನಲ್ಲ. ಶೋಷಿತ ಜಾತಿಗಳ ಜಾಗೃತಿಗೆ ಮಠಗಳೇ ಮೂಲ ಎಂಬ ಭ್ರಮೆಯಲ್ಲಿ ಚಿತ್ರದುರ್ಗ ಮುರುಘರಾಜೇಂದ್ರ ಮಠದ ಶಿವಕುಮಾರ ಸ್ವಾಮಿಗಳು ಜಾತಿಗೊಂದು ಮಠ ಸ್ಥಾಪಿಸಿದ ಮಹಾಯೋಜನೆಯ ಉತ್ಪನ್ನಗಳಲ್ಲಿ ಈ ಮಾದಾರ ಚೆನ್ನಯ್ಯ ಪೀಠವೂ ಒಂದು. ಹನ್ನೆರಡನೇ ಶತಮಾನದಲ್ಲಿ ವೈದಿಕ ಧರ್ಮದ ವಿರುದ್ಧ ವೈಚಾರಿಕ ಹೋರಾಟವನ್ನು ಹುಟ್ಟುಹಾಕಿ 'ಕಾಯಕವೇ ಕೈಲಾಸ' ಎನ್ನುವ ಮೂಲಕ ಸಮಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದ ಬಸವಣ್ಣನವರ ಅನುಯಾಯಿ ಮಾದಾರ ಚೆನ್ನಯ್ಯರ ಹೆಸರನ್ನು ಇಡುವ ಮೂಲಕ ಅದೇ ವೈಚಾರಿಕ ಧಾಟಿಯಲ್ಲಿ ಮಾದಿಗ ಸಮುದಾಯದ ಉದ್ಧಾರಕ್ಕೆ ಇದು ನಾಂದಿಯಾಗಲಿ ಅನ್ನೋದು ಮುರುಘಾ ಶರಣರ ಆಶಯವಾಗಿತ್ತೇನೊ. ಆದರೆ ಆ ಪೀಠಕ್ಕೆ ದಲಿತ ಎನ್ನುವ ಏಕೈಕ ಕಾರಣಕ್ಕೆ ಕೃಷ್ಣ ಎನ್ನುವ ಪತ್ರಕರ್ತ ಪಾತ್ರಧಾರಿಯನ್ನು ಕರೆತಂದು ಪಟ್ಟ ಕಟ್ಟಿದ್ದು ಇವತ್ತು ಶರಣ ಪರಂಪರೆಯನ್ನೇ ವೈದಿಕ ಮೌಢ್ಯಕ್ಕೆ ಅಡಿಯಾಳಾಗಿಸುವ ಕೃತ್ಯಕ್ಕೆ ನಾಂದಿ ಹಾಡಿದಂತಾಗಿದೆ.

ಡಿಸೆಂಬರ್ 3ರಂದು ದಾವಣಗೆರೆಯಲ್ಲಿ ಅದ್ಯಾರೋ ಹೆಸರಿಟ್ಟ ಧರ್ಮ ಜಾಗರಣಾ ಸಮನ್ವಯ ವೇದಿಕೆಯ ಮನುವಾದಿಗಳು ಆಚರಿಸಿದ ಸುದರ್ಶನ ಹೋಮದ ಅಬ್ಬರ ನಿಜಕ್ಕೂ ದಾವಣಗೆರೆಯ ಜನರನ್ನು ಆತಂಕದಲ್ಲಿ ಮುಳುಗಿಸಿತ್ತು. ಢೋಂಗಿ ಲೋಕಕಲ್ಯಾಣದ ಹೆಸರಲ್ಲಿ ಮನುವಾದಿಗಳು ನಡೆಸಿದ ಹೋಮ ಪೂಜೆಯಲ್ಲಿ ನೆಪಕ್ಕಾಗಿ 1001 ಜೋಡಿವಿವಾಹ ಮಾಡಲಾಯಿತಾದರೂ ಅದೆಲ್ಲ ನಾಟಕ ಎನ್ನುವುದು ಎಂಥವರಿಗೂ ಅರ್ಥವಾಯಿತು. ಅದ್ಯಾವ ಲೋಕ ಉದ್ಧಾರ ಮಾಡಿದರೋ ಯಾರಿಗೆ ಗೊತ್ತು, ಅಲ್ಲಿ ಮಾದಾರ ಚೆನ್ನಯ್ಯನ ಪೌರೋಹಿತ್ಯವಿತ್ತೆಂದರೆ ಆರ್‌ಎಸ್‌ಎಸ್ ಮತ್ತು ಕೋಮುವಾದಿಗಳ ವಿಷ ವಾಸನೆ ಇದೆ ಎಂದೇ ಅರ್ಥ. ಹಾಗಾಗಿಯೇ ಶಿವಮೊಗ್ಗದ 30ಕ್ಕೂ ಹೆಚ್ಚು ವೈದಿಕ ಬ್ರಾಹ್ಮಣರ ಮಂತ್ರ ಪಠಣದ ಘೋಷ ಮೊಳಗಿತ್ತು. ಈ ಸುದರ್ಶನ ಹೋಮಕ್ಕೆ ಭೀಮೇಶ್ವರ ಜೋಷಿ, ವೀರಶೈವ ಮುಖಂಡ ದೇವರಮನಿ ಶಿವಕುಮಾರ, ಆರ್‌ಎಸ್‌ಎಸ್ ಪ್ರಾಂತ ಪ್ರಮುಖ ಮುನಿಯಪ್ಪನಂತಹ ಕಟ್ಟಾ ಹಿಂದೂವಾದಿಗಳ ಮುಖಂಡತ್ವವಿತ್ತು. ಹೋಮ, ಹವನ, ಸತ್ಯನಾರಾಯಣನ ಪೂಜೆ, 1001 ಮದುವೆ ಅಂತೆಲ್ಲ ಅದ್ಯಾವ ಲೋಕವನ್ನು ಮುಂಡಾಮೋಚಲು ಈ ಹೋಮದ ಹೆಸರಲ್ಲಿ ವೇದಘೋಷ ಮೊಳಗಿತೋ ಯಾರು ಬಲ್ಲರು? 2018ರ ವಿಧಾನಸಭಾ ಚುನಾವಣೆ ಸಮೀಪಿಸಿದಂತೆಲ್ಲ ಆರ್‌ಎಸ್‌ಎಸ್ ಭಕ್ತಿಯ ಹೆಸರಲ್ಲಿ, ಲೋಕಕಲ್ಯಾಣದ ನೆಪದಲ್ಲಿ ಧಾರ್ಮಿಕ ಮೌಢ್ಯದ ಭಯದ ನೆರಳಲ್ಲಿ ಹಿಂದೂಗಳನ್ನು ಸಾಂದ್ರೀಕರಿಸುವ ಕುತಂತ್ರಗಳು ಹೆಚ್ಚಾಗುತ್ತಿದ್ದು ಇದೂ ಅಂತದ್ದರಲ್ಲಿ ಒಂದೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಈ ಮಾದಾರ ಚೆನ್ನಯ್ಯ ತಾನು ದಾರಿತಪ್ಪಿ ಆರ್‌ಎಸ್‌ಎಸ್‌ನಂತಹ ಹಿಂದೂ ಭಯೋತ್ಪಾದಕರ ತೆಕ್ಕೆ ಸೇರಿದ್ದಲ್ಲದೆ, ಅಂದು ಹೋಮ ನಡೆದ ವೇದಿಕೆಯಲ್ಲಿ 'ಢೋಂಗಿ ವಿಚಾರವಾದಿಗಳಿಂದ ದೇಶಕ್ಕೆ ಕಂಟಕವಿದೆ' ಎಂದು ನಾಚಿಕೆ ಬಿಟ್ಟು ಬಡಬಡಿಸುವ ಮೂಲಕ ತಾನೆಷ್ಟು ಬೌದ್ಧಿಕ ದಿವಾಳಿಗೆ ತುತ್ತಾಗಿದ್ದೇನೆ ಅನ್ನೋದನ್ನು ಸಾಬೀತುಮಾಡಿಕೊಂಡಿದ್ದರು. ಥೇಟು ಜ್ಯೋತಿಷಿಯಂತೆ ಭವಿಷ್ಯದ ಬೊಗಳೆ ಬಿಟ್ಟ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗೆ, ಕೋಮುವಾದಿಗಳೊಂದಿಗೆ


ಬಾಬಾಬುಡನ್‌ಗಿರಿಯಲ್ಲಿ ಸುನೀಲ್ ಮತ್ತು ಸಿ.ಟಿ. ರವಿ ಜೊತೆ

ಕೈಜೋಡಿಸುವ ಮೂಲಕ ತಾನೇ ತನ್ನ ತಳಸಮುದಾಯದ ಸರ್ವನಾಶಕ್ಕೆ ಕೈಹಾಕಿರುವ ವರ್ತಮಾನ ಅರ್ಥವಾಗದಿರೋದು ದುರಂತ. ಒಂದು ಕಾಲದಲ್ಲಿ ಅಂಬೇಡ್ಕರ್ ಅನುಯಾಯಿ ಎಂದು ಕರೆದುಕೊಂಡಿದ್ದ ಇದೇ ಮಾದಾರ ಚನ್ನಯ್ಯ ಇವತ್ತು ಅದೆಲ್ಲವನ್ನು ಬದಿಗಿಟ್ಟು ದಲಿತವಿರೋಧಿ ಅಜೆಂಡಾದ ಕೋಮುವಾದಿಗಳ ಪರ ವಕಾಲತ್ತು ವಹಿಸುವುದು ಎಂಥವರಿಗೂ ಹೇಸಿಗೆ ಹುಟ್ಟಿಸುತ್ತದೆ.

ಶರಣ ಪರಂಪರೆಗೆ ವಿರುದ್ಧವಾದ ಹೋಮದಲ್ಲಿ ಭಾಗವಹಿಸಿದ್ದಲ್ಲದೆ ವಿಚಾರವಾದಿಗಳನ್ನು ಬಾಯಿಗೆಬಂದಂತೆ ಟೀಕಿಸಿದ ಮಾದಾರ ಚೆನ್ನಯ್ಯನ ಹೊಸ ಅವತಾರಕ್ಕೆ ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯರು ಮತ್ತು ದಾವಣಗೆರೆಯ ವಿರಕ್ತಮಠದ ಶರಣರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಅಸಲಿಗೆ ಆರೆಸ್ಸೆಸ್ಸಿಗರು ಆಯೋಜಿಸಿದ್ದ ಆ ಸುದರ್ಶನ ಹೋಮದ ಆಹ್ವಾನ ಪತ್ರಿಕೆಯಲ್ಲಿ ಈ ಇಬ್ಬರು ಶರಣರ ಹೆಸರುಗಳನ್ನೂ ಮುದ್ರಿಸಲಾಗಿತ್ತು ಅದೂ ಅವರುಗಳ ಅಪ್ಪಣೆಯಿಲ್ಲದೆ. ಹಾಗಂತ ಅವರು ಮನುವಾದಿಗಳ ಹೋಮದ ಬೆಂಕಿಯೊಳಕ್ಕೆ ಶರಣ ಸಂಸ್ಕೃತಿಯನ್ನು ಸುರಿದು ಸುಟ್ಟು ಭಸ್ಮ ಮಾಡಲಿಲ್ಲ. 'ಇಂಥದ್ದನ್ನೆಲ್ಲ ಸಹಿಸಲು ಸಾಧ್ಯವಿಲ್ಲ' ಎನ್ನುವ ಮೂಲಕ ಪಂಡಿತಾರಾಧ್ಯರು ಮಾದಾರ ಚೆನ್ನಯ್ಯ ಸ್ವಾಮಿಯ ಮಂಗಾಟಕ್ಕೆ ತಕ್ಕ ಉತ್ತರ ರವಾನಿಸಿದ್ದಾರೆ. ಒಂದುವೇಳೆ ಮಾದಾರ ಚೆನ್ನಯ್ಯ ಹೀಗೇ ಮನುವಾದಿಗಳನ್ನು ಬೆಂಬಲಿಸುತ್ತಾ ಹೋದರೆ ಖುದ್ದು ಮಾದಿಗ ಸಮುದಾಯವೇ ಚೆನ್ನಯ್ಯನ ವಿರುದ್ಧ ಸಿಡಿದೇಳುವ ಕಾಲ ಸಮೀಪಿಸಬಹುದು.

ಮುರುಘಾ ಮಠದ ಬೈ-ಪ್ರಾಡಕ್ಟು

ಚಿತ್ರದುರ್ಗದ ಮುರುಘಾಮಠದ ಶಿವಕುಮಾರ ಶರಣರು ಜಾತಿ ಜಾಗೃತಿಯ ಉದ್ದೇಶದ ನೆಲೆಯಲ್ಲಿ ಜಾತಿಗೊಬ್ಬ ಜಗದ್ಗುರುಗಳನ್ನು ಚಿತ್ರದುರ್ಗದ ಹೈವೆ ರಸ್ತೆಯ ಹಾದಿಬದಿಯಲ್ಲಿ ಸ್ಥಾಪಿಸುವ ಮೂಲಕ ಹೈವೇ ಮಠಗಳು ತಲೆಎತ್ತುವಂತೆ ಮಾಡಿದ್ದನ್ನು ಸಾರಾಸಗಟಾಗಿ ತಳ್ಳಿಹಾಕಲಿಕ್ಕಾಗುವುದಿಲ್ಲ. ಶರಣರ ಈ ಐಡಿಯಾದ ಹಿಂದೆ ಮಠದ ಕಾರ್ಯದರ್ಶಿಯಾಗಿದ್ದ ಸಮಯಸಾಧಕ ರಾಜಕಾರಣಿ ಬಸವರಾಜನ್‌ನ ರಾಜಕೀಯ ಉದ್ದೇಶವಿತ್ತಾದರೂ ಶರಣತತ್ವದ ಪ್ರಭಾವವಿರುವ ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಶೋಷಿತ ಸಮುದಾಯಗಳ ಸಂಘಟನೆಗೆ ವೈಚಾರಿಕ ನೆಲೆಗಟ್ಟಿನ ಮಠ ಅಗತ್ಯವಿತ್ತೆಂಬುದರಲ್ಲೂ ಅರ್ಥವಿದೆ. ಅಂಥಾ ಮಠಗಳಲ್ಲಿ ಈ ಮಾದಾರ ಚೆನ್ನಯ್ಯ ಪೀಠವೂ ಒಂದು. ಶತಶತಮಾನದಿಂದ ವೈದಿಕಶಾಹಿ ಹಿಡಿತದಲ್ಲಿ ಅಸ್ಪೃಶ್ಯ ಕಳಂಕ ಹೊತ್ತುಕೊಂಡು ಅಮಾನವೀಯ ಬದುಕಿಗೆ ಸೀಮಿತವಾಗಿಸಿಕೊಂಡಿದ್ದ ಸಮುದಾಯವನ್ನು ಸಾಮಾಜಿಕವಾಗಿ ಮಾನವೀಯ ಮುಖ್ಯನೆಲೆಗೆ ತರುವ ಉದ್ದೇಶ ಮಾದಾರ ಚೆನ್ನಯ್ಯ ಪೀಠಕ್ಕೆ ಮತ್ತು ಆ ಪೀಠಾಧಿಪತಿಗೆ ಇರಬೇಕಿತ್ತು. ಮಾದಿಗ ಸಮುದಾಯವನ್ನು ವೈದಿಕ ಬಂಧನದಿಂದ ಬಿಡುಗಡೆಗೊಳಿಸಿ ಬು... ಕೊಂಡೊಯ್ಯುವ ಅಂಬೇಡ್ಕರ್ ಆಶಯವನ್ನು ಈ ಮಾ... ಚೆನ್ನಯ್ಯ ಸಾಕಾರಗೊಳಿಸುತ್ತಾರೆನ್ನುವ ಆಶ... ಪ್ರಜ್ಞಾವಂತರಲ್ಲಿ ಇತ್ತು. ಅದಕ್ಕೆ ತಕ್ಕಂತೆ ಆರಂಭದಲ್ಲಿ ಮಾ... ಚೆನ್ನಯ್ಯ ಸ್ವಾಮಿಯೂ ಮಾದಿಗ ಸಮುದಾಯದ ಶ... ಮೌಢ್ಯಾಚರಣೆ ಮತ್ತು ವೈದಿಕಶಾಹಿ ದ... ವಿಮೋಚನೆಯ ಕಸರತ್ತನ್ನು ಮಾಡಿದರು.

ಆದರೆ ದಿನಕಳೆದಂತೆ ಅದ್ಯಾವ ಧಾರ್ಮಿಕ ... ಈ ಚೆನ್ನಯ್ಯನಿಗೆ ಅಮರಿಕೊಂಡಿತೋ ಗೊತ್ತಿಲ್ಲ, ... ಶರಣ ಪರಂಪರೆಯ ಮನುಷ್ಯತ್ವವನ್ನೆ ಮರೆತು ... ಪರಂಪರೆಗೆ ಮಾರುಹೋದ. ಅಷ್ಟರಲ್ಲಾಗಲೆ ತಾವೇ ಸ... ಜಾತಿ ಜಗದ್ಗುರುಗಳಿಗೂ ಮತ್ತು ಮುರುಘಾ ಶರಣ... ಸಣ್ಣದೊಂದು ವೈಮನಸ್ಸು ಕೂಡಾ ಕಾಣಿಸಿಕೊ... ಅದನ್ನೇ ನೆಪ ಮಾಡಿಕೊಂಡ ಜಾತಿ ಪೀಠಾಧಿಪ... ಮುರುಘಾಮಠದ ಪಡಸಾಲೆಯಿಂದ ಹೊರ... ತಮ್ಮದಲ್ಲದ ದಿಕ್ಕಿನೆಡೆಗೆ ಮುಖ ಮಾಡಿದರು. ... ಮತ್ತು ಹಿಂದುಳಿದ ವರ್ಗಗಳನ್ನು ಶತಮಾನಗಳಿಂದ ... ವೈದಿಕ ಧರ್ಮದೆಡೆಗೆ ಈ ನಕಲಿ ಜಗದ್ಗುರುಗಳ... ಹಿಂದು ತಲೆಬಗ್ಗಿಸಿ ಹೊರಟಿತ್ತು. ಮಾದಾರ ಚ... ಶಾಂತವೀರಸ್ವಾಮಿ (ಕುಂಚಟಿಗ ಜಾತಿ), ಇಮ್ಮಡಿ ಸಿ... ಸ್ವಾಮಿ (ಬೋವಿ), ಶ್ರೀಕೃಷ್ಣ ಯಾದವಾನಂದ ... (ಗೊಲ್ಲ ಸಮುದಾಯ) ಇತ್ಯಾದಿ ಜಾತಿ ಸ್ವಾಮಿಗಳೆಲ್ಲ ... ಜಿಲ್ಲಾದ್ಯಂತ ಆರ್‌ಎಸ್‌ಎಸ್, ಹಿಂದೂ ಮಹಾಸಭ... ಜೀವಕಂಟಕ ಸಂಘಟನೆಗಳ ಬೆಳವಣಿಗೆಗೆ ಕಂಕಣಬ... ನಿಂತುಬಿಟ್ಟರು.


ಮಾದಾರ ಸ್ವಾಮಿಯ ಕೋಮು ಪ್ರ...

ಹಾಗೆ ನೋಡಿದರೆ ಚಿತ್ರದುರ್ಗ ಕೋ... ಸೌಹಾರ್ದತೆಗೆ ಹೆಸರಾದ ಬಿಸಿಲನಾಡು. ಇಂಥ ಮಾನ... ಸಂವೇದನೆಯ ನೆಲದಲ್ಲಿ ಈ ಮಾದಾರ ಚೆನ್ನಯ್ಯ ... ಗ್ಯಾಂಗ್ ಆಡಿದ ಆಟ ಅಂತಿಂಥದ್ದಲ್ಲ. ಯಾವಾಗ ಮ... ಚೆನ್ನಯ್ಯ ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿಗೆ ತ... ಬದಲಾಯಿಸಿದರೊ, ಆಗಲೇ ಆರ್‌ಎಸ್‌ಎಸ್‌ನ ಮ... ಮಠ ಪ್ರವೇಶಿಸಿತ್ತು. ಅಲ್ಲಿಂದಾಚೆಗೆ ಮಾದಾರ ಚೆ... ಮಠದೊಳಗೆ ವೇದಘೋಷ ಮೊಳಗತೊಡಗಿ... ಮಠದೊಳಗೆ ಅಂಬೇಡ್ಕರ್, ಜಗಜೀವನರಾಮ್... ದಲಿತೋದ್ಧಾರಕರ ಭಾವಚಿತ್ರಗಳಷ್ಟೇ ದಲಿತ... ಪರೀಕಗಳಾದವೆ ಹೊರತು ಅಲ್ಲಿ ಕಿಂಚಿತ್ತೂ ದಲಿತ ... ಸ್ಫುರಿಸಲೇ ಇಲ್ಲ. ದಲಿತದ್ರೋಹಿ ಆರ್‌ಎಸ್‌ಎಸ್‌ನ ... ಹಿಂದೂ ಸಂಘಟನೆಯ ಚಟುವಟಿಕೆ... ರಿಂಗಣಿಸತೊಡಗಿದವು.

ದಲಿತ, ಹಿಂದುಳಿದ ಮಠಗಳ ಸ್ವಯಂಘೋ... ಜಗದ್ಗುರುಗಳು ಆರ್‌ಎಸ್‌ಎಸ್ ತೆಕ್ಕೆಗೆ ... ಸೇರುತ್ತಿದ್ದಂತೆಯೇ ಚಿತ್ರದುರ್ಗದ ಶಾಂತಿ ಪಾ... ಭಂಗಬಂತು. ವಿಘ್ನೇಶ್ವರನ ಹೆಸರಲ್ಲಿ ವಿಘ್ನಗಳು ಶುರು... ಹಿಂದೂ ಜಾಗರಣಾ ವೇದಿಕೆ ಹುಟ್ಟಿಕೊಂಡಿತಲ್ಲದೆ ಪ್ರ... ಅದರ ಹೆಸರಿನಲ್ಲಿ ಗಣೇಶನನ್ನು ಕೂರಿಸುವ ... ಜೀವ ನೀಡಲಾಯಿತು. ಇದೇ ಮನುವಾದಿ ... ಚೆನ್ನಯ್ಯನ ಮುಂದಾಳತ್ವದಲ್ಲಿ ಹಿಂದೂತ್ವವಾದಿಗಳ



ಹಿಂದೆ ಪ್ರಗತಿಪರರಂತೆ ಪೋಸ್ ಕೊಡುತ್ತಿದ್ದಾಗ....



ಮೆರವಣಿಗೆ ಇಡೀ ದುರ್ಗದ ಮೈನಡುಗುವಂತೆ ಅಬ್ಬರಿಸ ತೊಡಗಿತು. ಹಿಂದೂ ಜಾಗರಣಾ ವೇದಿಕೆ ಕೂರಿಸುವ ವಿಘ್ನೇಶನಿಂದ ದುರ್ಗದ ಜನರ ವಿಘ್ನ ನಿವಾರಣೆಯಾಗುವ ಬದಲು ಪ್ರತಿವರ್ಷವೂ ಕೋಮುಗಲಭೆಯ ಭಯ ಆವರಿಸತೊಡಗಿತು. ಇಂಥಾ ಮನುವಾದಿಗಳ ಧಾರ್ಮಿಕ ಭಯೋತ್ಪಾದನೆಯ ಚಿತ್ರದುರ್ಗದ ಲೀಡರಾಗಿ ಮಾದಾರ ಚನ್ನಯ್ಯಸ್ವಾಮಿ ದಂಡನಾಯಕನಾಗುತ್ತಾರೆಂದರೆ ಏನೆನ್ನಬೇಕು?

ಅದೆಲ್ಲ ಒತ್ತಟ್ಟಿಗಿರಲಿ, ತನ್ನನ್ನು ತಾನು ದಲಿತ ಸಮುದಾಯದ ಜಗದ್ಗುರು ಎಂದು ಕರೆದುಕೊಳ್ಳುವ, ಅಂಬೇಡ್ಕರ್ ಭಾವಚಿತ್ರಗಳನ್ನು ತೂಗಿಹಾಕಿಕೊಳ್ಳುವ ಮೂಲಕ ಅವರ ಅನುಯಾಯಿ ಎಂದು ಬಿಂಬಿಸಿಕೊಳ್ಳುವ ಈ ಸ್ವಾಮಿ, ಸಿ.ಟಿ.ರವಿಯಂತಹ ಒಬ್ಬ ಉಗ್ರ ಕೋಮುವಾದಿಯ ಜೊತೆ ಕೈಜೋಡಿಸಿ ಸಮಾಜದ ಸ್ವಾಸ್ಥ ಕದಡುವ ಬಾಬಾಬುಡನ್‌ಗಿರಿ ವಿವಾದಕ್ಕೆ ಕೋಮುದ್ವೇಷ ಬಿತ್ತುವ ಕೆಲಸಕ್ಕೆ ಮುಂದಾಗುತ್ತಾರೆಂದರೆ ಈತ ಶರಣನಾಗಿ ಉಳಿಯುವುದಕ್ಕೆ ಲಾಯಕ್ಕೇ?

ಅಸಲಿಗೆ ದಾರ್ಶನಿಕರ ತತ್ವ, ವಚನಕಾರರ ಆದರ್ಶದ ಗಂಧಗಾಳಿಯ ಸೋಂಕಿಲ್ಲದ ಕೃಷ್ಣ ಎನ್ನುವ ಆಸಾಮಿ ಜಾತಿ ಹೆಸರಲ್ಲಿ ರಾತ್ರೋರಾತ್ರಿ ಜಗದ್ಗುರುವಾಗಿ ಅವತರಿಸಿದ್ದೇ ಶರಣ ಸಂಸ್ಕೃತಿಗೆ ಮಾಡಿದ ಅವಮಾನದಂತಿತ್ತು, ಅದು ಈಗ ಸ್ವತಃ ಮುರುಘಾ ಶರಣರಿಗೇ ಅರ್ಥವಾದಂತಿದೆ. ತನ್ನ ಪಾಡಿಗೆ ತಾನು ಆರ್‌ಎಸ್‌ಎಸ್ ದಾಸನಾಗಿದ್ದರೆ ಯಾರ ತಕರಾರೂ ಇರುತ್ತಿರಲಿಲ್ಲ. ಆದರೆ ಈತ ಹನ್ನೆರಡನೇ ಶತಮಾನದ ಶರಣ ಮಾದಾರ ಚೆನ್ನಯ್ಯನ ಹೆಸರಲ್ಲಿ ಅದೇ ಮಾದಿಗ ಸಮುದಾಯದ ಜಗದ್ಗುರುವಾಗಿ 'ನನ್ನ ಉದ್ಧಾರವಾದದ್ದೇ ಆರ್‌ಎಸ್‌ಎಸ್ ಮತ್ತು ಹಿಂದೂ ಸಂಘಟನೆಗಳಿಂದ. ನನ್ನ ಸಮುದಾಯ ಮುಖ್ಯವಾಹಿನಿಗೆ ಬರಲು ಈ ಸುದರ್ಶನ ಹೋಮ ಸಹಕಾರಿಯಾಗಲಿದೆ' ಎಂದು ಲಜ್ಜೆಗೆಟ್ಟು ಬಡಬಡಿಸುತ್ತಿರುವುದಕ್ಕೆ ಪ್ರಜ್ಞಾವಂತ ಸಮಾಜ ಧಿಕ್ಕಾರ ಕೂಗಲೇಬೇಕಿದೆ.

ಆರ್‌ಎಸ್‌ಎಸ್ ಪ್ರೇರಣೆಯಿಂದ ಬಿಜೆಪಿ ರಾಜಕಾರಣದಲ್ಲಿ ಕೈಯಾಡಿಸ ಹೊರಟಿರುವ ಚೆನ್ನಯ್ಯಸ್ವಾಮಿ ಒಂದು ವರ್ತಮಾನದ ಪ್ರಕಾರ ರಾಜಕೀಯ ಮಹತ್ವಾಕಾಂಕ್ಷಿಯಾಗಿದ್ದಾರಂತೆ. ಮಾದಾರ ಚೆನ್ನಯ್ಯ ಬಿಜೆಪಿಯಲ್ಲಿನ ಸದ್ಯದ ಯಡ್ಡಿ-ಈಶ್ವರಪ್ಪನ ನಡುವಿನ ರಾಜಕೀಯ ದೊಂಬರಾಟವನ್ನು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆನ್ನುವ ಗಾಳಿಸುದ್ದಿ ದಟ್ಟವಾಗೇ ಹರಿದಾಡುತ್ತಿದೆ. ತನ್ನ ರಾಜಕೀಯ ಅಸ್ತಿತ್ವಕ್ಕಾಗಿ ಅರ್ಥವಿಲ್ಲದ 'ಹಿಂದ' ಕಟ್ಟಿಕೊಂಡು ಅಲೆದಾಡುತ್ತಿರುವ ಈಶ್ವರಪ್ಪನನ್ನು ಬೆಂಬಲಿಸುವಂತೆ ಮಾತಾಡಿರುವ ಮಾದಾರ ಚೆನ್ನಯ್ಯ ಒಳಗಿಂದೊಳಗೇ ದೂರವಾಣಿ ಸಂಭಾಷಣೆಯಲ್ಲಿ ಯಡ್ಡಿ ಮಹಾಶಯನಿಗೂ 'ಜೈಕಾಸ್ತು' ಅಂದಿರುವ ಸುದ್ದಿಯೂ ಇದೆ. ಜಾತಿ ಜಾಗೃತಿಗಿಂತ ತನ್ನ ಸ್ವಾರ್ಥ ರಾಜಕೀಯ ದಾಹಕ್ಕೇ ಹಾತೊರೆಯುತ್ತಿರುವ ಮಾದಾರ ಚೆನ್ನಯ್ಯ ಸ್ವಾಮಿ ಮುಂಬರುವ ಪಾರ್ಲಿಮೆಂಟ್ ಚುನಾವಣೆಗೆ ಬಿಜೆಪಿಯಿಂದ ಕಣಕ್ಕಿಳಿದರೂ ಇಳಿಯಬಹುದೆನ್ನುವ ಕುಚೋದ್ಯಕ್ಕೆ ಆಹಾರವಾಗುತ್ತಿದ್ದಾರೆ.

ಶರಣ ಸಂಸ್ಕೃತಿಗೆ ವಿರುದ್ಧವಾದ ಜೋತಿಷ್ಯ, ಪವಾಡ, ಪೌರೋಹಿತ್ಯಾಚರಣೆಯ ಧರ್ಮಗಳನ್ನು ನಂಬುವ ಮಾದಾರ ಚೆನ್ನಯ್ಯ ಮೊದಲು ಶರಣರ ಹೆಸರಿನ ಪೀಠದಿಂದ ಹೊರಬಂದು ಆರ್‌ಎಸ್‌ಎಸ್, ಬಿಜೆಪಿ, ಹಿಂದೂ ಜಾಗರಣಾ ವೇದಿಕೆಯ ಸಖ್ಯ ಬೆಳೆಸಲಿ, ಆಗ ಆತನಿಗೆ ಮನುವಾದಿಗಳಿಂದ ಸಿಗುವ ಮನ್ನಣೆ ಎಂತದ್ದು ಎಂಬುದು ಅರ್ಥವಾಗುತ್ತದೆ ಎಂತ ಪ್ರಗತಿಪರರು ಎಸೆದಿರುವ ಸವಾಲಿನಲ್ಲಿ ಅರ್ಥವಿದೆ. ಹಾಗೊಂದು ವೇಳೆ ಮಠದಿಂದ ಹೊರಬಂದರೆ ಮಾದಾರ ಚೆನ್ನಯ್ಯನಿಗೆ ಆರೆಸ್ಸೆಸ್ ಅಡ್ಡೆಯಲ್ಲಿ ಕಿಂಚಿತ್ತೂ ಮನ್ನಣೆ ಸಿಗುವುದಿಲ್ಲ, ಅಂದಹಾಗೆ, ಈ ಮಾದಾರ ಚೆನ್ನಯ್ಯ ಮಠದ ಕಾರ್ಯದರ್ಶಿಯಾಗಿರೋದು ಸಮಾಜ ಕಲ್ಯಾಣಮಂತ್ರಿ ಹೆಚ್.ಆಂಜನೇಯ. ಆದರೆ ಆಂಜನೇಯ ಮತ್ತು ಚೆನ್ನಯ್ಯನ ನಡುವೆ ಯಾವುದೇ ಸಾಮರಸ್ಯವಿಲ್ಲ, ಈ ಕಾರಣಕ್ಕೇ ಹಳ್ಳ ಹಿಡಿದಿರುವ ಮಠದ ಹೆಗಲಿಗೆ ಚೆನ್ನಯ್ಯ ಈಗ ಮನುವಾದದ ಹೊರೆ ಹೊರಿಸಿ ಧಸಕ್ಕನೆ ಕುಸಿಯುವಂತೆ ಮಾಡುತ್ತಿದ್ದಾರೆ. ಇದಕ್ಕೊಂದು ಫುಲ್‌ಸ್ಟಾಪ್ ಇಡುವ ಕೆಲಸವಲ್ಲದಿದ್ದರೂ, ಕಡೇಪಕ್ಷ ಅರ್ಧವಿರಾಮ ಹಾಕುವ ಪ್ರಯತ್ನವಾದರೂ ಪ್ರಜ್ಞಾವಂತ ಸಮಾಜದಿಂದ ನಡೆಯಬೇಕಿದೆ. ಅದಕ್ಕೆ ಶ್ರಮ ಸಂಸ್ಕೃತಿಯ ಶರಣರುಗಳೇ ಮುನ್ನುಡಿ ಬರೆಯಬೇಕಿದೆ.

■ ಟಿ.ಎನ್. ಷಣ್ಮುಖ


ಭ್ರಷ್ಟ ಭೀಮಾನಾಯ್ಕನ ಬೆತ್ತಲು ಮಾಡಿದ 'ಡೆತ್‌ನೋಟ್'

05 ◀◀

ಹಣವೆಂದು ಫಿಕ್ಸ್ ಮಾಡಿದ್ದ ಭೀಮಾನಾಯ್ಕ್ ಸ್ವಾಹಾ ಮಾಡುವುದನ್ನೇ ಕರಗತ ಮಾಡಿಕೊಂಡಿದ್ದ.

ಬಳ್ಳಾರಿ ಮೂಲದ ರಾಜಕಾರಣಿಯೊಬ್ಬರ ಕೃಪೆಯಿಂದಲೇ ಬೆಂಗಳೂರಿನ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಭೀಮಾನಾಯ್ಕ್ ವಕ್ಕರಿಸಿದ. ಬೆಂಗಳೂರು ನಗರ ಮತ್ತು ಗ್ರಾಮೀಣ ಎರಡು ವಿಭಾಗಗಳಿಗೂ ಈ ಹೇತ್ಲಾಂಡಿ ನಾಯ್ಕ್‌ನೇ ವಿಶೇಷ ಭೂಸ್ವಾಧೀನಾಧಿಕಾರಿಯಾದ್ದರಿಂದ ಅವನ ದರೋಡೆ ಎಗ್ಗಿಲ್ಲದಂತೆ ಸಾಗಿತ್ತು. ತಿಂಗಳೊಂದಕ್ಕೆ ಕೋಟ್ಯಾಂತರ ಅಮೇಧ್ಯ ಈತನ ತಿಜೋರಿ ಸೇರಲಾರಂಭಿಸಿತು. ತನ್ನ ಕಾರ್ಯವ್ಯಾಪ್ತಿಯ ಆನೇಕಲ್, ಯಲಹಂಕ, ಕೆ.ಆರ್.ಪುರಂ, ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ-ದಕ್ಷಿಣ... ಹೀಗೆ ಎಲ್ಲಾ ಕಡೆಯೂ ಭೂಸ್ವಾಹಾ ಮಾಡಿದ್ದ. ಭೂಗಳ್ಳರೊಂದಿಗೆ ವ್ಯವಹಾರಕ್ಕೆ ಕುಂತು ಭರ್ತಿಯಾಗಿ ಮೇಯುತ್ತಿದ್ದ. ಇವನ ವೇಷಭೂಷಣ ನೋಡಿದರೆ ಈತ ನೂರಾರು ಕೋಟಿ ಹಣ ಇಟ್ಟಿರುವ ಮನುಷ್ಯನಾ ಎಂಬ ಸಂದೇಹ ಬಂದೇ ಬರುತ್ತದೆ. ಆರ್ಡಿನರಿ ಪ್ಯಾಂಟು-ಶರ್ಟು ಹಾಕಿಕೊಂಡು ಅದರ ಮೇಲೊಂದು ಹಳೇ ಕೋಟು ಹಾಕಿಕೊಂಡು ಬರುತ್ತಿದ್ದ ಭೀಮಾನಾಯ್ಕ್, ಅಬ್ಬೇಪಾರಿಯಂತೆ ಕಾಣುತ್ತಿದ್ದ. ಆದರೆ ಈ ಅಬ್ಬೇಪಾರಿ ಬೆಂಗಳೂರಿನ ಯಲಹಂಕದ ಅಟ್ಟೂರಿನಲ್ಲಿ ಎಬ್ಬಿಸಿರುವ ದಿವಿನಾದ ಬಂಗಲೆಯ ಮೌಲ್ಯವೇ 4 ಕೋಟಿಯಷ್ಟಾಗುತ್ತದೆ. ಈತನ ಬೆರಳಲ್ಲಿದ್ದ ವಜ್ರದ ಉಂಗುರದ ಮೌಲ್ಯವೇ 50 ಲಕ್ಷ. ಸುದರ್ಶನ್ ಸಿಲ್ಕ್ ಮತ್ತು ರೇಮಂಡ್ಸ್ ಅಂಗಡಿಯಲ್ಲಿ 50 ಲಕ್ಷ ಮೌಲ್ಯದ ಬಟ್ಟೆ ಖರೀದಿ, ಕಮರ್ಷಿಯಲ್ ಸ್ಟ್ರೀಟ್‌ನ ಪ್ರೆಸ್ಟೀಜ್ ಬಟ್ಟೆ ಅಂಗಡಿಯಲ್ಲಿ 50 ಲಕ್ಷ ರೂ.ಗಳ ಬಟ್ಟೆ ಖರೀದಿಸಿದ್ದ ಎಂದರೆ ಭೀಮಾನಾಯ್ಕ್‌ನ ಶೋಕಿ ಎಂತಹದ್ದಿರಬೇಕಲ್ಲವೇ? ತಿರುಗಲು ತಮ್ಮಂದಿರ ಹೆಸರಿನಲ್ಲಿ ಕೊಂಡುಕೊಂಡಿದ್ದ ದುಬಾರಿ ಕಾರುಗಳಿದ್ದವು. ಇಲಾಖೆಯ ಹೊರಗೂ ಹಣ ಮಾಡುವ ಕಲೆ ಕರಗತ ಮಾಡಿಕೊಂಡಿದ್ದ. ಕರ್ನಾಟಕ ಸವಿತಾ ಸಮಾಜದ ಆಡಳಿತಾಧಿಕಾರಿ ಹಾಗೂ ಚುನಾವಣಾಧಿಕಾರಿಯಾಗಿದ್ದ ನಾಯ್ಕ್, ಸಂಸ್ಥೆಯ ಅಕೌಂಟೆಂಟ್‌ನನ್ನು ಬುಟ್ಟಿಗೆ ಹಾಕಿಕೊಂಡು ಸಂಸ್ಥೆಯ 25 ಲಕ್ಷ ಹಣವನ್ನು ತಿಂದು ತೇಗಿದ್ದ.

ಭೀಮಾನಾಯ್ಕ್, ಬಳ್ಳಾರಿ, ಬೆಳಗಾವಿ, ಬೆಂಗಳೂರಿನಲ್ಲಿ ಮಾಡಿರುವ ಕೋಟ್ಯಂತರ ಮೌಲ್ಯದ ಆಸ್ತಿ-ಪಾಸ್ತಿಗಳ ವಿವರ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದು ಈತನ ವಿರುದ್ಧ ತನಿಖೆ ನಡೆಸಿ ಅಕ್ರಮ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ದೂರು ನೀಡಿದ್ದರು. ಅದರಂತೆ ಕಂದಾಯ ಇಲಾಖೆ ಅಧಿಕಾರಿಗಳು ನಾಯ್ಕ್‌ನ ಅಕ್ರಮ ಆಸ್ತಿಗಳನ್ನು ಒಂದೊಂದೇ ತೆಗೆಯಲಾರಂಭಿಸಿದ್ದರು. ಹೀಗಾದ್ರೆ ನನ್ನ ಅಕ್ರಮ ಸಂಪತ್ತನ್ನು ಸರ್ಕಾರ ವಶಪಡಿಸಿಕೊಳ್ಳುವುದು ಖಚಿತ ಎಂದು ಅಂಡು ಸುಟ್ಟ ಬೆಕ್ಕಿನಂತೆ ಕಂದಾಯ ಸಚಿವ ಪಿ.ಎ.ನಾಗರಾಜು ಹತ್ತಿರ ಓಡಿದ ನಾಯ್ಕ್ ಭರ್ತಿ 25 ಲಕ್ಷ ರೂ. ಕಪ್ಪ ಸಲ್ಲಿಸಿ, ತನ್ನ ವಿರುದ್ಧದ ತನಿಖೆ ಆಗದಂತೆ ಮಾಡಬೇಕೆಂದು ಡೀಲು ಕುದುರಿಸಿದ್ದ. ಮನುಷ್ಯರಿಗಷ್ಟೇ ಅಲ್ಲ, ತನ್ನ ಪಾಪ ಕೃತ್ಯಗಳನ್ನು ಮರೆಮಾಚುವಂತೆ ಕುಕ್ಕೆ ಸುಬ್ರಮಣ್ಯ ಹಾಗೂ ವಸಂತನಗರದ ದತ್ತ ಗುರುಮಠಕ್ಕೆ ತಲಾ 5 ಲಕ್ಷ ಸಾಮಗ್ರಿಗಳನ್ನು ದೇವರಿಗೆ ಲಂಚವಾಗಿ 10.07.16ರಂದು ನೀಡಿದ್ದ. ಆದರೆ ಪಾಪದ ಕೊಡ ತುಂಬಿದ ಮೇಲೆ ಇಲ್ಲದ ದೇವರು ತಾನೆ ಏನು ಮಾಡಿಯಾನು...



ಭೀಮಾನಾಯ್ಕ್ ಅರೆಸ್ಟ್

ರಮೇಶ್ ಆತ್ಮಹತ್ಯೆ ಸುದ್ದಿ ತಿಳಿಯುತ್ತಿದ್ದಂತೆಯೇ ತಮ್ಮ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡ ಭೀಮಾನಾಯ್ಕ್ ಹಾಗೂ ಆತನ ಕಾರು ಚಾಲಕ ಮೊಹಮದ್ ನಾಪತ್ತೆಯಾಗಿದ್ದರು. ಭೀಮಾನಾಯ್ಕ್‌ನ ಬೆನ್ನುಬಿದ್ದ ಮಂಡ್ಯ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಮೂರು ತಂಡವನ್ನು ರಚಿಸಿ ಕಲ್ಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗೆ ಕಳುಹಿಸಿದ್ದರು. ಕೊನೆಗೂ ಭೀಮಾನಾಯ್ಕ್ ಕಲ್ಬುರ್ಗಿಯ ತನ್ನ ಸಂಬಂಧಿಕರ ಮನೆಯಲ್ಲಿ ತಂಗಿದ್ದಾನೆಂಬ ಖಚಿತ ಮಾಹಿತಿ ಮೇರೆಗೆ ಡಿಸೆಂಬರ್ 11ರಂದು ಬಂಧಿಸಿ ಮದ್ದೂರಿಗೆ ಕರೆತಂದಿದ್ದರು.

ಸರ್ಕಾರ ಕೂಡ ರಮೇಶನ ಆತ್ಮಹತ್ಯೆ ಪ್ರಕರಣವನ್ನು ಸಿಐಡಿಗೆ ವಹಿಸಿರುವುದರಿಂದ ಮದ್ದೂರು ಪೊಲೀಸರು ಆರೋಪಿಗಳಾದ ಭೀಮಾನಾಯ್ಕ್ ಹಾಗೂ ಕಾರು ಚಾಲಕ ಮಹಮದ್‌ನನ್ನು ಸಿಐಡಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಸಿಐಡಿ ಅಧಿಕಾರಿ ಮಾರ್ಟಿನ್ ನೇತೃತ್ವದಲ್ಲಿ ತಂಡ ನಡೆಸಿದ ವಿಚಾರಣೆ ವೇಳೆ ರಮೇಶ್ ಡೆತ್‌ನೋಟ್‌ನಲ್ಲಿ ಬರೆದಿರುವ ವಿಚಾರಗಳಲ್ಲಿ ಬಹಳಷ್ಟು ಸತ್ಯವಿದ್ದು, ಕಪ್ಪುಹಣ ಬಿಳಿ ಮಾಡಿದ್ದಾಗಿ ಆತ ಒಪ್ಪಿಕೊಂಡಿದ್ದಾನೆ. ಆದರೆ ಜನಾರ್ದನ ರೆಡ್ಡಿಯ ಹೆಸರನ್ನು ಮಾತ್ರ ಹೇಳಿಲ್ಲ. ಆದರೆ ರಮೇಶ್ ಮದ್ದೂರಿನ ಇಬ್ಬರು ಉದ್ಯಮಿಗಳ ಮೂಲಕ ಹಣ ಬದಲಾವಣೆ ಮಾಡಿಕೊಟ್ಟಿದ್ದ. ಆ ಇಬ್ಬರು ಉದ್ಯಮಿಗಳಿಗೆ 8 ಲಕ್ಷ ಕಮಿಷನ್‌ನಲ್ಲಿ ರಮೇಶ್ ಪಾಲು ಕೊಟ್ಟಿರಲಿಲ್ಲ. ಹಾಗಾಗಿ ಅವರು ಅವನ ಹಿಂದೆ ಬಿದ್ದಿದ್ದರೇ ಹೊರತು ತಾವಲ್ಲ ಅಂತ ತಿಪ್ಪೆ ಸಾರಿಸುವ ವ್ಯರ್ಥ ಪ್ರಯತ್ನ ಮಾಡಿದ್ದಾನೆ. ಈ ಪ್ರಕರಣದಲ್ಲಿ ಇನ್ನೂ ಹಲವು ವ್ಯಕ್ತಿಗಳ ಹೆಸರು ಕೇಳಿಬರುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹಲವರು ಬಂಧನವಾಗುವ ಲಕ್ಷಣಗಳು ಕಂಡು ಬಂದಿದೆ.

ಈ ಮಧ್ಯೆ ರಾಮನಗರದ ಐಜೂರು ಠಾಣೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಸುರೇಶ್ ಎಂಬಾತ ಭೀಮನಾಯ್ಕ್‌ನ ವಿರುದ್ಧ ಹಲ್ಲೆ ಹಾಗೂ ವಂಚನೆ ಪ್ರಕರಣ ದಾಖಲಿಸಿದ್ದಾನೆ. ನವೆಂಬರ್ 17ರಂದು ರಮೇಶ್, ಭೀಮಾನಾಯ್ಕ್‌ರ 50 ಲಕ್ಷ ಹಣವನ್ನು ಬದಲಾವಣೆ ಮಾಡಲು ರಾಮನಗರಕ್ಕೆ ತಂದಿದ್ದ. ಆದರೆ ಹಣ ಬದಲಾವಣೆ ಸಾಧ್ಯವಾಗಲಿಲ್ಲ. ಈ ಹಣದಲ್ಲಿ 8 ಲಕ್ಷ ಹಣ ಕಡಿಮೆಯಾಗಿತ್ತು. ಈ ವಿಷಯದಲ್ಲಿ ತನ್ನ ಸಹಚರರ ಜೊತೆ ಭೀಮಾನಾಯ್ಕ್ ನನ್ನ ಮೇಲೆ ಹಲ್ಲೆ ಮಾಡಿದ್ದಾನೆ ಎಂಬುದು ಸುರೇಶ್‌ನ ದೂರಿನ ಸಾರಾಂಶ.

ಅದೇನೇ ಇರಲಿ, ಮೂರು ಮತ್ತೊಂದು ಭ್ರಷ್ಟರ ಪ್ರಕರಣದಂತೆ ಇದೂ ಸರಿದು ಹೋಗದೆ ಪರಮಭ್ರಷ್ಟ, ಅಕ್ರಮ ಆಸ್ತಿಗಳ ಸರದಾರ ಭೀಮಾನಾಯ್ಕನನ್ನು ಸಿಐಡಿ ಅಧಿಕಾರಿಗಳು ಚೆನ್ನಾಗಿ ತಡವಿಕೊಂಡು ಘಟಾನುಘಟಿ ತಿಮಿಂಗಿಲಗಳು ಬೀದಿಗೆ ಬರುವಂತೆ ಮಾಡಬೇಕಿದೆ. ಅದಕ್ಕೂ ಮೊದಲು ಅವನ ಅಷ್ಟೂ ಅಕ್ರಮ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಸಾಹಸಕ್ಕೆ ಮುಂದಾಗಬೇಕಿದೆ.

■ ಮಂಡ್ಯ ನಾಗೇಶ್

ಕೊಡಗು: ಬಡವರ ಮೇಲೆ ಅರಣ್ಯ ಇಲಾಖೆಯ ದೌರ್ಜ





ಅರಣ್ಯ ಇಲಾಖೆ ಜಗತ್ತು ಪೂರ್ತಿ ತನ್ನ ವ್ಯಾಪ್ತಿಗೆ ಬರುತ್ತದೆ ಎನ್ನುವಂತೆ ವರ್ತಿಸುತ್ತದೆ. ಪರಿಸರ ಸಂರಕ್ಷಣೆ ಮಾಡಬೇಕು ಎನ್ನುವ ಕಾರಣಕ್ಕಾಗಿ ಅರಣ್ಯ ಇಲಾಖೆಯ ಅಧಿಕಾರಿಗಳು ನಿರಂತರವಾಗಿ ಮನುಷ್ಯರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಾ ಬರುವುದನ್ನು ನಾವು ಕಾಣುತ್ತಿದ್ದೇವೆ. ಕೆಲವೊಂದು ವೈಪರೀತ್ಯಗಳು ಮತ್ತು ಅಸಮತೋಲನಕ್ಕೆ ಪರಿಸರ ನಾಶವೇ ಕಾರಣ ಎಂಬುದನ್ನು ಮುಂದಿಟ್ಟುಕೊಂಡು ಅರಣ್ಯ ಇಲಾಖೆ ನಿರಂತರವಾಗಿ ಬಡ ವರ್ಗದವರನ್ನು ಶೋಷಣೆ ಮಾಡುವುದನ್ನು ಗಮನಿಸಬಹುದಾಗಿದೆ.

ಅವರಿಗೆ ಜಗತ್ತಿನ ಯಾವ ನಿಯಮಗಳು ಅನ್ವಯವಾಗುವುದಿಲ್ಲ. ಪರಿಸರ ಎಂದು ಹೇಳಿದರೆ ಎಲ್ಲರೂ ಬಾಗುತ್ತಾರೆ ಮತ್ತು ಅವರ ಮಾತಿಗೆ ಮನ್ನಣೆ ಸಿಗುತ್ತದೆ ಎನ್ನುವ ಕಾರಣಕ್ಕಾಗಿ ನಿರ್ದಾಕ್ಷಿಣ್ಯವಾಗಿ ಅರಣ್ಯ ಇಲಾಖೆಯವರು ವರ್ತಿಸುವುದನ್ನು ಕಾಣಬಹುದಾಗಿದೆ. ಪರಿಸರದ ಹೆಸರಿನಲ್ಲಿ ಅವರು ನಡೆಸುವ ಗೂಂಡಾಗಿರಿಯನ್ನು ನಕಲಿ ಪರಿಸರವಾದಿಗಳು ಬೆಂಬಲಿಸುತ್ತಾರೆ. ತಾವು ಎಲ್ಲಿ ಇಂತಹ ಪರಿಸರವಾದಿಗಳ ಅವಕೃಪೆಗೆ ಪಾತ್ರರಾಗುತ್ತೇವೆಯೋ ಎಂಬ ಭಯದಿಂದ ರಾಜಕೀಯ ಪಕ್ಷಗಳು ಮೌನ ವಹಿಸುತ್ತವೆ. ಅರಣ್ಯ ಇಲಾಖೆಯವರ ಮತ್ತು ನಕಲಿ ಪರಿಸರವಾದಿಗಳ ಸಹವಾಸವೇ ಬೇಡ ಎನ್ನುವ ರೀತಿ ಸರಕಾರಗಳು ಕೂಡ ಇರುತ್ತವೆ. ಆದ್ದರಿಂದ ಬಡವರ್ಗದವರು ಮತ್ತು ಪರಿಸರ ಸಂರಕ್ಷಣೆ ಮಾಡುವವರು ಸಂಕಷ್ಟಕ್ಕೆ ಒಳಗಾಗುತ್ತಲೇ ಇರುತ್ತಾರೆ.

ಕೊಡಗಿನ ಮಾಲ್ದಾರೆ ಸಮೀಪದ ದಿಡ್ಡಳ್ಳಿ ಎಂಬಲ್ಲಿ ಕೆಲವು ದಿನಗಳ ಹಿಂದೆ ಅರಣ್ಯ ಇಲಾಖೆಯವರ ದಿಢೀರ್ ಕಾರ್ಯಾಚರಣೆಯಿಂದ ಸುಮಾರು 537 ಕುಟುಂಬಗಳು ಬೀದಿ ಪಾಲಾದವು. ಆ ಭಾಗದಲ್ಲಿ ಅರಣ್ಯ ಪ್ರದೇಶ ಹಾಗೂ ಕಂದಾಯ ಇಲಾಖೆಗೆ ಸೇರಿದ ಪೈಸಾರಿ ಜಮೀನು ಯಥೇಚ್ಛವಾಗಿ ಇದೆ. ದಿಡ್ಡಳ್ಳಿ ಎಂಬಲ್ಲಿ ಕಳೆದ ಕೆಲವು ಸಮಯಗಳಿಂದ ಈ ಕುಟುಂಬಗಳು ವಾಸಿಸುತ್ತಿವೆ. ಈ ಕುಟುಂಬಗಳು ಅಲ್ಲಿ ವಾಸ ಮಾಡಲು ಕಾರಣ ಅರಣ್ಯ ಇಲಾಖೆಯೇ ಆಗಿದೆ. ಆಡಳಿತ ಪಕ್ಷದವರ ದುರಾಡಳಿತವೂ ಇದಕ್ಕೆ ಕಾರಣ ಎಂದು ಹೇಳಬಹುದು.

ಕೆಲವು ತಿಂಗಳ ಹಿಂದೆ ಸುಮಾರು 10 ಕುಟುಂಬಗಳು ಆ ಪ್ರದೇಶದಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸಲು ತೊಡಗಿದವು. ಹಾಗೆ ಗುಡಿಸಲು ಕಟ್ಟಿದಾಗಲೇ ಅರಣ್ಯ ಇಲಾಖೆಯವರು ತಡೆಗಟ್ಟಬೇಕಿತ್ತು ಮತ್ತು ಅವರು ಗುಡಿಸಲು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬಾರದಿತ್ತು. ಅರಣ್ಯ ಇಲಾಖೆಯ ಕೆಲವು ಅಧಿಕಾರಿಗಳ ಪ್ರಕಾರ ಅರಣ್ಯ ಪ್ರದೇಶದಲ್ಲಿ ಯಾವುದೇ ಅಕ್ರಮ ಚಟುವಟಿಕೆ ನಡೆದರೆ ಕೂಡಲೇ ಅದು ಅವರ ಗಮನಕ್ಕೆ ಬರುತ್ತದೆ. ಹಾಗಿದ್ದರೂ ಕೂಡ ಅರಣ್ಯ ಇಲಾಖೆ ಆ ಹತ್ತು ಕುಟುಂಬಗಳಿಗೆ ಗುಡಿಸಲು ಕಟ್ಟಿಕೊಳ್ಳಲು ಅವಕಾಶವನ್ನು ಮಾಡಿಕೊಟ್ಟಿತ್ತು.

ಅದಾದನಂತರ ಅರಣ್ಯ ಇಲಾಖೆ ಆ ಗುಡಿಸಲುಗಳನ್ನು ತೆರವುಗೊಳಿಸಲು ಮುಂದಾಯಿತು. ಆಗ ಆಗಸ್ಟ್ ತಿಂಗಳು. ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್. ಸೀತಾರಾಂರವರ ಗಮನಕ್ಕೆ ಇದನ್ನು ತರಲಾಗಿತ್ತು. ಸ್ವಾತಂತ್ರ್ಯ ದಿನಾಚರಣೆಯ ಆಸುಪಾಸಿನಲ್ಲಿ ತೆರವುಗೊಳಿಸುವುದು ಬೇಡ. ನಂತರದ ದಿನಗಳಲ್ಲಿ ಕ್ರಮ ತೆಗೆದುಕೊಳ್ಳಿ ಎಂದು ಸಚಿವರು ಮೌಖಿಕವಾಗಿ ಸೂಚಿಸಿದ ಹಿನ್ನೆಲೆಯಲ್ಲಿ ತೆರವು ಕಾರ್ಯವನ್ನು ಸಂಬಂಧಪಟ್ಟವರು ಕೈಬಿಟ್ಟಿದ್ದರು.

ಸುಮಾರು 10 ಗುಡಿಸಲುಗಳು ಭದ್ರವಾದ ನಂತರ ಮತ್ತಷ್ಟು ಗಿರಿಜನರು ಅಲ್ಲಿಗೆ ಬಂದು ಗುಡಿಸಲು ಹಾಕಿಕೊಂಡರು. ಅರಣ್ಯ ಇಲಾಖೆ ಆಗಲಿ, ಕಂದಾಯ ಇಲಾಖೆಯಾಗಲಿ ಇದಕ್ಕೆ ಅಡ್ಡಿ ಮಾಡಲಿಲ್ಲ. ಹಾಗಾಗಿ ತಾವು ಅಲ್ಲಿ ನೆಲೆ ಕಂಡುಕೊಳ್ಳಬಹುದು ಎಂದು ಪರಿಶಿಷ್ಟ ಪಂಗಡಕ್ಕೆ ಸೇರಿದ ಜೇನು ಕುರುಬರು ಮತ್ತು ಎರವ ಜನಾಂಗಕ್ಕೆ ಸೇರಿದವರು ಲೆಕ್ಕಾಚಾರ ಹಾಕಿ ಹಂತಹಂತವಾಗಿ ಆ ಪ್ರದೇಶದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸಲಾರಂಭಿಸಿದರು.

537 ಕುಟುಂಬಗಳು ಅಲ್ಲಿ ನೆಲೆ ನಿಂತ ನಂತರ ಏಕಾಏಕಿ ಡಿಸೆಂಬರ್ 7ರ ಬೆಳಗ್ಗೆ ಅರಣ್ಯ ಇಲಾಖೆಯವರು ಜೆಸಿಬಿಯನ್ನು ತೆಗೆದುಕೊಂಡು ಹೋಗಿ, ಗುಡಿಸಲುಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಮುಂದಾದರು. ಪ್ರತಿರೋಧಗಳು ಕಂಡುಬಂದರೂ ಕೂಡ ಅರಣ್ಯ ಇಲಾಖೆಯವರು ವ್ಯವಸ್ಥಿತವಾಗಿ ಈ ಕಾರ್ಯಾಚರಣೆಯನ್ನು ಮಾಡಿದ ಕಾರಣ ಅಷ್ಟೊಂದು ಪ್ರತಿರೋಧ ವ್ಯಕ್ತವಾಗಲು ಸಾಧ್ಯವಾಗಲಿಲ್ಲ.

ಈ ಗಿರಿಜನ ಕುಟುಂಬಗಳಿಗೆ ಮುತ್ತಮ್ಮ ಮತ್ತು ಅಪ್ಪಾಜಿ ಎಂಬ ಇಬ್ಬರು ನಾಯಕರಿದ್ದರು. ಅವರು ಪ್ರತಿರೋಧವನ್ನು ಮಾಡಿದಾಗ ಮತ್ತು ಮುತ್ತಮ್ಮ ಅರಣ್ಯ ಇಲಾಖೆಯ ದೌರ್ಜನ್ಯವನ್ನು ವಿರೋಧಿಸಿ, ಬೆತ್ತಲೆ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದಾಗ, ಅವರನ್ನೂ ಸೇರಿದಂತೆ ಸುಮಾರು 10 ಮಂದಿಯನ್ನು ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದರು. ನೆಲೆಯನ್ನು ಕಳೆದುಕೊಂಡ ಈ ಕುಟುಂಬಗಳ ರೋದನ ಅರಣ್ಯ ರೋದನವಾಗಿತ್ತು. ಅವರನ್ನು ಯಾರೂ ಕೇಳುವಂತಹ ಪರಿಸ್ಥಿತಿಯಲ್ಲಿ ಇರಲಿಲ್ಲ.

ಅರಣ್ಯ ಇಲಾಖೆ ಶಾಮೀಲು

ಅರಣ್ಯ ಇಲಾಖೆ ಈ ಕುಟುಂಬಗಳು ಅಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುವಲ್ಲಿ ಪ್ರಮುಖವಾಗಿ ಶಾಮೀಲಾಗಿತ್ತು ಎಂದು ಅಪ್ಪಾಜಿ ಆರೋಪಿಸಿದ್ದಾರೆ. ಆರಂಭದಿಂದ 537ನೇ ಕುಟುಂಬ ಅಲ್ಲಿ ಗುಡಿಸಲು ಕಟ್ಟುವಾಗಲೂ ಅರಣ್ಯ ಇಲಾಖೆಯವರು ಯಾವುದೇ ರೀತಿಯಲ್ಲಿ ಆಕ್ಷೇಪಿಸಲಿಲ್ಲ. ಬದಲಿಗೆ ಗುಡಿಸಲು ಕಟ್ಟಿಕೊಂಡವರಿಗೆ ಹಕ್ಕುಪತ್ರಗಳನ್ನು ನೀಡಲಾಗುವುದು ಎಂದು ಅರಣ್ಯ ಇಲಾಖೆಯವರು ಆಶ್ವಾಸನೆ ನೀಡಿ, ಹಣವನ್ನು ಪಡೆದುಕೊಂಡಿದ್ದಾರೆ. ಬಡ ಕೂಲಿ ಕಾರ್ಮಿಕರಿಂದ ಸಂಗ್ರಹಿಸಿದ ಸುಮಾರು 6 ಲಕ್ಷ ರೂಪಾಯಿ ಹಣವನ್ನು ಅರಣ್ಯ ಅಧಿಕಾರಿಗಳಿಗೆ ನೀಡಿದ್ದು, ಯಾವ ಅಧಿಕಾರಿ ಎಷ್ಟು ಹಣವನ್ನು ಪಡೆದಿದ್ದಾರೆ ಎಂಬ ಮಾಹಿತಿಯನ್ನು ಕೂಡ ತಾನು ನೀಡಲು ಸಿದ್ಧ ಎಂದು ಅಪ್ಪಾಜಿ ಹೇಳಿದ್ದಾರೆ.

ಖಂಡಿತವಾಗಿಯೂ ಇದರಲ್ಲಿ ಒಂದಷ್ಟು ವಾಸ್ತವಾಂಶ ಇರಲೇಬೇಕು. ಆರಂಭದಲ್ಲಿ 10 ಕುಟುಂಬಗಳು ಅಕ್ರಮವಾಗಿ ನೆಲೆ ನಿಂತಾಗ, ಅವರನ್ನು ಆ ಹಂತದಲ್ಲಿ ತೆರವುಗೊಳಿಸುವುದು ಬೇಡ ಎಂದು ಉಸ್ತುವಾರಿ ಸಚಿವರು ಹೇಳಿದ್ದು ಹೌದು. ಆದರೆ ಮತ್ತೆ 527 ಕುಟುಂಬಗಳು ಅಲ್ಲಿ ಗುಡಿಸಲು ಕಟ್ಟಿಕೊಳ್ಳುವಾಗ ಅವರನ್ನು ತಡೆಯಬಾರದು ಎಂದು ಸಚಿವರೇನೂ ಆದೇಶಿಸಿರಲಿಲ್ಲ. ಹಾಗಾಗಿ ಇಲ್ಲಿ ಅರಣ್ಯ ಇಲಾಖೆಯವರು ಶಾಮೀಲಾಗಿ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾಗಿ ಈ ವಿಚಾರವು ತನಿಖೆಗೆ ಒಳಪಡಬೇಕಾಗಿದೆ.

ಉಸ್ತುವಾರಿ ಸಚಿವರ ನಿರ್ಲಕ್ಷ್ಯ

ಎಂ.ಆರ್.ಸೀತಾರಾಂ ಏತಕ್ಕಾಗಿ ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವರಾಗಿ ನೇಮಕಗೊಂಡಿದ್ದಾರೋ ತಿಳಿಯದು. ಅವರಿಗೆ ಕೊಡಗು ಜಿಲ್ಲೆಯ ಬಗ್ಗೆ ಯಾವುದೇ ಬದ್ಧತೆ ಅಥವ ಕಾಳಜಿ ಇಲ್ಲ. ತನ್ನನ್ನು ಉಸ್ತುವಾರಿ ಸಚಿವರಾಗಿ ನೇಮಿಸಿರುವುದರಿಂದ ವಿವಿಧ ಸಂಘಟನೆಯವರು ಉದ್ಘಾಟನೆಗೆ, ಶಂಕುಸ್ಥಾಪನೆಗೆ ಆಹ್ವಾನಿಸಿದರೆ ಆ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮತ್ತು ಆ ದಿನಾಂಕವನ್ನು ಹೊಂದಾಣಿಕೆ ಮಾಡಿಕೊಂಡು ಕೆ.ಡಿ.ಪಿ. ಸಭೆ ಅಥವ ಅಧಿಕಾರಿಗಳೊಂದಿಗೆ ಸಭೆ ನಡೆಸುವುದು. ಪುರುಸೊತ್ತು ಆದರೆ ಜನರ ಸಮಸ್ಯೆಯನ್ನು ಆಲಿಸುವುದು. ಇದು ಸೀತಾರಾಂರವರ ಕಾರ್ಯವೈಖರಿ. ಅವರಿಗೆ ತಾಳ್ಮೆಯಾಗಲಿ, ವ್ಯವಧಾನವಾಗಲಿ ಇಲ್ಲ. ಸಿಟ್ಟು ಅವರಿಗೆ ಬಳುವಳಿಯಾಗಿ ಬಂದಂತೆ ಇದೆ. ಜನರ ಸಮಸ್ಯೆಗಳಿಗೂ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ತನ್ನ ಜೊತೆಯಲ್ಲಿ ಇರುವ ಹರೀಶ್ ಎಂಬ ವ್ಯಕ್ತಿಯತ್ತ ಬೊಟ್ಟು ಮಾಡಿ 'ನಿಮ್ಮ ಅಹವಾಲು, ಅರ್ಜಿಗಳನ್ನು ಅವರಿಗೆ ನೀಡಿ' ಎನ್ನುತ್ತಾರೆ.

ಇಷ್ಟೊಂದು ಅಸಡ್ಡೆಯ ವ್ಯಕ್ತಿಗೆ ದಿಡ್ಡಳ್ಳಿಯಲ್ಲಿ ಗಿರಿಜನರನ್ನು ತೆರವುಗೊಳಿಸುವ ಸಂದರ್ಭದಲ್ಲಿ ಅದನ್ನು ತಡೆಯಲಾಗಲಿ ಅಥವ ತೆರವುಗೊಳಿಸಿದ ನಂತರ ಅವರಿಗೆ ಸಾಂತ್ವನ ಹೇಳಲಾಗಲಿ ಸಮಯವೇ ಇರಲಿಲ್ಲ. ಡಿ. 6ರಂದು ಕೊಡಗಿಗೆ ಆಗಮಿಸಿ, ಮಡಿಕೇರಿಯಲ್ಲಿ ವಾಸ್ತವ್ಯ ಹೂಡಿದ್ದರು. 7ರಂದು ವಿವಿಧ ಅಕಾಡೆಮಿಗಳ ಸಂಗಮ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ, ಆ ನಂತರ ಕೆ.ಡಿ.ಪಿ. ಸಭೆಯಲ್ಲಿ ಭಾಗವಹಿಸಿದ್ದರು. ಸಂಜೆ ವಾರ್ತಾ ಇಲಾಖೆಯ ಜನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಬೆಂಗಳೂರಿಗೆ ತೆರಳಿದರು. 7ರಂದು ದಿಡ್ಡಳ್ಳಿಯಲ್ಲಿ ಈ ಕುಟುಂಬಗಳನ್ನು ಬೀದಿಪಾಲು ಮಾಡಲಾಗಿತ್ತು.

ಉಸ್ತುವಾರಿ ಸಚಿವರ ಗಮನಕ್ಕೆ ಬಾರದೆ ಈ ತೆರವು ಕಾರ್ಯ ನಡೆಯಿತೇ ಅಥವ ಅವರ ನಿರ್ದೇಶನದಂತೆ ಈ ತೆರವು ಕಾರ್ಯ ನಡೆಯಿತೇ ಎಂಬುದು ಈಗ ಪ್ರಶ್ನೆಯಾಗಿದೆ. ಒಂದು ವೇಳೆ ಅವರ ನಿರ್ದೇಶನದಂತೆ ಈ ಚಟುವಟಿಕೆ ನಡೆದಿದ್ದರೆ ಖಂಡಿತವಾಗಿಯೂ ಗಿರಿಜನರ ಮೇಲೆ ಆದಂತಹ ದೌರ್ಜನ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ನೇರ ಹೊಣೆಯಾಗುತ್ತಾರೆ. ಅವರ ಗಮನಕ್ಕೆ ಬಾರದೆ ಅರಣ್ಯ ಇಲಾಖೆಯುವರು, ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯಲ್ಲಿಯೇ ಪ್ರಗತಿ ಪರಿಶೀಲನಾ ಸಭೆ ನಡೆಸುವ ವೇಳೆಯಲ್ಲಿ ತೆರವುಗೊಳಿಸಿದ್ದಾರೆ ಎಂದರೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಧಿಕಾರಿ ವರ್ಗದವರ ಮೇಲೆ ಹಿಡಿತವಿಲ್ಲ ಮತ್ತು ಅಧಿಕಾರಿ ವರ್ಗದವರಿಗೂ, ಉಸ್ತುವಾರಿ ಸಚಿವರ ಬಗ್ಗೆ ಭಯವಿಲ್ಲ ಎಂದಾಗುತ್ತದೆ.

ಏನೇ ಇರಲಿ, ಸುಮಾರು 537 ಬಡ ಕುಟುಂಬಗಳು ಸರಕಾರದ ಕ್ರಮದಿಂದಾಗಿ ಬೀದಿ ಪಾಲಾಗಿವೆ. ಹಸುಗೂಸುಗಳನ್ನು ಹೊತ್ತುಕೊಂಡು ಸಾಕಷ್ಟು ಮಹಿಳೆಯರು ಸಮೀಪದ ಮೈದಾನವೊಂದರಲ್ಲಿ ಕುಳಿತಿದ್ದಾರೆ. ದಿನದ ಕೂಲಿ ಇಲ್ಲ. ಹಾಗಾಗಿ ಮಕ್ಕಳು ಸೇರಿದಂತೆ ಎಲ್ಲರೂ ಹಸಿವಿನಿಂದಲೇ ಕಾಲ ಕಳೆಯಬೇಕಾಗಿದೆ. ತನ್ನ ಉಪಸ್ಥಿತಿಯಲ್ಲಿಯೇ ಇಂತಹದೊಂದು ದಾರುಣ ಘಟನೆ ನಡೆದಾಗ, ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಗ... ಆ ಬಡ ಕುಟುಂಬಗಳ ನೆರವಿಗೆ ಬರಬೇಕಾಗಿತ್ತು... ಬಡತನದ ಬಗ್ಗೆ ಅರಿವೇ ಇಲ್ಲದಂತಹ ಜಿಲ್ಲಾ ... ಸಚಿವರು ಅತ್ತ ದೃಷ್ಟಿ ಹಾಯಿಸಲೇ ಇಲ್ಲ. ಅವ... ಬೇಕಾಗಿಯೂ ಇರಲಿಲ್ಲ. ಏಕೆಂದರೆ ಅವರು ಕೆ... ಆಗಲಿ, ಪಕ್ಕದ ಮೈಸೂರಿನಲ್ಲಿ ಆಗಲಿ ಚು... ನಿಲ್ಲುವವರು ಅಲ್ಲ. ಹಾಗಾಗಿ ಅವರು ತಲೆಕೆಡಿಸಿ...

ಜಿಲ್ಲಾ ಕಾಂಗ್ರೆಸ್ ಸಮಿತಿಯಾದರೂ ... ತಲೆಕೆಡಿಸಿಕೊಂಡು ಧಾವಿಸಬೇಕಾಗಿತ್ತು. ಆದ... ಕಾಂಗ್ರೆಸಿಗೆ ಅಧ್ಯಕ್ಷರಾಗುವವರು ಯಾರು ಎಂಬು... ಕಳೆದ ಎರಡು ತಿಂಗಳಿನಿಂದ ಲಾಬಿ ಮಾಡಿಕೊ... ಕಳೆಯುತ್ತಿರುವ ಕಾಂಗ್ರೆಸಿಗರಿಗೂ ಈ ಬಗ್ಗೆ ಕಾ... ಹಾಗಾಗಿ ಅಲ್ಲಿಯ ಗಿರಿಜನರು ಅನಾಥರಾಗಿದಾ...

ಶಾಸಕರ ಭೇಟಿ

ಇಂತಹ ಯಾವುದೇ ಸಂದರ್ಭವನ್ನು ಉಪ... ಕೊಳ್ಳುವುದರಲ್ಲಿ ಸಿದ್ಧ ಹಸ್ತರಾದ ಶಾಸಕ ಕೆ.ಜಿ. ಬೋ... ಜಿಲ್ಲಾ ಪಂಚಾಯತಿಯ ಸದಸ್ಯರು ಮತ್ತು ಸ್ಥಾಯಿ ... ಅಧ್ಯಕ್ಷರುಗಳನ್ನು ಕರೆದುಕೊಂಡು ಅಲ್ಲಿಗೆ ಮುಂ... ಧಾವಿಸಿ, ಅರಣ್ಯ ಇಲಾಖೆಯ ಅಧಿಕಾರಿಗಳನ್... ಸಮಾಜ ಕಲ್ಯಾಣ ಇಲಾಖೆಯವರನ್ನು ... ತೆಗೆದುಕೊಂಡು, ಆ ಕುಟುಂಬಗಳಿಗೆ ಬದಲಿ ವ್ಯ... ಕಲ್ಪಿಸಿಕೊಡಬೇಕೆಂದು ಆಗ್ರಹಿಸಿದ್ದರು. ಅರಣ್ಯ ಅಧಿ... ಸುಮಾರು ಆರು ತಿಂಗಳುಗಳ ಕಾಲ ಆ ಕುಟು... ಅಲ್ಲಿ ವಾಸಿಸಲು ಅವಕಾಶ ಮಾಡಿಕೊಟ್ಟು ಮತ... ಮುಂದಾಗಿರುವುದನ್ನು ತರಾಟೆಗೆ ತೆಗೆದುಕೊಂಡರು... ಕಲ್ಯಾಣ ಇಲಾಖೆಯ ಮೂಲಕ ಅವರಿಗೆ ... ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು.

ತಡವಾಗಿ ಭೇಟಿ ನೀಡಿದ ಕಾಂ...

ಯಾವಾಗ ಬಿಜೆಪಿಯ ಶಾಸಕರು ಸ್ಥಳಕ್ಕೆ ... ನೀಡಿದ್ದಾರೆ ಎಂಬ ಅರಿವು ಕಾಂಗ್ರೆಸಿಗರಿಗೆ ಆ... ಆಗ ಮುಂದಿನ ಚುನಾವಣೆಯಲ್ಲಿ ಈ ಭಾ... ಸ್ಪರ್ಧಿಸಲು ಹವಣಿಸುತ್ತಿರುವ ಬಿ.ಟಿ. ಪ್ರದೀಪ್... ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯರವರೊಂದಿ... ಭೇಟಿ ನೀಡಿ, ಅನ್ನಭಾಗ್ಯ ಹಾಲು ಭಾಗ್ಯ ... ಹಲವು ಭಾಗ್ಯಗಳನ್ನು ಕರುಣಿಸಿದರು ಮತ್ತು ... ಬದಲಿ ವ್ಯವಸ್ಥೆ ಕಲ್ಪಿಸಲು ಕಾರ್ಯಕ್ರಮ... ರೂಪಿಸುವುದಾಗಿ ತಿಳಿಸಿದರು. ಈ ಕಾರ್ಯವ... ಉಸ್ತುವಾರಿ ಸಚಿವರು ಕೊಡಗಿನಲ್ಲಿ ಇದ್ದಾಗಲೇ ಕಾ... ಮಾಡಬೇಕಾಗಿತ್ತು. ಸಂಬಂಧಪಟ್ಟ ಅಧಿಕಾ... ಉಸ್ತುವಾರಿ ಸಚಿವರ ಮೂಲಕ ನಿರ್ದೇ... ಕೊಡಿಸಬೇಕಾಗಿತ್ತು.

ಕೇವಲ ಬಿಜೆಪಿಯವರು ಸ್ಥಳಕ್ಕೆ ಭೇಟಿ ... ಎನ್ನುವ ಕಾರಣಕ್ಕಾಗಿ ಕಾಂಗ್ರೆಸಿಗರು ಸ್ಥಳಕ್ಕೆ ... ವಿನಹ, ನಿಜವಾದ ಕಾಳಜಿ ಅವರಲ್ಲಿ ಇದ್ದಿದ್ದ... ಉಸ್ತುವಾರಿ ಸಚಿವರು ಕೊಡಗಿನಲ್ಲಿ ಇದ್ದಾಗಲೇ ... ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡ... ಹಾಗೊಂದು ವೇಳೆ ತಮ್ಮ ಕೈಮೀರಿ ಈ ಕ್ರಮ... ಸಚಿವರನ್ನು ಸ್ಥಳಕ್ಕೆ ಕರೆದುಕೊಂಡು ಹೆ... ಕಾರ್ಯವನ್ನಾದರೂ ಜಿಲ್ಲಾ ಕಾಂಗ್ರೆಸ್ ಸಮಿತಿ ಮ...


ಮೀಸಲು ಅರಣ್ಯ ಅಲ್ಲ

ದಿಡ್ಡಳ್ಳಿ ಪ್ರದೇಶ ಅರಣ್ಯ ಪ್ರದೇಶ, ಹಾಗಾಗಿ ... ಅಲ್ಲಿಂದ ತೆರವುಗೊಳಿಸಲಾಗುತ್ತಿದೆ ಎಂದು ಅರಣ್... ಹೇಳಿದೆ. ಆದರೆ ಆ ಪ್ರದೇಶವು ಮೀಸಲು ಅರ... ಎಂಬುದು ಅಲ್ಲಿಗೆ ತೆರಳಿದ ಎ.ಕೆ. ಸುಬ್ಬಯ... ದಾಖಲೆಗಳನ್ನು ಪರಿಶೀಲಿಸಿ ಬಹಿರಂಗಪಡಿ... ಬಡವರ್ಗದವರ ವಿರುದ್ಧ ಮಾಡುತ್ತಿರುವ ಪಿತೂ... ಎಂಬುದು ಅವರ ವಿಚಾರವಾಗಿದೆ. ಇಲ್ಲಿ ಸ... 106/7/ಎ.ಯಲ್ಲಿ 8,590.71 ಎಕರೆ ಪ್ರದೇಶವಿದ... ಹಲವರಿಗೆ ಹಕ್ಕುಪತ್ರವನ್ನು ನೀಡಲಾಗಿದೆ. ಇಲ್ಲಿ ಕ... ರಸ್ತೆ ನಿರ್ಮಾಣವಾಗಿದೆ. ಶಾಲೆಗಳು, ಅಂಗನವಾ... ವಿದ್ಯುಚ್ಛಕ್ತಿ ಸೌಲಭ್ಯ ಎಲ್ಲವೂ ಇದೆ.


▶▶







ಗಂಗಾವತಿ: ಕೋಮುಗಲಭೆ ಹಿಂದಿನ ದುಷ್ಟ 'ರಾಜಕೀಯ'



ಹಾಲಿ ಶಾಸಕ ಇಕ್ಬಾಲ್ ಅನ್ಸಾರಿ

ಗಂಗಾವತಿಯ ಕೋಮುದಳ್ಳುರಿಯ ಹಿಂದೆ ಕಾಣದ ಕೈಗಳ ಕುತಂತ್ರ ಅಡಗಿರುವುದು ಈಗ ನಿಧಾನಕ್ಕೆ ಬಯಲಾಗುತ್ತಿದೆ. ಕೋಮು ಸಾಮರಸ್ಯಕ್ಕೆ ಸಾಕ್ಷಿಯಾಗಬೇಕಿದ್ದ ಈದ್ ಮತ್ತು ಅಯ್ಯಪ್ಪ ಸ್ವಾಮಿ, ಹನುಮ ಜಯಂತಿಯನ್ನು ತನ್ನ ಕ್ಷುಲ್ಲಕ ರಾಜಕಾರಣಕ್ಕೆ ಕವಡೆ ಮಾಡಿಕೊಂಡ ದುಷ್ಟಶಕ್ತಿಗಳಿಂದಾಗಿ ಎರಡೂ ಕೋಮುಗಳಲ್ಲಿ ಹಬ್ಬದ ಸಂಭ್ರಮವೇ ಮರೆಯಾಗಿ ಆತಂಕದ ಕ್ಷಣಗಳು ನಿರ್ಮಾಣವಾಗಿದ್ದವು. ಧರ್ಮದ ವಿಚಾರವಾಗಿ ಹುಟ್ಟಿಕೊಂಡ ಸಣ್ಣ ಕಿಡಿಯೊಂದು ಕೋಮುಗಲಭೆಯ ಸ್ವರೂಪ ಪಡೆದು ದ್ವೇಷದ ಅಮಲು ಬಿತ್ತಿದೆ. ಇದನ್ನೇ ಹೊಂಚುಹಾಕಿ ಕಾಯುತ್ತಿದ್ದ ನೀಚ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಸಮಸ್ಯೆ ಬಗೆಹರಿಸುವುದರ ಬದಲು ಉರಿವ ಬೆಂಕಿಗೆ ತುಪ್ಪ ಸುರಿದು ಬಿಸಿ ಕಾಯಿಸಿಕೊಳ್ಳುತ್ತಿದ್ದಾರೆ. ದುರಂತವೆಂದರೆ ಯಥಾಪ್ರಕಾರ ಎರಡೂ ಸಮುದಾಯದ ಮುಗ್ಧ ಅಮಾಯಕ ಯುವಕರು ಪರಸ್ಪರ ಹೊಡೆದಾಡಿ, ರಕ್ತಸುರಿಸಿ, ಕೇಸು ಜಡಿಸಿಕೊಂಡು ಜೈಲು ಪಾಲಾಗಿದ್ದಾರೆ.

ಅಷ್ಟಕ್ಕೂ ನಡೆದಿದ್ದೇನು?


ಡಿಸೆಂಬರ್ 13ರ ಮಂಗಳವಾರ ಈದ್ ಹಬ್ಬವಿದ್ದ ಕಾರಣ ಕೆಲ ಮುಸ್ಲಿಂ ಯುವಕರು ಡಿಸೆಂಬರ್ 9ರ ಶುಕ್ರವಾರದಂದು ಗಂಗಾವತಿಯ 16ನೇ ವಾರ್ಡ್‌ನ ಬೀದಿ ಮತ್ತು ಕೆಲವು ಮನೆಗಳ ಮೇಲೆ ಬ್ಯಾನರ್ ಮತ್ತು ಧ್ವಜ ಕಟ್ಟುತ್ತಿದ್ದರು. ಅಲ್ಲೇ ಇರುವ ಸೀತಾಂಜನೇಯ ದೇವಾಲಯದಲ್ಲಿ ಪೂಜೆ ಮಾಡುತ್ತಿದ್ದ ಅಯ್ಯಪ್ಪ ಮಾಲಾಧಾರಿಗಳು ಇದನ್ನು ವಿರೋಧಿಸಿ ಗಲಾಟೆ ಶುರು ಮಾಡಿದರಲ್ಲದೆ ಧ್ವಜಗಳನ್ನು ಕೀಳಲು ಮುಂದಾದರು. ಇದು ಮುಸ್ಲಿಂ ಯುವಕರು ಮತ್ತು ಅಯ್ಯಪ್ಪ ಮಾಲಾಧಾರಿಗಳ ನಡುವೆ ಜಗಳಕ್ಕೆ ಕಾರಣವಾಗಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಜಗಳ ನಿಲ್ಲಿಸಲು ಲಘು ಲಾಠಿಪ್ರಹಾರ ನಡೆಸಿದ್ದರು. ಆಗ ಮಾಲಾಧಾರಿಗಳ ಬೆಂಬಲಕ್ಕೆ ನಿಲ್ಲುವಂತೆ ನಟಿಸುತ್ತಾ ಕೋಮುಗಲಭೆಗೆ ತುಪ್ಪ ಸುರಿದದ್ದು ಕೋಮುವಾದಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು. ವ್ಯವಸ್ಥಿತವಾಗಿ ಸುತ್ತಮುತ್ತಲ ವಾರ್ಡ್ ಮತ್ತು ಹಳ್ಳಿಯ ಮಾಲಾಧಾರಿಗಳಿಗೆ ರಂಜನೀಯವಾಗಿ ವರ್ಣಿಸಿ, ಅವರಲ್ಲಿ ರೋಷ ಭುಗಿಲೇಳುವಂತೆ ಮಾಡಿ ಸ್ಥಳಕ್ಕೆ ಕರೆಸಿಕೊಂಡಿದ್ದರು. ಪೊಲೀಸರು ನಮ್ಮ ಮೇಲೆ ದೌರ್ಜನ್ಯವೆಸಗಿದ್ದಾರೆಂದು ಆರೋಪಿಸಿ ನಗರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ದಾಂಧಲೆ ಮಾಡಿದ್ದರು.

ಕೂಡಲೇ ಧ್ವಜ ಕಟ್ಟಿದವರ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಲ್ಲದೇ ಮುಸ್ಲಿಂರ ವಿರುದ್ಧವೂ ಘೋಷಣೆ ಕೂಗಿದ್ದರು. ಇದರಿಂದ ಉದ್ರಿಕ್ತರಾದ ಮುಸ್ಲಿಂ ಯುವಕರ ಗುಂಪು ಸಹ ನಗರ ಪೊಲೀಸ್ ಠಾಣೆಯ ಮುಂದೆ ಆಗಮಿಸಿ ಪ್ರತಿಭಟನೆ ನಡೆಸಲು ಮುಂದಾದಾಗ ಎರಡೂ ಗುಂಪುಗಳ ನಡುವೆ ತೀವ್ರ ಮಾರಾಮಾರಿ ನಡೆದಿತ್ತು, ಎರಡೂ ಸಮುದಾಯಗಳು ಪರಸ್ಪರ ಕಲ್ಲು ತೂರಾಟ ನಡೆಸಿದ್ದವು. ಎರಡು ಗಂಟೆಗಳ ಕಾಲ ನಡೆದ ಕೋಮುಗಲಭೆಯ ಸುದ್ದಿ ತಿಳಿದು ಇಡೀ ಗಂಗಾವತಿ ಧಗಧಗ ಹೊತ್ತಿ ಉರಿದಿತ್ತು, ಘಟನೆಯಲ್ಲಿ ಒಟ್ಟಾರೆ ನಾಲ್ಕು ಬೈಕ್‌ಗಳು ಸುಟ್ಟು ಹೋದರೆ 10 ಬೈಕ್‌ಗಳು ಜಖಂಗೊಂಡಿವೆ. ಎರಡು ಸಣ್ಣ ಗೂಡಂಗಡಿಗಳು ಬೆಂಕಿಗಾಹುತಿಯಾಗಿವೆ. ನಜ್ಮ ಬೇಗಂ, ಸಯ್ಯದ್ ಖಾದ್ರಿ, ... ಖಾದ್ರಿ, ಮಹ್ಮದ್ ರಫಿ, ಮುದ್ದು ಮತ್ತು ಹೊಸಳ್ಳಿ ... ಎಂಬುವವರು ಗಾಯಗೊಂಡಿದ್ದಾರೆ. ಕಲ್ಲು ತೂರಾಟದಿಂದಾಗಿ ಹಲವರ ತಲೆ, ಕೈ ಕಾಲುಗಳಿಗೆ ಗಾಯವಾಗಿದೆ.


ಗುಜರಾತ್ ಮಾದರಿ ಪ್ಲಾನ್

ಸಣ್ಣ ಜಗಳವಾಗಿ ಮುಗಿದುಹೋಗಬೇಕಿದ್ದ ಗಲಾಟೆಯನ್ನು ಗಲಭೆಯನ್ನಾಗಿ ಪರಿವರ್ತಿಸಿದ್ದೇ ಬಿಜೆಪಿ ನಾಯಕರು ಮತ್ತು ಆರ್‌ಎಸ್‌ಎಸ್ ಗೂಂಡಾಗಳು. ಅದರಲ್ಲೂ ಮುಖ್ಯವಾಗಿ ಬಡ್ಡಿ ಕುಳ ಎಂದೇ ಕುಖ್ಯಾತಿ ಪಡೆದ ಕೊಪ್ಪಳ ಜಿಲ್ಲಾ ಬಿಜೆಪಿ ಅಧ್ಯಕ್ಷ ಮತೀಯವಾದಿ ವಿರೂಪಾಕ್ಷಪ್ಪ ಸಿಂಗನಾಳ ಮತ್ತು ಮಾಜಿ ಶಾಸಕ, ಅವಕಾಶವಾದಿ ರಾಜಕಾರಣಿ ಪರಣ್ಣ ಮುನವಳ್ಳಿ ಇಡೀ ಘಟನೆಯ ಗೇಮ್ ಪ್ಲಾನರ್‌ಗಳು. ಹಾಲಿ ಸಂಸದ ಕರಡಿ ಸಂಗಣ್ಣ ಮಾಜಿ ಸಂಸದ ಶಿವರಾಮಗೌಡರ ಸಕ್ರಿಯ ಬೆಂಬಲ ಮತ್ತು ನೆರವು ಇದ್ದೇ ಇತ್ತು. ಗಲಾಟೆಯ ವಿಷಯ ತಿಳಿದ ಕೂಡಲೆ ಅಯ್ಯಪ್ಪ ಮತ್ತು ಹನುಮ ಮಾಲಾಧಾರಿಗಳಿಗೆ ಫೋನಾಯಿಸಿ ಸ್ಥಳಕ್ಕೆ ಕರೆಸಿಕೊಂಡು ದೊಡ್ಡ ಮಟ್ಟದಲ್ಲಿ ಗಲಾಟೆ ಮಾಡಿಸಿದ್ದಾರೆ. ಗ್ರಾಮೀಣ ಭಾಗದಿಂದಲೂ ಯುವಕರನ್ನು, ಮಾಲಾಧಾರಿಗಳನ್ನು ಕರೆಸಿ ಉನ್ಮಾದ ಸೃಷ್ಟಿಸಿದ್ದಾರೆ. ಪೊಲೀಸ್ ಠಾಣೆಯ ಮುಂದೆ ಗಲಾಟೆ ಮಾಡಲು ಪ್ರೇರೇಪಿಸಿದ್ದಾರೆ.


ನಂತರ ತಮ್ಮ ಕಾರ್ಯಕರ್ತರಿಗೆ ಸೂಚನೆ ನೀಡಿ 2002ರಲ್ಲಿ ಗುಜರಾತ್‌ನಲ್ಲಾದಂತೆ ಸಿಕ್ಕಸಿಕ್ಕಲ್ಲೆಲ್ಲಾ ಗಲಾಟೆ ಮಾಡಿ ಟೈರ್‌ಗಳಿಗೆ, ವಾಹನಗಳಿಗೆ ಬೆಂಕಿ ಹಚ್ಚಲು ಕುಮ್ಮಕ್ಕು ನೀಡಿದ್ದರು. ಇದನ್ನು ದೊಡ್ಡ ಗಲಭೆಯಾಗಿ ಪರಿವರ್ತಿಸಿ, ಮುಸ್ಲಿಂರ ಮಾರಣಹೋಮ ನಡೆಸಿ ಹಿಂದೂ ವೋಟ್ ಬ್ಯಾಂಕ್ ಗಟ್ಟಿಗೊಳಿಸಲು ಈ ನೀಚಕೃತ್ಯಕ್ಕೆ ಕೈ ಹಾಕಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಅದಕ್ಕಾಗಿಯೇ ಗಲಾಟೆ ನಡೆದ ನಂತರ ಮತ್ತು ಸೋಮವಾರವೂ ದೂರದೂರದಿಂದ ಹಣಕೊಟ್ಟು ಯುವಕರನ್ನು, ಮಾಲಾಧಾರಿಗಳನ್ನು ಕರೆಸಿಕೊಂಡು ಅವರ ಕೈಗೆ ತ್ರಿಶೂಲ, ಮಾರಕಾಸ್ತ್ರಗಳನ್ನು ನೀಡಿ ಗಂಗಾವತಿ ರಸ್ತೆ ತುಂಬೆಲ್ಲಾ ಮೆರವಣಿಗೆ ನಡೆಸಿದ್ದರು: ಇನ್ನು ಕೊಪ್ಪಳದ ಮಾಜಿ ಸಂಸದ ಶಿವರಾಮಗೌಡ ಏನೂ ತಿಳಿಯದ ಮುಗ್ಧ ಯುವಕರ ತಲೆಯಲ್ಲಿ ಧರ್ಮದ ಅಮಲು ತುಂಬಿ 'ಇದು ಧರ್ಮಯುದ್ಧ, ಧರ್ಮ ರಕ್ಷಣೆಗಾಗಿ ನೀವು ಸಾಯಲು ಸಹ ಸಿದ್ಧರಿರಬೇಕು' ಎಂದೆಲ್ಲಾ ಉನ್ಮಾದ ಉಂಟುಮಾಡಿ ಗಲಭೆಗೆ ಪ್ರೇರೇಪಿಸಿದ್ದ.



ಮಾಜಿ ಸಂಸದ ಶಿವರಾಮಗೌಡ



ಮಾಜಿ ಶಾಸಕ ಪರಣ್ಣ ಮುನವಳ್ಳಿ



ಹಾಲಿ ಸಂಸದ ಕರಡಿ ಸಂಗಣ್ಣ

ಅನ್ಸಾರಿ ಮುಗಿಸಲು ಬಿಜೆಪಿ ಆಟ

ಈ ಕೋಮುಗಲಭೆಯನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಇದು ಗಂಗಾವತಿ ಹಾಲಿ ಶಾಸಕ ಇಕ್ಬಾಲ್ ಅನ್ಸಾರಿಯನ್ನು ಮುಗಿಸಲು ಬಿಜೆಪಿ ಹೆಣೆದಿರುವ ಬಲೆಯೆಂಬುದು ಸ್ಪಷ್ಟವಾಗುತ್ತದೆ. 2018ರ ಚುನಾವಣೆಯಲ್ಲಿ ಅನ್ಸಾರಿ ಸೋಲಿಸಿ ಬಿಜೆಪಿಯ ಮಾಜಿ ಶಾಸಕ ಪರಣ್ಣ ಮುನವಳ್ಳಿ ಮರಳಿ ಅಧಿಕಾರಕ್ಕೆ ಬರಬೇಕಾದರೆ ಇಂತಹ ಗಲಭೆಯೊಂದರ ಅಗತ್ಯ ಬಿಜೆಪಿಗೆ ಇದ್ದೇಇತ್ತು. ಮುಸ್ಲಿಂ ಮತಗಳ ಪ್ರಭಾವವಿರುವ ಗಂಗಾವತಿ ಕ್ಷೇತ್ರದಲ್ಲಿ ಇಂತಹ ಗಲಭೆಗಳನ್ನು ಮಾಡದೇ ಗೆದ್ದು ಬರುವುದು ಕಷ್ಟ ಎಂಬುದು ಬಿಜೆಪಿ ಲೆಕ್ಕಾಚಾರ. ಅಸಲಿಗೆ, ಬಿಜೆಪಿಯ ಕುತಂತ್ರ ಕೇವಲ ಗಂಗಾವತಿಗೆ ಮಾತ್ರ ಸೀಮಿತವಾಗಿದ್ದಂತೆ ಕಂಡುಬರುತ್ತಿಲ್ಲ; ಅದರ ಅಧಿಕಾರ ದಾಹದ ಪ್ಲಾನ್ ನೋಡಿದರೆ ಇದೇ ರೀತಿಯ ಅಥವಾ ಸ್ವಲ್ಪ ಭಿನ್ನವಾದ ಇನ್ನೂ ಹಲವು ನೀಚ ಯೋಜನೆಗಳನ್ನು ರಾಜ್ಯಾದ್ಯಂತ ನಡೆಸಲು ಅದು ಯೋಜಿಸಿರುವಂತಿದೆ.

ಹಾಲಿ ಜೆಡಿಎಸ್‌ನಿಂದ ಶಾಸಕರಾಗಿರುವ ಇಕ್ಬಾಲ್ ಅನ್ಸಾರಿ ಈಗಾಗಲೇ ತಮ್ಮ ಒಂದು ಕಾಲನ್ನು ಜೆಡಿಎಸ್‌ನಿಂದ ಹೊರಗಿಟ್ಟು ಮತ್ತೊಂದನ್ನು ಕಾಂಗ್ರೆಸ್‌ನಲ್ಲಿ ಇಟ್ಟಾಗಿದೆ. ಅನ್ಸಾರಿ ಕಾಂಗ್ರೆಸ್‌ಗೆ ಬರುವುದು ಕಾಂಗ್ರೆಸ್ಸಿನ ಸ್ಥಳೀಯ ನಾಯಕರುಗಳಿಗೆ ಇಷ್ಟವಿಲ್ಲ, ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಆರ್.ಶ್ರೀನಾಥ್‌ಗೆ ಇಕ್ಬಾಲ್ ಅನ್ಸಾರಿಯೊಂದಿಗೆ ವೈಯಕ್ತಿಕ ದ್ವೇಷವಿರುವುದರಿಂದ ಪರೋಕ್ಷವಾಗಿ ಮತಾಂಧರ ಜತೆಗಿದ್ದು ಗಲಭೆಗೆ ಬೆಂಬಲ ನೀಡಿದ್ದಾನೆ. ಅನ್ಸಾರಿ ಕಾಂಗ್ರೆಸ್‌ಗೆ ಬಂದರೆ ಎಲ್ಲಿ ತಮಗೆ ಟಿಕೆಟ್ ಸಿಗುವುದಿಲ್ಲವ್ರೋ ಎಂಬ ದುರಾಲೋಚನೆಯ ಕೆಲವು ಕಾಂಗ್ರೆಸ್ ನಾಯಕರು ಕೂಡ ಈ ಗಲಭೆಯನ್ನು ಪರೋಕ್ಷವಾಗಿ ಪ್ರೋತ್ಸಾಹಿಸಿದ್ದಾರೆ. ಒಟ್ಟಾರೆ ಮುಸ್ಲಿಂ ಶಾಸಕ ಅನ್ಸಾರಿಯನ್ನು ಮುಗಿಸಬೇಕೆಂಬ ಬಿಜೆಪಿಯಾಟಕ್ಕೆ ಕಾಂಗ್ರೆಸ್ ಮೌನ ಬೆಂಬಲ ಸೂಚಿಸಿದೆ. ಅತ್ತ ಜೆಡಿಎಸ್ ಬೆಂಬಲ ಇಲ್ಲದೇ, ಇತ್ತ ಕಾಂಗ್ರೆಸ್ ಬೆಂಬಲವೂ ಇಲ್ಲದೇ ಒಂಟಿಯಾಗಿರುವ ಅನ್ಸಾರಿಗೆ ಉಳಿದಿರುವುದು ಮುಸ್ಲಿಮರು ಮಾತ್ರ.

ಕೇಸು ಜಡಿಸಿಕೊಂಡ ದಲಿತರು, ಮುಸ್ಲಿಮರು

ಈ ಕೋಮುಗಲಭೆಯ ದೃಶ್ಯಗಳು ಎದೆಯನ್ನು ಝಲ್ಲೆನಿಸುತ್ತವೆ. ಯಾಕೆಂದರೆ ಪೊಲೀಸರೆದುರೆ ತ್ರಿಶೂಲ, ಮಾರಕಾಸ್ತ್ರಗಳನ್ನು ಹಿಡಿದು ಆಕ್ರೋಶದಿಂದ ಕೂಗಾಡುತ್ತಿರುವವರು ಹಿಂದೂ ಧರ್ಮದ ಗುತ್ತಿಗೆ ಪಡೆದ ಮೇಲ್ಜಾತಿ ಬ್ರಾಹ್ಮಣರು ಮತ್ತು ಲಿಂಗಾಯತರಲ್ಲ, ಹೋಗಲಿ ಆರ್ಥಿಕವಾಗಿ ಸದೃಢವಾದ ಮಧ್ಯಮವರ್ಗದವರೂ ಅಲ್ಲ. ಮಾಲಾಧಾರಿಗಳಾಗಿ ಕೋಮುಗಲಭೆಯಲ್ಲಿದ್ದವರೆಲ್ಲ ಹೊಲೆಯರು, ಮಾದಿಗರು, ನಾಯಕ ಮತ್ತು ಲಂಬಾಣಿ ಜಾತಿಯವರು. ಮಚ್ಚು, ಲಾಂಗು, ಬಡಿಗೆ, ಕೊಡಲಿ, ಕುಡುಗೋಲು ಹಿಡಿದುಕೊಂಡು ಶೋಭಾಯಾತ್ರೆ ನಡೆಸಿದವರಲ್ಲಿ ಬಹುತೇಕರು ನಾಯಕ, ದಲಿತ (ಎಸ್ಸಿ), ಲಂಬಾಣಿ ಸಮುದಾಯಗಳ ಯುವಕರು.

ಈ ಶೋಷಿತ ಸಮುದಾಯದವರು ಚೆನ್ನಾಗಿ ಓದಿ, ದುಡಿದು ಮೇಲೆ ಬರುವುದನ್ನು ಬಿಟ್ಟು ಮೇಲ್ಜಾತಿಗಳ ಕಾಲಾಳುಗಳಾಗಿ ಗಲಭೆಗಳಲ್ಲಿ ಭಾಗವಹಿಸಿ ತಮ್ಮತನ ಕಳೆದುಕೊಳ್ಳುತ್ತಿರೋದು ದುರಂತ. 10-12 ವರ್ಷದ ಮಕ್ಕಳು ಸಹ ದೊಣ್ಣೆ, ಮಾರಕಾಸ್ತ್ರಗಳನ್ನು ಹಿಡಿದು ಗಲಭೆಯಲ್ಲಿ ಭಾಗವಹಿಸಿರುವುದನ್ನು ನೋಡಿದರೆ ಭವಿಷ್ಯದ ಪೀಳಿಗೆಯ ಬಗ್ಗೆ ಆತಂಕ ಆವರಿಸುತ್ತದೆ. ಇಂತಹ ಮಕ್ಕಳ ಮನಸ್ಸಿನಲ್ಲಿ ಕೋಮುದ್ವೇಷದ ವಿಷಬೀಜ ಬಿತ್ತಿರುವ ಬಿಜೆಪಿ ಮುಂದೆ ಎಂತಹ ರಾಷ್ಟ್ರ ನಿರ್ಮಾಣ ಮಾಡುತ್ತದೆ ಎಂಬುದನ್ನು ನೀವೇ ಊಹಿಸಿ.

ಮುಸ್ಲಿಮರಲ್ಲೂ ಸಹ ಸೂಟುಬೂಟು ಧರಿಸುವ, ವ್ಯಾಪಾರ ವ್ಯವಹಾರ ನಡೆಸುವ ಮುಸ್ಲಿಮರ್‍ಯಾರು ಗಲಭೆಯಲ್ಲಿ ಭಾಗವಹಿಸಿಲ್ಲ. ಬದಲಿಗೆ ಕೂಲಿಕಾರರು, ಕಾಲೇಜು ಯುವಕರು ಗಲಭೆಯಲ್ಲಿದ್ದಾರೆ. ಗಲಭೆಗೆ ಕಾರಣವಾದವರೆಲ್ಲಾ ಮನೆಯಲ್ಲಿ ಆರಾಮಾಗಿ ಕೂತು ಮುಂದಿನ ಚುನಾವಣೆಯ ತಯಾರಿಯಲ್ಲಿದ್ದಾರೆ. ಆದರೆ ಏಟು ತಿಂದು ರಕ್ತ ಹರಿಸಿದ್ದಲ್ಲದೆ ಈಗ ಕೇಸು ಜಡಿಸಿಕೊಂಡು ಜೈಲು ಕಂಬಿ ಎಣಿಸುತ್ತಿರೋದು ಬಡ ಮುಸ್ಲಿಮರು ಮತ್ತು ದಲಿತ ಯುವಕರು. ಯಾರದೋ ರಾಜಕೀಯ ಮತ್ತು ವರ್ಗಶಾಹಿ ಕುತಂತ್ರಕ್ಕೆ ಉನ್ಮಾದದ ಅಲೆಯಲ್ಲಿ ತಮ್ಮನ್ನು ತಾವು ಬಲಿಪಶುವಾಗಿಸಿಕೊಳ್ಳುವ ಈ ಕಾಯಿಲೆ ನಮ್ಮ ಯುವಕರನ್ನು ಅದೆಂದು ಬಿಟ್ಟುಹೋಗುತ್ತೋ ಗೊತ್ತಿಲ್ಲ!

ಪೊಲೀಸ್ ಇಲಾಖೆಯಲ್ಲಿಯೂ ಭಕ್ತರಿದ್ದಾರೆ

ಚೆಡ್ಡಿ ಮನಸ್ಸುಗಳು ಗಂಗಾವತಿಯ ಪೊಲೀಸ್ ಇಲಾಖೆಯಲ್ಲಿಯೂ ಇದ್ದಾರೆ. ಇಲಾಖೆಯಲ್ಲಿ ಏನು ನಡೆಯುತ್ತಿದೆ? ಯಾರ ಮೇಲೆ ಕೇಸು ದಾಖಲಾಗುತ್ತಿದೆ? ಹಿರಿಯ ಅಧಿಕಾರಿಗಳು ಈ ಪ್ರಕರಣದಲ್ಲಿ ಯಾರ ಪರ ಸಹಾನುಭೂತಿ ಹೊಂದಿದ್ದಾರೆ? ಎಂಬ ಮಾಹಿತಿಯನ್ನು ಇವರು ಗಲಭೆಕೋರರ ಕಿವಿಗೆ ತಲುಪಿಸಿದ್ದರಿಂದಲೇ ಅವತ್ತು ಅಷ್ಟುಬೇಗ ಗಲಭೆ ಉಲ್ಬಣಿಸಿದ್ದು. ಅಲ್ಲದೇ ಗಲಭೆ ಹೆಚ್ಚಾಗಬೇಕಾದರೆ ಎಲ್ಲಿ ಬೆಂಕಿ ಹಚ್ಚಬೇಕು, ಯಾವ ಪೊಲೀಸ್ ಅಧಿಕಾರಿಯನ್ನು ಟಾರ್ಗೆಟ್ ಮಾಡಬೇಕು ಎಂಬೆಲ್ಲಾ ಐಡಿಯಾಗಳನ್ನೂ ಈ ಖಾಕಿ ಕೇಸರಿ ಕಿರಾತಕರೇ ಕೋಮುವೀರರಿಗೆ ತುರುಕಿದ್ದಾರೆನ್ನುವ ಅನುಮಾನವೂ ಇದೆ.

ಅಷ್ಟು ಮಾತ್ರವಲ್ಲ, ಗಲಾಟೆ ನಡೆಯುತ್ತಿರುವಾಗ ಅದನ್ನು ನಿಯಂತ್ರಿಸಬೇಕೆ ಬೇಡವೇ, ಇನ್ನು ಹೆಚ್ಚು ಮಾಡಲು ಪ್ರೇರೇಪಿಸಬೇಕೆ ಎಂಬುದನ್ನೆಲ್ಲ ಯೋಜಿತವಾಗಿಯೇ ನೆರವೇರಿಸುತ್ತಾರೆ. ಪೊಲೀಸರ ಸಹಾಯ, ಸಹಕಾರವಿಲ್ಲದೇ ಯಾವುದೇ ಗಲಭೆಯನ್ನು ಯೋಜನೆಯಂತೆ ಯಶಸ್ವಿಯಾಗಿ ನಡೆಸಲು ಸಾಧ್ಯವಿಲ್ಲ ಎಂಬುದನ್ನು ಅರಿತೇ ಬಿಜೆಪಿಗರು ಹಲವು ಪೊಲೀಸ್ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡಿದ್ದಾರೆ. ಪ್ರಸ್ತುತ ಪ್ರಕರಣದಲ್ಲೂ ಗಲಭೆಗೆ ಸಹಕರಿಸದೇ, ಗಲಭೆಯನ್ನು ನಿಯಂತ್ರಿಸಲು ಲಾಠಿ ಪ್ರಹಾರ ಮಾಡಿದ್ದಕ್ಕಾಗಿ ನಗರ ಪೊಲೀಸ್ ಠಾಣೆ ಪಿಎಸ್ಐ ಭೀಮನಗೌಡ ಬಿರಾದಾರ್ ಮತ್ತು ಗ್ರಾಮೀಣ ಸಿಪಿಐ ಕೆ.ಕಾಳಿಕೃಷ್ಣರನ್ನು ಕರ್ತವ್ಯಲೋಪದ ಆರೋಪದಡಿ ವರ್ಗಾವಣೆ ಮಾಡುವಂತೆ ಒತ್ತಡ ತರಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ತಮ್ಮ ಅಧಿಕಾರ ದಾಹಕ್ಕೆ ರಾಜಕಾರಣಿಗಳು ಹೆಣೆದಿರುವ ಬಲೆಯೊಳಗೆ ಜನಸಾಮಾನ್ಯ ಬಿದ್ದು ಸಾಯುತ್ತಿದ್ದಾನೆ. ಇದಕ್ಕೆ ಧರ್ಮರಕ್ಷಣೆಯೆಂಬ ಲೇಪ ಬೇರೆ ಹಚ್ಚಲಾಗಿದೆ. ಬಡತನ, ಅನಕ್ಷರತೆ, ಅನಾರೋಗ್ಯ ತುಂಬಿಕೊಂಡು ಹಿಂದುಳಿದ ಪ್ರದೇಶವೆಂದು ಹಣೆಪಟ್ಟಿ ಕಟ್ಟಿಕೊಂಡ ಗಂಗಾವತಿಯಲ್ಲಿ ಇವುಗಳ ನಿವಾರಣೆಗೆ ಹೋರಾಡಬೇಕಾದ ಜನ ತಮ್ಮ ನೈಜ ಸಮಸ್ಯೆಗಳನ್ನು ಮರೆತು ಈ ರೀತಿಯ ಕೋಮುಗಲಭೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಷ್ಟಕ್ಕೆ ಸಿಲುಕಿಕೊಳ್ಳುತ್ತಿರೋದು ವಿಪರ್ಯಾಸ. ಸರಿಯಾದ ತನಿಖೆ ನಡೆದರೆ ಮಾತ್ರ ಈ ಗಲಭೆಯ ಹಿಂದಿರುವ ಕಿರಾತಕ ಕೈಗಳ ಅಸಲಿಯತ್ತು ಬಯಲಾಗಲಿದೆ. ಆದರೆ ಅಂತಹ ಸಾಹಸವನ್ನು ಯಾರು ತಾನೆ ಮಾಡಿಯಾರು?

■ ಮುತ್ತುರಾಜು



ಗಲಭೆಯ ಚಿತ್ರ



ಘಾಟಿ ಮುದುಕ ಮೇಟಜ್ಜನ ಜಬರ್‌ದಸ್ 'ಕಾಮ'ಗಾರಿ!


ವಿಜಯಲಕ್ಷ್ಮಿ

ಅದ್ಯಾಕೊ ಹೆಂಡದ ಮಂತ್ರಿಗಿರಿಗೂ ಮಾನಿನಿ ಮನರಂಜನೆಗೂ ಸಿಕ್ಕಾಪಟ್ಟೆ ಕನೆಕ್ಷನ್ ಅನಿಸುತ್ತೆ. ಬಿಜೆಪಿ ಸರ್ಕಾರದಲ್ಲಿ ಅಬಕಾರಿ ಮಂತ್ರಿಯಾಗಿದ್ದಾಗಲೇ ಹೊನ್ನಾಳಿಯ ಕಿಸ್ಸಿಂಗ್ ಕುಮಾರ ರೇಣುಕಾಚಾರಿ, ನರ್ಸ್ ಜಯಲಕ್ಷ್ಮಿಯ ಅಪ್ಪಿಕೋ ಚಳವಳಿಯಲ್ಲಿ ಬೆತ್ತಲಾಗಿದ್ದ. ಇದೀಗ ಆ ಸರದಿ ಬಾಗಲಕೋಟೆಯ ಘಾಟಿ ಮುದುಕ ಎಚ್.ವೈ.ಮೇಟಿಯದ್ದು. ಕಾಕತಾಳೀಯವ್ವೋ ಏನೋ ಈತನೂ ಸದ್ಯ ಅಬಕಾರಿ ಸಚಿವ; ರೇಣುಕನದ್ದು 'ಜಯಲಕ್ಷ್ಮಿ' ಪ್ರಕರಣವಾದರೆ, ಈತನದ್ದು 'ವಿ'ಜಯಲಕ್ಷ್ಮಿ ಪ್ರಕರಣ!

ಅಂದಹಾಗೆ, ಎಪ್ಪತ್ತೊಂದರ ಹರೆಯದ ಈ ಹುಲ್ಲಪ್ಪ ಮೇಟಿ ಸಾಹೇಬ ಬೇಲಿ ಹಾರುವ ವೆರಿ ಓಲ್ಡ್ ಕುಬುಬುದಾರ. ತನ್ನ 25 ವರ್ಷಗಳ ರಾಜಕೀಯ ಬದುಕಿನಲ್ಲಿ ಅದೆಷ್ಟು ಜನರಿಗೆ ನೆರವಾದನೋ ಗೊತ್ತಿಲ್ಲ, ಆದರೆ ಮುಕ್ಕಿದ ಹೆಂಗಸರ ಪಟ್ಟಿಗಂತು ಲೆಕ್ಕವೇ ಇಲ್ಲ. ಈ ಮುದಿ ವಯಸ್ಸಿನಲ್ಲೇ ನಿಗಿನಿಗಿ ಯೌವ್ವನವನ್ನು ಆವಾಹಿಸಿಕೊಂಡು ಸಿಡಿಯಲ್ಲಿ ಸಿಕ್ಕಿಬೀಳುತ್ತಾನೆಂದರೆ ಹರೆಯದ ದಿನಗಳಲ್ಲಿ ಈತ ಆಡಿದ ಕಬಡ್ಡಿಗಳು ಅದೆಷ್ಟು ರೋಚಕವಾಗಿರಬೇಡ. ಮೇಟಿಯ ಹುಟ್ಟೂರು ತಿಮ್ಮಾಪೂರದ ಕಲ್ಲುಗಳೇ ಇವನ ಕತೆಗಳನ್ನು ಸಾರಿಸಾರಿ ಹೇಳುತ್ತವೆ. ರಾಜಕೀಯಕ್ಕೆ ಬರುವ ಮುಂಚೆ ಮಟಕಾ ನಂಬರ್ ದಂಧೆಯಲ್ಲಿ ಖ್ಯಾತಿ ಪಡೆದಿದ್ದ ಮೇಟಿ ಸಂಜೆಯಾದರೆ ಸಾಕು, ಸೈಕಲ್ ಏರಿ ತೋಟದ ಮನೆಯಲ್ಲಿ ಕಂಠಪೂರ್ತಿ ಭಟ್ಟಿ ಸಾರಾಯಿ ಕುಡಿದು ಕುಪ್ಪಳಿಸುತ್ತಿದ್ದ. ಆ ಸಮಯದಲ್ಲೇ, ಅದೇ ಗ್ರಾಮದ ಹೆಂಗಸೊಬ್ಬಳೊಂದಿಗೆ ಸಂಬಂಧ ಇಟ್ಟುಕೊಂಡು, ಅದು ಇವನ ಹೆಂಡತಿಗೆ ತಿಳಿದು, ಆಕೆ ಬೀದಿರಂಪ ಮಾಡಿದ್ದನ್ನು ಅಲ್ಲಿಯ ಜನ ಈಗಲೂ ರಂಗುರಂಗಾಗಿ ಮಾತಾಡಿಕೊಳ್ಳುತ್ತಾರೆ. ಆ ಪರಿ 'ಸೆಕ್ಸ'ಸ್ ಮನುಷ್ಯ ಈತ.

ಹಣ, ಹೆಂಡ, ಹೆಣ್ಣೇ ಇವನ ದೌರ್ಬಲ್ಯ. ಅದಕ್ಕಾಗಿ ಏನೆಲ್ಲ ಮಾಡಬಲ್ಲ ಆಸಾಮಿ ಈತ. ಹಾಗಂತ ಹೆಣ್ಣಿನ ಸುಖಕ್ಕೆ ಬೇಕಾಬಿಟ್ಟಿ ಖರ್ಚು ಮಾಡುವ ಧಾರಾಳನೂ ಅಲ್ಲ, ಪರಮ ಕಂಜೂಸ್ ಅಜ್ಜ, ಎಲ್ಲವೂ ಪುಕ್ಕಟೆಯಾಗಿ ಬಂದುಬೀಳಬೇಕು. ಸಾಹೇಬರು, ಅಧಿಕಾರದಲ್ಲಿರೋ ರಾಜಕಾರಣಿ, ಏನಾದರು ನೆರವಾದಾರು ಅನ್ನೋ ನಿರೀಕ್ಷೆಯಲ್ಲಿ ಹೆಂಗಸರು ತನಗೆ ಸೆರಗು ಹಾಸಬೇಕೆಂದು ಹಂಬಲಿಸುವ ಕಾಡುಕುದುರೆ!

ಮುಖ್ಯಮಂತ್ರಿ ಹುದ್ದೆಯೇ ಕುರುಬ ಜಾತಿಯ ತನ್ನ ಬಳಿ ಇರುವುದರಿಂದ ಇದೇ ಸಮುದಾಯದ ಮತ್ತೊಬ್ಬನಿಗೆ ಮಂತ್ರಿಗಿರಿ ಕೊಟ್ಟರೆ ಇತರೆ ಜನಾಂಗಗಳ ಅಸಮಾಧಾನಕ್ಕೆ ಕಾರಣವಾಗುತ್ತೆ ಅಂತ ಸಿದ್ದರಾಮಯ್ಯನೋರು ತನ್ನ ಕುಲಬಾಂಧವರಾರಿಗೂ ಮಂತ್ರಿಗಿರಿ ಕೊಟ್ಟಿರಲಿಲ್ಲ, ಆದರೆ ಇತ್ತೀಚೆಗಷ್ಟೆ ಆ ಮಡಿ ಮುರಿದುಕೊಂಡ ಅವರು ಮಂತ್ರಿಗಿರಿ ದಯಪಾಲಿಸಿದ್ದು ಈ ಮುದುಕಪ್ಪನಿಗೆ, ಅದೂ ಹೆಂಡದ ಮಂತ್ರಿ ಖಾತೆಯನ್ನು. ಅಧಿಕಾರ ವಹಿಸಿಕೊಂಡ ಕೆಲವೇ ದಿನಕ್ಕೆ, ಸರ್ಕಾರದ ವರ್ಚಸ್ಸು ಹೆಚ್ಚಿಸುವ ಸರಿಯಾದ 'ಕಾಮ'ಗಾರಿಯನ್ನೇ ಉಡುಗೊರೆಯಾಗಿ ಕೊಟ್ಟಿದ್ದಾನೆ.

ಇದು ಕಳ್ಳರ 'ಕಾಮ' ಗಾರಿ

ಹೆಂಡದ ಮಂತ್ರಿ ಮೇಟಜ್ಜ ಸೆಕ್ಸ್ ಹಗರಣದಲ್ಲಿ ಸಿಕ್ಕಿಬಿದ್ದಿರೋದು ಅಚ್ಚರಿಯೇನೂ ಅಲ್ಲ, ಯಾಕೆಂದರೆ ಸಿ.ಡಿ. ಆಗದ ಇಂತಹ ಅದೆಷ್ಟೋ ರಾಸಲೀಲೆಗಳು ಮೇಟಜ್ಜನ ಆಡಿ ಅಪ್ಪಚ್ಚಿಯಾಗಿ ಹೋಗಿವೆ. ಪಾಪ, ಗ್ರಹಚಾರಕ್ಕೆ ಮಂತ್ರಿಯಾದ ಈ ಸಲವೇ ಯಡವಟ್ಟಾಗಿ ಸಿ.ಡಿ.ಯ ರೂಪದಲ್ಲಿ ಸುತ್ತಿಕೊಂಡಿದೆ. ಆದರೆ ಇಡೀ ಪ್ರಕರಣದಲ್ಲಿ ಮೇಟಜ್ಜ ಮಾತ್ರ ಕಳ್ಳನಲ್ಲ, ಆತನನ್ನು ಹಗರಣದೊಳಕ್ಕೆ ಕೆಡವಿದವರೂ ಕಳ್ಳರೇ. ಒಂದರ್ಥದಲ್ಲಿ ಇದೊಂದು ಕಳ್ಳರ 'ಕಾಮ'ಗಾರಿ!

ಮೇಟಿಗೆ ಅದಾಗಲೇ ಎಪ್ಪತ್ತೊಂದು ವರ್ಷ. ಹಾಗಾಗಿ ವಯೋಸಹಜ ರೋಗಗಳು ಮುತ್ತಿಕೊಂಡಿದ್ದವು (ಅಷ್ಟಾದರು ಅಜ್ಜನೊಳಗಿನ 'ರಾಗ'ಗಳು ತಣ್ಣಗಾಗಿರಲಿಲ್ಲ ಬಿಡಿ!). ಅದರಲ್ಲಿ ಮಂಡಿನೋವು ಮೇಟಿಯನ್ನು ಇನ್ನಿಲ್ಲದಂತೆ ಬಾಧಿಸುತ್ತಿತ್ತು. ಅದ್ಯಾರೊ ಪುಣ್ಯಾತ್ಮ ಈ ಮಂಡಿನೋವಿಗೆ ಪಂಚಕರ್ಮ ಚಿಕಿತ್ಸೆ ರಾಮಬಾಣ ಅಂತ ಸಲಹೆ ನೀಡಿದ್ದ. ಆಗ ಅವನ ಕಾರ್ಯಕರ್ತರು ದುರ್ಬೀನು ಹಾಕಿ ಹುಡುಕಿ ಕರೆತಂದದ್ದೇ ಈ ಪಂಚಕರ್ಮ ಪ್ರವೀಣೆ ವಿಜಯಲಕ್ಷ್ಮಿಯನ್ನು.

ಎಪ್ಪತ್ತಾದರೂ ನಿಗಿನಿಗಿ ಕೆಂಡದಂತೆ ಉರಿಯುವ ಮೇಟಜ್ಜನ ಪಕ್ಕ ವಿಜಯಲಕ್ಷ್ಮಿಯಂತ ಹತ್ತಿಯನ್ನು ತಂದಿಟ್ಟರೆ ಬೆಂಕಿ ಹತ್ತಿಕೊಳ್ಳದೇ ಇದ್ದೀತೆ. ಅದರಲ್ಲೂ ತನ್ನ ಕುಲಬಾಂಧವಳು ಅನ್ನೋ ಕಾರಣಕ್ಕೆ ಅಜ್ಜನಿಗೆ ವಿಜಯಲಕ್ಷ್ಮಿ ಮೇಲೆ ವಿಶೇಷ ಮಮಕಾರವೇ ಉಕ್ಕಿಬಂದಿತ್ತು. ವಿಜಯಲಕ್ಷ್ಮಿಯನ್ನು ಕಂಡ ಮೊದಲ ದಿನವೇ ಮೇಟಜ್ಜ ಲೀಟರುಗಟ್ಟಲೆ ಜೊಲ್ಲು ಸುರಿಸಿದ್ದ. ಆದರೆ ಅವಸರ ಪಟ್ಟಿರಲಿಲ್ಲ. ಊರಿಗೆ ಬಂದೋಳು ನೀರಿಗೆ ಬರದೇ ಹೋಗ್ತಾಳ ಅನ್ನೋದು ಅಜ್ಜನ ಲೆಕ್ಕಾಚಾರವಾಗಿರಬಹುದು. ಪಂಚಕರ್ಮದಿಂದ ಪರಿಚಯವಾದ ವಿಜಯಲಕ್ಷ್ಮಿ ನೇರ ಇವನ ಕಚೇರಿ-ಮನೆಗೆ ಬಂದು ಹೋಗುತ್ತಿದ್ದಳು.

ಬಾಗಲಕೋಟೆಯಲ್ಲಿ ವಾಸ ಇದ್ದ ವಿಜಯಲಕ್ಷ್ಮಿಯ ಗಂಡ ಬಸವರಾಜ್ ಪ್ರೈವೇಟ್ ಕಂಪನಿಯಲ್ಲಿ ಡ್ರೈವರ್ ಆಗಿದ್ದ. ಅದನ್ನೇ ಬಂಡವಾಳ ಮಾಡಿಕೊಂಡ ಮೇಟಜ್ಜ 'ನಿನ್ನ ಗಂಡನಿಗೆ ಸರ್ಕಾರಿ ವಾಹನದಲ್ಲಿ ಕೆಲಸ ಕೊಡಿಸುತ್ತೇನೆ. ನಿನಗೂ ಆಯುರ್ವೇದ ಆಸ್ಪತ್ರೆಯಲ್ಲಿ ಪರಮನೆಂಟ್ ಮಾಡಿಸುತ್ತೇನೆ. ಜೊತೆಗೆ ಸ್ಪೆಷಲ್ ಸ್ಕೀಮಿನಲ್ಲಿ ಒಂದು ಮನೇನೂ ಕೊಡಿಸುತ್ತೇನೆ' ಅಂತ ತನ್ನ ಬಲೆ ಬೀಸಿದ್ದ. ವಿಜಯಲಕ್ಷ್ಮಿಯಂತ ಮಿಡ್ಲ್‌ಕ್ಲಾಸ್ ಹೆಂಗಸು ಬಹಳ ಸುಲಭವಾಗೇ ಇವನ ಬಲೆಗೆ ಬಿದ್ದಿದ್ದಳು. ಹೀಗಾಗಿ ಹೊತ್ತಲ್ಲದ ಹೊತ್ತಿನಲ್ಲಿ ಬಂದುಹೋಗುತ್ತಿದ್ದ ಆಕೆಯನ್ನು ಪಂಚಕರ್ಮದ ಹೆಸರಲ್ಲಿ ಮೇಟಜ್ಜ ಹಿಂಡಿಹಿಪ್ಪಿ ಮಾಡಿಬಿಟ್ಟ.

ಗನ್‌ಮ್ಯಾನ್‌ನ ಎಂಟ್ರಿ

ಕೆಲಸ ಮತ್ತು ಮನೆಯ ಆಸೆಯೊಡ್ಡಿ ಕೆಡವಿಕೊಂಡ ವಿಜಯಲಕ್ಷ್ಮಿಯ ಜೊತೆ ಮೇಟಜ್ಜನ 'ಕಾಮ'ಗಾರಿ ಭರ್ಜರಿಯಾಗಿ ಮುನ್ನುಗ್ಗುತ್ತಿದ್ದನ್ನು ಅಲ್ಲೇ ಇದ್ದ ಗನ್‌ಮ್ಯಾನ್ ಸುಭಾಷ್ ಮುಗಳಖೋಡ ಸೂಕ್ಷ್ಮವಾಗಿ ಗಮನಿಸಿದ್ದ. ಯಥಾ ರಾಜ ತಥಾ ಪ್ರಜಾ ಅನ್ನುವಂತೆ ಮೇಟಜ್ಜನ ಖಯಾಲಿ ಅವನ 'ಗನ್'ಮ್ಯಾನ್‌ಗೂ ಆವರಿಸಿಕೊಂಡಿತ್ತು, ಅಜ್ಜನಂತ ಅಜ್ಜನಿಗೇ ಸಲೀಸಾಗಿ ಸಿಗುತ್ತಿದ್ದ ವಿಜಯಲಕ್ಷ್ಮಿಯ ಮೇಲೆ ಗನ್‌ಮ್ಯಾನ್ ಸುಭಾಷ್‌ನ ಕಣ್ಣುಗಳೂ ಹರಿದಾಡಿದ್ದವು. ಸಾಲದ್ದಕ್ಕೆ ಅವನೂ ಮೇಟಜ್ಜ ಮತ್ತು ವಿಜಯಲಕ್ಷ್ಮಿಯ ಕುಲಬಾಂಧವನೆ. ಅದೇ ಸ್ವಜಾತಿ ಪ್ರೇಮ ಸುಭಾಷ್ ಮತ್ತು ವಿಜಯಲಕ್ಷ್ಮಿ ನಡುವೆ ಸಲುಗೆ ಬೆಳೆಸಿತ್ತು, ಒಬ್ಬರಿಗೊಬ್ಬರು ಮೊಬೈಲ್ ನಂಬರ್ ಎಕ್ಸ್‌ಚೇಂಜ್ ಮಾಡಿಕೊಂಡು ಮಾತುಕತೆಗಿಳಿದಿದ್ದರು. ಆ ಮಾತುಕತೆ ನಿಧಾನಕ್ಕೆ ಪ್ರಧಾನ ಹಾದಿಯತ್ತ ತಿರುಗಿ ಸೇರಬೇಕಾದ ಗುರಿಯನ್ನೂ ತಲುಪಿತ್ತು. ಅವರಿಬ್ಬರು ಡಿಂಗ್-ಡಾಂಗ್ ಶುರುಹಚ್ಚಿಕೊಂಡಿದ್ದರು.

ಇದು ಮೇಟಜ್ಜನಿಗೆ ಗೊತ್ತಾದದ್ದೇ ಕೆಂಡಮಂಡಲವಾಗಿದ್ದ. ತಾನು ಕೈಯಿಟ್ಟ ಯಾರದೋ ತಟ್ಟೆಯ ಊಟಕ್ಕೆ ತನ್ನದೇ ಗನ್‌ಮ್ಯಾನ್ ಕೂಡಾ ಕೈಯಿಟ್ಟರೆ ಮೇಟಜ್ಜನ ಪಿತ್ತ ನೆತ್ತಿಗೇರದೆ ಇದ್ದೀತಾ? ತನ್ನ ಗನ್‌ಮ್ಯಾನ್ ಕೆಲಸದಿಂದ ಸುಭಾಷ್‌ನನ್ನು ತೆರವುಗೊಳಿಸಿ ಆ ಜಾಗಕ್ಕೆ ಮತ್ತೊಬ್ಬ ಕಾನ್‌ಸ್ಟೇಬಲ್‌ನನ್ನು ಅಜ್ಜ ನೇಮಕ ಮಾಡಿಕೊಂಡಿತ್ತು. ಆದರೆ ವಿಜಯಲಕ್ಷ್ಮಿ ಮತ್ತು ಸುಭಾಷ್ ನಡುವಿನ ಬೆಳವಣಿಗೆ ಅದೆಷ್ಟು ವಿಪರೀತಕ್ಕೆ ಹೋಗಿತ್ತೆಂದರೆ ಅಜ್ಜನ ಆ ಯೋಜನೆಯಿಂದ ಅವರ ಬಾಂಧವ್ಯಕ್ಕೇನೂ ಅಡ್ಡಿಯಾಗಲಿಲ್ಲ. ಅದು ನಿರಾತಂಕವಾಗಿ ಜಾರಿಯಲ್ಲಿತ್ತು.

ಈ ನಡುವೆ ಸುಭಾಷ್ ತಲೆಯಲ್ಲಿ ವಿಚಿತ್ರ ಐಡಿಯಾವೊಂದು ಸುಸುಳಿತ್ತು. ಹೇಗೂ ಅಜ್ಜ ಈಗ ಮಿನಿಸ್ಟ್ರಾಗಿರುವುದರಿಂದ ಬ್ಲಾಕ್‌ಮೇಲ್ ಖೆಡ್ಡಾಕ್ಕೆ ಕೆಡವಿಕೊಂಡರೆ ಮರ್ಯಾದೆಗಂಜಿ ಮೇಟಜ್ಜ ಸುಲಭವಾಗಿ ಕಾಸು ಬಿಚ್ಚುತ್ತಾನೆ ಎನ್ನುವುದು ಅವನ ಲೆಕ್ಕಾಚಾರವಾಗಿತ್ತು. ಅದನ್ನಾತ ವಿಜಯಲಕ್ಷ್ಮಿಯ ಮುಂದಿಟ್ಟಿದ್ದ. ಕೆಲಸ ಕೊಡಿಸ್ತೀನಿ, ಮನೆ ಕೊಡಿಸ್ತೀನಿ ಅಂತ ಖಾಲಿ ಮಾತಲ್ಲೇ ಉಕ್ಕನಿದು ಹೋಗುತ್ತಿದ್ದ ಮೇಟಜ್ಜನ ಮೇಲೆ ವಿಜಯಲಕ್ಷ್ಮಿಗೆ ಅದಾಗಲೇ ನಂಬಿಕೆ ಹೊರಟುಹೋಗಿತ್ತು. ಅವನಂತೂ ಕೊಡಿಸುವುದಿಲ್ಲ, ಬದಲಿಗೆ ಸುಭಾಷ್ ಹೇಳಿದಂತೆ ನಾವೇ ಅವನಿಂದ ಸುಲಿದುಕೊಳ್ಳುವುದು ಕ್ಷೇಮ ಅಂತ ಆಕೆ ಬ್ಲ್ಯಾಕ್‌ಮೇಲ್ ಕುತಂತ್ರಕ್ಕೆ ತಲೆಯಾಡಿಸಿದ್ದಳು.


ಗನ್‌ಮ್ಯಾನ್ ಸುಭಾಷ್ ಮುಗಳಖೋಡ

ಸಿ.ಡಿ. ಖೆಡ್ಡಾ ರೆಡಿ

ಅದೊಂದು ದಿನ ತಾವೇ ಗೊತ್ತು ಮಾಡಿದ್ದ ಬೆಡ್... ಒಂದರಲ್ಲಿ ಕ್ಯಾಮೆರಾ ಅಡಗಿಸಿಟ್ಟ ವಿಜಯಲಕ್ಷ್ಮಿ ನ... ಸುಭಾಷ್ ಹೇಳಿಕೊಟ್ಟಂತೆ ಮೇಟಜ್ಜನಿಗೆ 'ರಾ... ಸರಸಕು ರಾರಾ' ಅಂತ ಫೋನಾಯಿಸಿದ್ದಳು. ಹೆಣ್ಣಿನ... ಕೇಳುತ್ತಿದ್ದಂತೆ ರೊಚ್ಚಿಗೆದ್ದ ಅಜ್ಜ ಈ ಹಿಂದೆ ವಿಜಯ... ಜತೆ ನಡೆಸಿದ್ದ ಪ್ರಣಯದಾಟಗಳನ್ನೆಲ್ಲ ಕಣ್ಮುಂದೆ ತ... ಕೊಂಡು ಇದ್ದಬದ್ದ ಶಕ್ತಿಯನ್ನು ನಡುವಿಗೆ ನುಗ್ಗಿಸಿಕೊ... ವಿಜಯಲಕ್ಷ್ಮಿ ಕೋಣೆಯನ್ನು ನುಗ್ಗೇ ಬಿಟ್ಟಿದ್ದ. ... ಕ್ಯಾಮೆರಾ ಅಜ್ಜನ ಇಂಚಿಂಚೂ ಯೋಗಾಸನಗ... ರಸವತ್ತಾಗಿ ಸೆರೆ ಹಿಡಿದಿತ್ತು. ಇದ್ಯಾವುದರ ಪರಿವೆ... ಇಲ್ಲದ ಅಜ್ಜ, ಹಾರಿದ ಎರಡೇ ನಿಮಿಷಕ್ಕೆ ಕಚ್ಚೆ ಸರಿಪ... ಕೊಂಡು ಜುಬ್ಬ ನೇತಾಕಿಕೊಂಡು ಜಾಗ ಖಾಲಿ ಮಾ...

ಈ ಸಿ.ಡಿ.ಯನ್ನೇ ಮುಂದಿಟ್ಟುಕೊಂಡು ಸುಭ... ಮುಳಖೋಡ ಮೇಟಜ್ಜನನ್ನು ಬ್ಲಾಕ್‌ಮೇಲ್ ಮಾ... ಮುಂದಾಗಿದ್ದ. ಬರೋಬ್ಬರಿ ಒಂದೂವರೆ ಕೋಟಿ ರೂಪಾ... ಕೊಡದೆಹೋದರೆ ಸಿ.ಡಿ.ಯನ್ನು ಟಿವಿ ಚಾನೆಲ್‌ಗಳಿಗೆ ಕೊ... ಮಾನ ಹರಾಜು ಹಾಕ್ತೀನಿ ಅಂತ ಡೀಲ್ ಮುಂದಿ... ತನ್ನ ನೀಲಿ ರಾದ್ಧಾಂತ ಕಂಡು ಅಜ್ಜ ಹೌಹಾರಿತ್ತಾ... ಪುಕ್ಕಟ್ಟೆ ಉಂಡು ಅಭ್ಯಾಸವಾಗಿತ್ತಾದ್ದರಿಂದ ಒಂದು ಕೆ... ಕೊಡಲು ಸುತಾರಾಂ ಒಪ್ಪಲಿಲ್ಲ. ಅಷ್ಟಕ್ಕೂ ತಾನ... ಮಿನಿಷ್ಟ್ರು, ಅವನೋ ಯಃಕಶ್ಚಿತ್ ಕಾನ್‌ಸ್ಟೇಬಲ್ಲು. ... ಬಾಯ್ಮಾತಲ್ಲಿ ಬೆದರಿಸಿ ಬಗೆಹರಿಸಿಕೊಂಡರಾತು ಅ... ಉಡಾಫೆಯಲ್ಲಿ ತನ್ನ ಕುಲಬಾಂಧವ ನಿವೃತ್ತ ಡಿವ... ವಿ.ಪಿ. ಜಗಲಿಗೆ ಸಮಸ್ಯೆ ಬಗೆಹರಿಸುವ ಕಂಟ್ರ್ಯಾಕ್ಟು ಕೊ... ಮೇಟಜ್ಜ. ಆದರೆ ಸುಭಾಷ್ ಮತ್ತು ವಿಜಯಲಕ್ಷ್ಮಿ ಬೆದ... ಬಗ್ಗದಿದ್ದಾಗ ಮಧ್ಯಸ್ಥಿಕೆ ವಹಿಸಿದ್ದ ಜಗಲಿಯವರೇ ಡೀ... ಎಳೆದಾಡಿ ಅಂತೂಇಂತೂ ಐವತ್ತು ಲಕ್ಷಕ್ಕೆ ಫೈ... ಮಾಡಿಸಿದ್ದರು.

ಬಳ್ಳಾರಿಯ ಹೊಸ ಟ್ವಿಸ್ಟು

ಇತ್ತ ಜಗಲಿಯ ಮಧ್ಯಸ್ಥಿಕೆಯಲ್ಲಿ ಮಾತು... ನಡೆಯುತ್ತಿರುವಾಗಲೇ ಮೇಟಿ ಕಡೆಯಿಂದ ಸಣ್ಣ... ಬೆದರಿಕೆಗಳೂ ಸುಭಾಷ್‌ಗೆ ಬಂದು ತಲುಪಿದ್ದವು. ಹಾ... ಆತ ಯಾವುದಕ್ಕೂ ಇರಲಿ ಅಂತ ಇಡೀ ವೃತ್ತಾಂತ... ಬಳ್ಳಾರಿಯಲ್ಲಿದ್ದ ತನ್ನದೇ ಕುಲಬಾಂಧವ ರಾಜಶೇ... ಮುಲಾಲಿ ಎಂಬ ಆರ್‌ಟಿಐ ಕಾರ್ಯಕರ್ತನ ಬಳಿ ವ... ಡೀಲಿನ್ನೂ ಪ್ರಗತಿಯಲ್ಲಿರೋದರಿಂದ ಸದ್ಯಕ್ಕೇ ... ಬಾಯಿಬಿಡೋದು ಬೇಡ, ಅಂಥಾ ಸಂದರ್ಭವೇನಾ... ಬಂದರೆ ಒಟ್ಟಿಗೇ ಫೀಲ್ಡಿಗಿಳಿಯೋಣ ಅನ್ನೊ ಸೂಚನೆಯ... ಸುಭಾಷ್ ಮುಲಾಲಿಗೆ ಕೊಟ್ಟಿದ್ದ.

ಅತ್ತ ಎರಡೂ ಕಡೆಯವರ ನಡುವೆ ಒಪ್ಪಂದ... ಐವತ್ತು ಲಕ್ಷಕ್ಕೆ ವ್ಯವಹಾರ ಬಗೆಹರಿಯುವ ಮ... ನಿಕ್ಕಿಯಾಗುತ್ತಿದ್ದಂತೆಯೇ ಇತ್ತ ಹಳೇ ಐದುನೂರು ಹ... ಸಾವಿರ ರೂಪಾಯಿಯ ನೋಟುಗಳು ಬ್ಯಾನ್ ಆಗಿ ದ... ದೇಶವೇ ದುಡ್ಡಿನ ಹಾಹಾಕಾರಕ್ಕೆ ತುತ್ತಾಗಿತ್ತು. ... ಹೊಂದಿಸುವುದು ತುಸು ಡಿಲೇ ಆಗಿತ್ತು. ಹಾಗಂತ ಮೇ... ಸುಮ್ಮನೇ ಕೂರಲಿಲ್ಲ. ಅಬಕಾರಿ ಕಮೀಷನರ್‌ಗೆ ತಾ... ಮಾಡಿ ಎಂಎಸ್‌ಐಎಲ್ ಲೈಸೆನ್ಸ್ ವ್ಯವಹಾರ... ಹೇಗಾದರು ಮಾಡಿ ಐವತ್ತು ಲಕ್ಷ ಅಡ್ಜಸ್ಟ್ ಮಾಡು... ಅಲಿಖಿತ ಆದೇಶ ಬಿಸಾಕಿದ್ದರು. ದುಡ್ಡೇ ಇರದಿ... ಕಮೀಷನರ್ ತಾನೇ ಏನು ಮಾಡಿಯಾನು.

ಅಷ್ಟರೊಳಗೆ ಬಳ್ಳಾರಿಯ ಆರ್‌ಟಿಐ ಆಕ್ಟಿ... ರಾಜಶೇಖರ್ ಮುಲಾಲಿ ಕಡೆಯಿಂದ ಒ... ಯಡವಟ್ಟಾಗಿತ್ತು. ಮಾಧ್ಯಮ ಮಿತ್ರರೊಬ್ಬರೊ... ಮಾತಾಡುತ್ತಾ ಮೇಟಿಯ ರಾಸಲೀಲೆ ಸುದ್ದಿಯನ್ನು ಸಣ್ಣ... ಲೀಕ್ ಮಾಡಿಬಿಟ್ಟಿದ್ದ. ಅದು ಮಾಧ್ಯಮಗಳಲ್ಲಿ ಹೈ... ವಿಷಯವಾಗುತ್ತಿದ್ದಂತೆಯೇ ತನ್ನ ಹೆಸರು ಕಾಪಾಡಿಕೊ... ಸಲುವಾಗಿ ಹೌದು, ಮೇಟಿಯ ಸೆಕ್ಸ್ ಸಿಡಿ ಇರೊ...

⏭ 1

ಕಳ್ಳಾಟ ಮುಚ್ಚಿಹಾಕಲು ಬಯಲಾಟಗಳು!

ನೋ ಡೌಟ್, ಮೇಟಜ್ಜನ ಪ್ರೇಮಪ್ರಸಂಗ ಇಡಿಯಾಗಿ ಒಂದು ಕಳ್ಳಾಟದ ವ್ಯೂಹ. ಬ್ಲಾಕ್‌ಮೇಲ್ ಮಾಡಲೆಂದೇ ಹೆಣೆದ ಜಾಲ. ಅದೊಂದೇ ಕಾರಣಕ್ಕೆ ಮೇಟಜ್ಜನಿಗೆ ಕ್ಲೀನ್‌ಚಿಟ್ ಕೊಡಲಾಗುವುದಿಲ್ಲ, ಆದರೆ ಬಾಗಲಕೋಟೆಯ ಪೊಲೀಸರ ವರ್ತನೆ ನೋಡಿದರೆ ಅದ್ಯಾಕೊ ಮೇಟಜ್ಜನೇ ಇಡೀ ಪ್ರಕರಣದ ಇನ್ವೆಸ್ಟಿಗೇಷನ್ ಆಫೀಸರ್ ಆಗಿರುವಂತೆ ಕಂಡುಬರುತ್ತಿದೆ. ಜಿಲ್ಲಾ ಎಸ್.ಪಿ. ಎನ್. ನಾಗರಾಜ್‌ರಿಂದ ಮೊದಲ್ಗೊಂಡು ಇಡೀ ಪೊಲೀಸ್ ಇಲಾಖೆಯೇ ಈ ಪ್ರಕರಣದಲ್ಲಿ ಮೇಟಜ್ಜನ ಆಣತಿಯಂತೆ ಕದಲಾಡುತ್ತಿದೆಯೇನೋ ಅನ್ನಿಸುತ್ತಿದೆ. ಮೊದಲನೆಯದಾಗಿ, ಘಟನೆ ಬೆಳಕಿಗೆ ಬಂದು ಗನ್‌ಮ್ಯಾನ್ ಸುಭಾಷ್ ಮುಳಖೋಡಾ ನಾಪತ್ತೆಯಾದ ನಂತರ, ಸುದ್ದಿ ಮಾಧ್ಯಮಗಳಲ್ಲಿ ಬೌನ್ಸ್ ಆಗಲು ಶುರುವಾದ ನಂತರ ತನಗೆ ಜೀವಬೆದರಿಕೆ ಇದೆ ಅಂತ ವಿಜಯಲಕ್ಷ್ಮಿ ಸ್ವತಃ ಎಸ್‌ಪಿ ಸಾಹೇಬರ ಆಫೀಸಿಗೇ ಬಂದು ಕಣ್ಣೀರಿಟ್ಟಿದ್ದಳು. ಅಲ್ಲಿ ತನ್ನ ಜೀವಕ್ಕೆ ಏನಾದರು ಅಪಾಯವಾದರೆ ಮೇಟಿ ಸಾಹೇಬ ಮತ್ತು ಸುಭಾಷ್ ಮುಳಖೋಡನೇ ಹೊಣೆ ಅಂತ ಸಾರ್ವಜನಿಕವಾಗಿ ಆರೋಪಿಸಿದ್ದಳು. ಅಂತ ಸಮಯದಲ್ಲಿ ಪೊಲೀಸರು ಮೊದಲ ಮಾಡಬೇಕಾದ್ದು ಅವಳಿಂದ ಲಿಖಿತ ದೂರು ದಾಖಲಿಸಿಕೊಂಡು ರಕ್ಷಣೆ ನೀಡುವುದು. ಆದರೆ ಎಸ್.ಪಿ ನಾಗರಾಜ್ ಸಾಹೇಬರು ಆರಾಮಾಗಿ ಕೂತು ಆವಳ ಹರಿಕತೆ ಕೇಳಿಸಿಕೊಂಡು ರಕ್ಷಣೆಯ ಭರವಸೆ ನೀಡಿದರೆ ಹೊರತು ಮೇಟಜ್ಜನ ಮೇಲೆ ಲಿಖಿತ ದೂರು ಬರೆಸಿಕೊಳ್ಳಲಿಲ್ಲ. ಆದಾದ ಮೇಲೆ ಆಕೆಯನ್ನು ಚಿಕಿತ್ಸೆಗೆಂದು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಬದಲು ಮೇಟಜ್ಜನ ಕುಲಬಾಂಧವ ಹಾಗೂ ಬಾದಾಮಿಯ ಭಾವಿ ಶಾಸಕ ಅಂತ ಸ್ವಯಂಘೋಷಿಸಿಕೊಂಡು ಓಡಾಡುತ್ತಿರುವ ದೇವರಾಜ್ ಪಾಟೀಲನ 'ಧನುಷ್' ಎಂಬ ಖಾಸಗಿ ಆಸ್ಪತ್ರೆಗೆ ಕರೆತಂದಿದ್ದರು. ಜನ ಮತ್ತು ಮಾಧ್ಯಮದವರು ಪ್ರಶ್ನಿಸಿದ ಮೇಲಷ್ಟೆ ಆಕೆಯನ್ನು ಸರ್ಕಾರಿ ಆಸ್ಪತ್ರೆಗೆ ಶಿಫ್ಟ್ ಮಾಡಿದ್ದು. ಜೀವಕ್ಕೆ ಬೆದರಿಕೆ ಇರುವ ಕಾರಣವೊಡ್ಡಿ ಅಲ್ಲಿ ಆಕೆಯನ್ನು ಮಾಧ್ಯಮದವರೂ ಭೇಟಿ ಮಾಡದಂತ ಖಾಕಿ ಸರ್ಪಗಾವಲಿನಲ್ಲಿ ಇಟ್ಟಿದ್ದರು. ಆದರೆ ರಾತ್ರೋರಾತ್ರಿ ಅಲ್ಲಿಂದ ಕಣ್ಮರೆಯಾಗಿರುವ ವಿಜಯಲಕ್ಷ್ಮಿ ಎಲ್ಲಿದ್ದಾಳೆಂಬ ಸುಳಿವೂ ಇಲ್ಲ. ಒಟ್ಟಾರೆ ಮೇಟಜ್ಜನ ಮೂಗಿನ ನೇರಕ್ಕೆ ಸರ್ಕಾರಿ ಬಯಲಾಟವೊಂದು ಭರ್ಜರಿಯಾಗಿ ನಡೆಯುತ್ತಿದೆ.

ರೇಪಿಸ್ಟ್ ನ್ಯೂಮರಾಲಜಿಸ್ಟ್ ಎಸ್ಕೇಪ್!



ರೆವತ್ತೇ ನಾನು ಹೇಳಿದ್ದೆ... ಆಸ್ಟ್ರೇಲಿಯಾ ವಿರುದ್ಧ ...ಯಾ ಸೋಲುತ್ತೆ ಅಂತ. ಈಗೇನಾಯ್ತೂ...? ವಿರಾಟ್ ... ಇಂತಿಂಥಾ ಡೇಟಲ್ಲೇ ಹತ್ತು ರನ್ ಒಳಗೆ ಔಟಾಗ್ತಾನೆ ... ಹೇಳಿರ್ಲಿಲ್ವಾ? ಇಂಥಾ ಡೇಟಲ್ಲೇ ಫಿಲ್ಮ್ ಆಕ್ಟರ್ ... ಜೈಲಿಗೆ ಹೋಗಿದ್ದು, ಫೆಬ್ರವರಿ 2 ರಂದು ...ರು ಹುಟ್ಟಿರ್ತಾರೋ ಅವರೆಲ್ಲ ಇಂತಿಂಥಾ ದಿನಾಂಕದ ... ಆಕ್ಸಿಡೆಂಟ್‌ಗೆ ಬಲಿಯಾಗ್ತಾರೆ. ಇಂಥಾ ಡೇಟಲ್ಲೇ ... ಅಣ್ಣಾವ್ರನ್ನ ಕಿಡ್ನಾಪ್ ಮಾಡಿದ್ದು, ಆ ಡೇಟಲ್ಲಿ ...ರು ಮದುವೆ ಆಗಿರ್ತಾರೋ ಅಂಥವರ ಹೆಂಡರನ್ನೆಲ್ಲ ... ಲವ್ವರ್‌ಗಳು ಹಾರಿಸಿಕೊಂಡೋಗ್ತಾರೆ....!

ನಂಬರ್ ಅಂದ್ರೆ ನಾನು ನಾನು ಅಂದ್ರೆ ನಂಬರ್! ... ಕಂಪೆನಿಯವರು ಇಂಥಾ ನಂಬರಿನ ಸಿಮ್ ಬಿಟ್ಟಿದ್ದಾರೆ ... ಅದು ವ್ಯಾಪಾರ ವಹಿವಾಟಿಗೆ ತುಂಬಾ ಲಕ್ಕು. ...ಟೆಲ್ ಕಂಪೆನಿಯವರ ಸಿಮ್ಮುಗಳೆಲ್ಲ ಇಂತಿಂಥಾ ...ರ್‌ಗಳಿಂದ ಶುರುವಾಗೋದರಿಂದ ಪ್ರತಿ ಶನಿವಾರ ...ವರ ರಾಶಿಗೆ ಶನಿ ವಕ್ಕರಿಸುತ್ತಾನೆ. ಇಂಥಾ ಡೇಟಲ್ಲೇ ...ನ್ ಖಾನ್ ಜೈಲಿಗೆ ಹೋಗಿದ್ದು ಅದಕ್ಕೆ ಆತನ ...ಥಾ ನಂಬರಿನ ಕಾರೇ ಕಾರಣ.....! ನಂಬರ್ ಅಂದ್ರೆ ... ನಾನು ಅಂದ್ರೆ ನಂಬರ್ರೂ.....!!

...ಗೆ ಸಿಕ್ಕಸಿಕ್ಕ ಟೀವಿ ಚಾನಲ್‌ಗಳಲ್ಲೆಲ್ಲಾ ತನ್ನ ನಂಬರ್ ... ಪೌರುಷ ಮೆರೆಯುತ್ತಾ ಅಮಾಯಕರಿಗೆ ಟೋಪಿ ...ವುದನ್ನೇ ಕುಲಕಸುಬಾಗಿಸಿಕೊಂಡಿದ್ದ ಖದೀಮ ...ರ್ಯವರ್ಧನ್ ಪರಾರಿಯಾಗಿದ್ದಾನೆ. ಅದೂ ಅತ್ಯಾಚಾರ ...ದ ಕೇಸು ಹೊತ್ತು, ರಾಜರಾಜೇಶ್ವರಿನಗರ ಪೊಲೀಸ್ ... ಇನ್ಸ್‌ಪೆಕ್ಟರ್ ಶಿವಾರೆಡ್ಡಿಯವರಿಗೇನಾದರೂ ... ಎಲ್ಲಿದ್ದಾನೆಂದು ಸುಳಿವು ಸಿಕ್ಕರೆ ಸಾಕು ಆಡಾಬೇಡಿ ... ಎಳೆದೊಯ್ದು ಲಾಕಪ್ಪಿಗೆ ಗುದಮುತ್ತಾರೆ. ಪತ್ರಿಕೆಗಳಂತೂ ...ನ್ನು ದೇವಮಾನವನೆಂದೂ ಗುರೂಜೀಯೆಂದೂ ...ಮಗೋಚರ ಅಟೆಂಪ್ಟ್ ಟು ರೇಪ್ ಪ್ರಕರಣಕ್ಕೆ ...ಕೆ ಕೊಡುತ್ತಿದ್ದಾರೆ.

ಖದೀಮ ಆನಂದ ಗುರೂಜಿ, ರೇಪಿಸ್ಟ್ ದೇವೀಶ್ರೀ ...ಜಿ, ಹೊಲಸು ಬಾಯಿ ಬ್ರಹ್ಮಾಂಡ ಗುರೂಜಿ, ...ಲೆ ರವಿಶಂಕರ್ ಗುರೂಜಿ, ಪ್ರತ್ಯಂಗಿರ ಸ್ವಾಮೀಜಿ- ... ದಿನ ಬೆಳಗ್ಗೆಯಾದರೆ ಒಂದಲ್ಲ ಒಂದು ಟೀವಿ ...ಗಳ ಮೂಲಕ ತನ್ನ ಮಕ್ಮಲ್ ಟೋಪಿ ಬಲೆಯನ್ನು ...ಲೇ ಇರುವ ವಂಚಕ ಜ್ಯೋತಿಷಿಗಳ ಪೈಕಿ ಈಗ ...ರಿಯಾದ ಆರ್ಯವರ್ಧನ್ ಅತ್ಯಂತ ...ಕುತಕಾರಿಯೂ ಹೌದು ವಂಚನೆಯಲ್ಲಿ ನಿಪುಣನೂ ... ವಿಶೇಷವೆಂದರೆ ಬೇರೆಲ್ಲ ಜ್ಯೋತಿಷಿಗಳಂತೆ ಈತ ... ಹಸ್ತ ಸಾಮುದ್ರಿಕೆ, ಹಲ್ಲೀ ಶಕುನ, ಹಕ್ಕೀ ಶಕುನ, ... ಫಲ ಇತ್ಯಾದಿಗಳನ್ನವಲಂಬಿಸಿ ದೋಚುವವನಲ್ಲ. ...ದು ನಂಬರ್ ಗೇಮ್. ಅಂದರೆ ಸಂಖ್ಯಾಶಾಸ್ತ್ರ, ನಾನು ... ನಂಬರು ನಂಬರೂ ಅಂದ್ರೆ ನಾನು... ಎಂದು ...ಡ ಚಾನಲ್ಲುಗಳ ಮೂಲಕ ವಕ್ಕರಿಸುತ್ತಾನೆ.

ಕೃತಕ ಗಿರಾಕಿಗಳ ಡ್ರಾಮಾ?

...ದ್ದ, ಜನಶ್ರೀ ಚಾನಲ್ಲಿನಲ್ಲಿ ದಿನಕ್ಕೊಮ್ಮೆ, ರಾಜ್ ನ್ಯೂಸ್‌ನಲ್ಲಿ ವಾರಕ್ಕೊಮ್ಮೆ, ಸಮಯ, ಕಸ್ತೂರಿ, ಪ್ರಜಾ ಟಿವಿ, ಸುವರ್ಣ- ಹೀಗೆ ನೈನ್ ಒಂದರ ಹೊರತಾಗಿ ಮಿಕ್ಕೆಲ್ಲಾ ಚಾನಲ್‌ಗಳೂ ಈತನ ಸಂಖ್ಯಾ ಪ್ರವರವನ್ನು ಬೇಕುಬೇಕೆಂದಾಗಲೆಲ್ಲ ಬಿತ್ತರಿಸುತ್ತವೆ. ಬೇರೆಲ್ಲ ಜ್ಯೋತಿಷಿಗಳಿಗೆ ನಿರ್ದಿಷ್ಟ ಚಾನೆಲ್ಲಿದೆ. ಪ್ರತಿ ಎಪಿಸೋಡೊಂದಕ್ಕೆ ಅಂದರೆ ಅರ್ಧ ಗಂಟೆಗೆ ಮೂವತ್ತೋ ನಲವತ್ತೋ ಹೆಚ್ಚೆಂದರೆ ಐವತ್ತೋ ಸಾವಿರವನ್ನಷ್ಟೇ ಕೊಡುತ್ತಾರೆ. ಆದರೆ ಆರ್ಯವರ್ಧನ್ ಹಾಗಲ್ಲ, ಒಂದೇ ಸಲಕ್ಕೆ ಒಂದು ಲಕ್ಷ ಕೊಡುತ್ತಾನೆ. ಆನಂದ್ ಗುರೂಜಿ, ಬ್ರಹ್ಮಾಂಡ, ದೇವೀಶ್ರೀ, ಪ್ರತ್ಯಂಗಿನಿ ಸ್ವಾಮಿ ಇತ್ಯಾದಿಗಳೆಲ್ಲ ಹಲ್ಲುಗಿಂಜಿ ಕೊಡುವ ಮೂವತ್ತೋ ಐವತ್ತೋ ಸಾವಿರವೆಲ್ಲಿ? ಎಳೆದದ್ದೇ ಲಕ್ಷದ ಕಂತೆ ಕೈಗಿಡುವ ಆರ್ಯವರ್ಧನನೆಲ್ಲಿ?

ಹಾಗಂತ ಆರ್ಯವರ್ಧನ್ ಬಳಿ ಸಿಕ್ಕಾಪಟ್ಟೆ ದುಡ್ಡಿದೆಯೆಂದಾಗಲಿ, ಆತ ಹುಟ್ಟಾ ಶ್ರೀಮಂತನೆಂದಾಗಲಿ ಅಲ್ಲ, ಅದು ಅವನ ಬಿಸಿನೆಸ್ ಟೆಕ್ನಿಕ್. ಲಡಾಸು ಚಾನಲ್ಲೊಂದಕ್ಕೆ ಏಕಾಏಕಿ ಸುಮ್ಮನೇನೂ ಆತ ಲಕ್ಷ ಸುರಿಯುವುದಿಲ್ಲ. ಹಾಗೇ ಸುರಿದನೆಂದ ಮೇಲೆ ಕಮ್ಮಿಯೆಂದರೂ ಐವತ್ತು ಮಂದಿ ಅಮಾಯಕರ ಮನೆ ತೊಳೆಯದೇ ಇರುವವನಲ್ಲ. ಚಾಮರಾಜಪೇಟೆಯ ರಾಷ್ಟ್ರೋತ್ಥಾನ ಪರಿಷತ್ ಪಕ್ಕದಲ್ಲೊಂದು, ರಾಜರಾಜೇಶ್ವರಿ ನಗರದಲ್ಲಿ ಮತ್ತೊಂದು, ಜಯನಗರದ ನೈನ್ತ್ ಬ್ಲಾಕಿನಲ್ಲಿ ಮಗದೊಂದು ಹೀಗೆ ಬೆಂಗಳೂರೊಂದರಲ್ಲೇ ಈತನ ಮೂರು ದಗಾಕೇಂದ್ರಗಳಿವೆ. ಚಾಮರಾಜಪೇಟೆಯ ಅಡ್ಡೆಯಲ್ಲಂತೂ ಸದಾ ಹೊಸ ನೋಟಿಗಾಗಿ ಎಟಿಎಂಗಳ ಮುಂದೆ ಜನ ಕ್ಯೂ ನಿಂತಂತೆ ನಿಂತಿರುತ್ತಾರೆ.

ವಿಚಿತ್ರವೆಂದರೆ ಯಾವತ್ತು ಗಿರಾಕಿಗಳೇ ಇಲ್ಲದೆ ಅಡ್ಡೆ ನೊಣ ಹೊಡೆಯುತ್ತೋ ಆವತ್ತು ಟಿ.ಆರ್. ಮಿಲ್ ಹಿಂಭಾಗದ ಆಜಾದ್‌ನಗರ ಮತ್ತು ಹೊಸಗುಡ್ಡದಹಳ್ಳಿ ಸ್ಲಮ್ಮುಗಳಿಂದ ಬಾಡಿಗೆ ಜನರನ್ನು ಕರೆಸಿ ಕೃತಕ ಜನಜಂಗುಳಿಯ ಡ್ರಾಮಾ ಮಾಡುತ್ತಾನೆ. ಹಾಗೆ ಬೆಳಗ್ಗಿಯಿಂದ ಸಂಜೆತನಕ ಈತನ ಅಡ್ಡೆಯೆದುರು ಸಾಲುಗಟ್ಟಿ ನಿಲ್ಲುವ ದಢೂತಿ ಹೆಂಗಸರಿಗೆ ಈತ ದಿನಕ್ಕೆ ಮೂನ್ನೂರು ರೂಪಾಯಿ ಬಟವಾಡೆ ಮಾಡುತ್ತಾನೆ. ಮಧ್ಯಾಹ್ನ ಊಟದ ವ್ಯವಸ್ಥೆಯನ್ನೂ ಕಲ್ಪಿಸುತ್ತಾನೆ. ಈ ರೀತಿ ಹತ್ತು ಜನಕ್ಕೆ ಸಾಲುಗಟ್ಟಿ ನಿಲ್ಲಲೆಂದೇ ದಿನವೊಂದಕ್ಕೆ ಮೂರು ಸಾವಿರ ರೂಪಾಯಿ ಹೋದರೂ ಒಬ್ಬ ಗಿರಾಕಿಯಿಂದಲೇ ಹತ್ತು ಸಾವಿರ ಸುಲಿದರೆ ಸಾಕು ಹಾಕಿದ ಬಂಡವಾಳ ಕಳೆದು ಇನ್ನೂ ಏಳೂ ಸಾವಿರ ಮಿಕ್ಕುತ್ತದೆಯಲ್ಲ!

ಮೊದಲ ಬಲಿ!

ಒಂದೆಡೆ ಟೀವಿ ಚಾನಲ್ಲುಗಳು ಮತ್ತೊಂದೆಡೆ ದಿನಗೂಲಿಗೆ ಸಾಲುಗಟ್ಟುವವರಿದ್ದರೆ ಸಾಕು ಎಂಥವರನ್ನೂ ಬುಟ್ಟಿಗೆ ಹಾಕಿಕೊಳ್ಳುವ ಕಲೆ ಈ ಘಟವನಿಗೆ ರಕ್ತಗತ. ಇಲ್ಲಿಗೆ ವರ್ಷದ ಹಿಂದೆ ಈತನ ಜ್ಯೋತಿಷ್ಯ ಕೇಂದ್ರದಲ್ಲಿ ರಿಸೆಪ್ಷನಿಸ್ಟ್ ಆಗಿದ್ದ ಹುಡುಗಿಯೊಬ್ಬಳು ಕಂಡಕಂಡ ಪತ್ರಕರ್ತರು ನ್ಯೂಸ್ ಚಾನಲ್ಲುಗಳ ರಿಪೋರ್ಟರುಗಳನ್ನು ಕಂಡು ಆರ್ಯವರ್ಧನ್ ತನ್ನನ್ನು ಮುಕ್ಕಿದ ಕತೆ ಹೇಳಿಕೊಂಡು ಕಣ್ಣೀರಿಟ್ಟಳು. ಯಾರೊಬ್ಬರೂ ಈಕೆಗೆ ನೆರವಾಗುವುದಿರಲಿ, ಕನಿಷ್ಠ ಸಾಂತ್ವನದ ಮಾತನ್ನೂ ಹೇಳಲಿಲ್ಲ. ಹುಡುಗಿಯ ಕತೆ ಕೇಳಿದವರೆಲ್ಲರೂ ಆಕೆಯಿಂದಲೇ ಆರ್ಯವರ್ಧನ್ ನಂಬರ್ ಪಡಕೊಂಡು ಕೈತುಂಬಾ ಕಾಸೆಣಿಸಿಕೊಂಡರು. ಆತನ ಚಾಮರಾಜಪೇಟೆಯ ಅಡ್ಡೆ ಮತ್ತು ರಾಜರಾಜೇಶ್ವರಿನಗರದ ಅಡ್ಡೆಗಳಲ್ಲಿ ರಿಸೆಪ್ಷನಿಸ್ಟ್, ನ್ಯೂಮರಾಲಜಿ ಅಸಿಸ್ಟೆಂಟ್ಸ್, ಪಿಆರ್‌ಓ ಗುರೂಜಿಯೇ. ಆಪ್ತ ಸಹಾಯಕ ಇತ್ಯಾದಿ ಹೆಸರುಗಳಲ್ಲಿ ಕೆಲಸಕ್ಕೆ ಸೇರುವವರೆಲ್ಲರೂ ಏಕೆ ಅವಿವಾಹಿತ ಯುವತಿಯರೇ ಆಗಿರುತ್ತಾರೆ ಮತ್ತು ಆರು ತಿಂಗಳಲ್ಲೇ ಏಕೆ ನಿಗೂಢವಾಗಿ ನಾಪತ್ತೆಯಾಗುತ್ತಾರೆಂಬುದನ್ನು ಕೆದಕುತ್ತಾ ಹೋದರೆ ಸಾಕು ಆರ್ಯವರ್ಧನ್‌ನ ಅಸಲೀ ಮುಖ ಬಯಲಾಗುತ್ತದೆ.

ಆರ್ಯವರ್ಧನ್ ಈತನ ಹುಟ್ಟು ಹೆಸರೇನಲ್ಲ. ಎಲ್ಲರೂ ತಿಳಿದಂತೆ ಈತ ಅಯ್ಯಂಗಾರಿಯಾಗಲಿ ಬ್ರಾಹ್ಮಣನಾಗಲಿ ಅಲ್ಲ. ಒಂದಾನೊಂದು ಕಾಲಕ್ಕೆ ಈತ ಯಃಕಶ್ಚಿತ್ ಬೇಕರಿ ಕೆಲಸಗಾರ. ಮೂಲತಃ ಹಾಸನದ ಪಕ್ಕದ ಹಳ್ಳಿಯೊಂದರಿಂದ ಬೇಕರಿ ಕಾರ್ಮಿಕನಾಗಿ ಬೆಂಗಳೂರಿಗೆ ಕಾಲಿಟ್ಟ ಈತನ ಹುಟ್ಟು ಹೆಸರು ಪುಟ್ಟೇಗೌಡ. ಸುಬ್ಬಯ್ಯ ಸರ್ಕಲ್‌ನ ಜ್ಯೋತಿಲಕ್ಷ್ಮಿ ಬೇಕರಿಯಲ್ಲಿ ಹಿಟ್ಟು ಕಲಸಿಕೊಂಡಿದ್ದ ಪಕ್ಕದಲ್ಲೇ ಜಯಶ್ರೀನಿವಾಸನ್ ಎಂಬಾತನ ಜ್ಯೋತಿಷ್ಯ ಕೇಂದ್ರವಿತ್ತು, ಅದು 2001ರ ಕಾಲ. ಪ್ರತಿನಿತ್ಯ ಬ್ರೆಡ್ಡು ಬನ್ನಿಗೆಂದೇ ಬೇಕರಿಗೆ ಬರುತ್ತಿದ್ದ ಜಯಶ್ರೀನಿವಾಸನ್‌ಗೆ ಹೇಗೋ ಅಂಟಿಕೊಂಡ ಪುಟ್ಟೇಗೌಡ ಆತನ ಸಲಹೆಯ ಮೇರೆಗೇ ತನ್ನ ಹೆಸರನ್ನು ಆರ್ಯವರ್ಧನ್ ಎಂದು ಬದಲಿಸಿಕೊಂಡ. ಲಾಲ್‌ಬಾಗ್‌ಗೆ ಬರುತ್ತಿದ್ದ ಹುಡುಗಿಯರನ್ನು ಪೀಡಿಸುತ್ತಿದ್ದುದರಿಂದ ಈತನಿಗೆ ಪೋಲಿ ಪುಟ್ಟ ಎಂಬ ಬಿರುದು ಬಾವಲಿಯೂ ಪ್ರಾಪ್ತಿಯಾಗಿತ್ತು.

ಮುಂದೆ ಜಯಶ್ರೀನಿವಾಸನ್ ಬಳಿಯೇ ಕೆಲಸಕ್ಕೆ ಸೇರಿಕೊಂಡ ಪೋಲಿ ಪುಟ್ಟ ಕೆಲಕಾಲ ಆತನ ಆಟೋ ಓಡಿಸಿಕೊಂಡಿದ್ದ. ಆ ಹೊತ್ತಿಗೆ ತನ್ನ ದೇವತಾಕಾರ್ಯಕ್ಕೆಂದೇ ಜಯಶ್ರೀನಿವಾಸನ್ ಸ್ವಂತ ಆಟೋ ಇಟ್ಟುಕೊಂಡಿದ್ದ. ಸಂಖ್ಯಾಶಾಸ್ತ್ರದ ಬಗ್ಗೆ ಜನಕ್ಕೆ ಏನೇನೂ ಗೊತ್ತಿರಲಿಲ್ಲವಾದ್ದರಿಂದ ಉಪಕಸುಬಾಗಿಸಿಕೊಂಡಿದ್ದ. ಅದೇನು ಮಂಕುಬೂದಿ ಎರಚಿದನೋ ಕಾಲಕ್ರಮೇಣ ಪೋಲಿಪುಟ್ಟನೇ ಸಂಖ್ಯಾ ಶ್ರೀನಿವಾಸನ್‌ನ ಆಪ್ತ ಸಹಾಯಕನಾಗಿಬಿಟ್ಟ.

ಬ್ರಾಹ್ಮಣ ವೇಷ!

2005 ರ ಹೊತ್ತಿಗೆ ಬೇಕಾಬಿಟ್ಟಿ ಕೇಬಲ್ ಚಾನಲ್‌ಗಳು ಹುಟ್ಟಿಕೊಂಡವಲ್ಲ ಲೋಕಲ್ ಚಾನಲ್ಲುಗಳಲ್ಲಿ ನ್ಯೂಮರಾಲಜಿ, ಸಂಖ್ಯಾಶಾಸ್ತ್ರ, ಸಂಖ್ಯಾ ವಾಸ್ತು ಹೆಸರಲ್ಲಿ ಜಯಶ್ರೀನಿವಾಸನ್‌ನ ಕಾರ್ಯಕ್ರಮಗಳು ಶುರುವಾದವು. ಗಿರಾಕಿಗಳೂ ಹೆಚ್ಚಾಗಿ ವ್ಯಾಪಾರ ಕುದುರಿತ್ತು, ದುಡ್ಡೂಕಾಸು ಚೆನ್ನಾಗಿಯೇ ಓಡಾಡುತ್ತಿತ್ತು. ಇದನ್ನು ಕಂಡ ಶಿಷ್ಯ ಹರ್ಷ ಉರ್ಫ್ ಪೋಲಿಪುಟ್ಟ ಶ್ರೀನಿವಾಸನ್ ಬಳಿ ಸಹಾಯಕಿಯಾಗಿದ್ದ ಹೆಂಗಸೊಬ್ಬಳನ್ನು ಅಡ್ಜಸ್ಟ್ ಮಾಡಿಕೊಂಡಿದ್ದೇ ಗುರುವಿನ ವಿರುದ್ಧವೇ ಆಕೆಯನ್ನು ಛೂಬಿಟ್ಟ. ಜಯಶ್ರೀನಿವಾಸನ್ ವಿರುದ್ಧ ಆಕೆಯಿಂದ ಲೈಂಗಿಕ ಕಿರುಕುಳದ ದೂರನ್ನು ಕೊಡಿಸಿದ. ಅಲ್ಲಿಗೆ ತಾನು ಗುರುವಿನ ಸಮಾಧಿ ಮೇಲೆ ಕೂತು ಉಂಡರಾಯಿತೆಂಬ ಲೆಕ್ಕ ಹಾಕಿಯೇ ತನ್ನದೇ ಪ್ರತ್ಯೇಕ ಜ್ಯೋತಿಷ್ಯ ಕೇಂದ್ರವೊಂದನ್ನು ಹುಟ್ಟುಹಾಕಿದ!

ಹಾಗೇ ಶಂಕರಪುರದ ಬ್ರಾಹ್ಮಣರ ಅಡ್ಡೆ ರಾಷ್ಟ್ರೋತ್ಥಾನ ಪರಿಷತ್ ಪಕ್ಕ ತನ್ನ ಸಂಖ್ಯಾವಾಸ್ತು, ಸಂಖ್ಯಾಶಾಸ್ತ್ರದ ಅಡ್ಡೆ ತೆರೆದವನು ಏಕಾಏಕಿ ತನ್ನ ಹೆಸರನ್ನೇ ಬದಲಿಸಿಕೊಂಡ. ಪುಟ್ಟೇಗೌಡ, ಪುಟ್ಟ ನಂತರ ಹರ್ಷವರ್ಧನ್ ಎಂದಿದ್ದದ್ದು 2008 ರ ಹೊತ್ತಿಗೆ ಆರ್ಯವರ್ಧನ್ ಎಂದಾಗಿತ್ತು. ಹೆಸರಿಗೆ ತಕ್ಕಂತೆ ಎಂಟಾಣೆಯ ಜನಿವಾರವನ್ನೂ ಧರಿಸಿಕೊಂಡ. ಪಕ್ಕಾ ಬ್ರಾಹ್ಮಣನಂತೆ, ವೇದೋಪನಿಷತ್ ಪಾರಂಗತನಂತೆ ಉದ್ದುದ್ದ ನಾಮ, ಅಡ್ಡಡ್ಡ ಪಟ್ಟೆಗಳನ್ನು ಕಂಡವರೆಲ್ಲ ಈತನೆಲ್ಲೋ ಮಡಿವಂತ ಬ್ರಾಹ್ಮಣನೇ ಇರಬೇಕೆಂದು ಮುಗಿಬಿದ್ದರು. ಸಾಲದ್ದಕ್ಕೆ ಕೊರಳಿಗೆ ಹಾರದಂತೆ ಘಟರುದ್ರಾಕ್ಷಿ ಮಾಲೆಯನ್ನು ಧರಿಸುತ್ತಿದ್ದ. ಯಾವುದೇ ಟೀವಿ, ಕೇಬಲ್ ಚಾನಲ್‌ಗೆ ಬಂದರೂ ರಾಜರ ಕಾಲದ ತೆಲುಗು ಸಿನಿಮಾದ ಹಾಗೆಯೇ ಚಿನ್ನದ ಲೇಪನದ ಸಿಂಹಾಸನದ ಮೇಲೆ ಕೂರುತ್ತಿದ್ದ. ಬಾಯಿಬಿಟ್ಟರೆ ಸಾಕು, ಸಿನಿಮಾ ಸ್ಟಾರ್‌ಗಳು, ಕ್ರಿಕೆಟ್ ಆಟಗಾರರು ಅಥವಾ ಹೆಸರಾಂತ ರಾಜಕಾರಣಿಗಳು!

ಪಾಪದ ಕೊಡ ಭರ್ತಿ

ಇಂಥದ್ದೇ ದಿನಾಂಕದಲ್ಲಿ ನಟ ಸುದೀಪ್ ಮದುವೆಯಾಗಿದ್ದರಿಂದ ಆ ಡೇಟಲ್ಲಿ ಯಾರ್‍ಯಾರು ಮದುವೆಯಾಗ್ತಾರೋ ಡೈವೋರ್ಸ್ ಗ್ಯಾರಂಟಿ. ಯುವರಾಜ್ ಸಿಂಗ್ ಇಷ್ಟನೇ ಓವರ್‌ನಲ್ಲಿ ಆರೂ ಚೆಂಡಿಗೆ ಸಿಕ್ಸರ್ ಹೊಡೆದಿದ್ದರಿಂದ ಇವತ್ತಿನ ಮ್ಯಾಚಲ್ಲಿ ಇಷ್ಟನೇ ಓವರನ್ನು ಇಂಥವನ ಬೌಲ್ ಮಾಡಿದರೆ ಇಂಥವನು ಇಷ್ಟನೇ ಬಾಲಿಗೆ ಸಿಕ್ಸರ್ ಗ್ಯಾರಂಟಿ. ಇಂಥಾ ಟೀಮೇ ಗೆಲ್ಲುತ್ತೆ ಎಂದು ನಾನು ಮೊದಲೇ ಹೇಳಿದ್ದೆ. ವಿಷ್ಣುವರ್ಧನ್ ಜನ್ಮದಿನಾಂಕ ಇಂಥದ್ದೇ ಆದ್ದರಿಂದ ಆ ದಿನಾಂಕದಲ್ಲಿ ಹುಟ್ಟಿರುವರ್‍ಯಾರಿಗೂ ಸಂತಾನಭಾಗ್ಯವಿಲ್ಲ. ಲಕ್ಷ್ಮಿ ಎಂದು ಯಾರ್‍ಯಾರು ಹೆಸರಿಟ್ಟುಕೊಳ್ಳುತ್ತಾರೋ ಅಂಥವರೆಲ್ಲರೂ ವಿಧವೆಯರಾಗ್ತಾರೆ. ಯಾರ ಹೆಸರಲ್ಲಿ ಎಷ್ಟೆಷ್ಟು ಸಂಖ್ಯೆಯಿದೆಯೋ ಆ ಸಂಖ್ಯೆಯ ಮೇಲೆ ಹೆಂಡತಿಯನ್ನು ಯಾರೋ ಪಟಾಯಿಸುತ್ತಾರೆಂದೋ ಅಥವಾ ಗಂಡ ಇನ್ನಾರೋ ಹೆಂಗಸಿನ ಬೆನ್ನು ಸುತ್ತುತ್ತಾನೆಂದೋ, ಇಂಥಾ ಡೇಟಲ್ಲಿ ಹುಟ್ಟಿದ ಮಕ್ಕಳಿಗೆ ಆಕ್ಸಿಡೆಂಟ್ ಗ್ಯಾರಂಟಿ, ಇಂಥಾ ಮಕ್ಕಳ ಹೆಸರಲ್ಲಿ ಇಷ್ಟು ಸಂಖ್ಯೆಯಿದ್ದರೆ ಎಸ್ಸೆಲ್ಸಿ ಫೇಲಾಗುತ್ತಾರೆ, ಜಾತಕದಲ್ಲಿ ಇಂತಿಂಥಾ ಸಂಖ್ಯೆಯಿದ್ದರೆ ಓದಿದ್ದು ತಲೆ ಹತ್ತಲ್ಲ- ಹೀಗೆ ಸಂಖ್ಯಾ ಭೀತಿಯಲ್ಲೇ ಸಮೂಹ ಸನ್ನಿಯನ್ನೂ ಸಾಮಾಜಿಕ ಭಯೋತ್ಪಾದನೆಯನ್ನೂ ಒಟ್ಟೊಟ್ಟಿಗೆ ಸಾಧಿಸುತ್ತಾ ಬಂದವನು ವಂಚಕ ಆರ್ಯವರ್ಧನ್.

ಕೇವಲ ಮೂರೇ ವರ್ಷದಲ್ಲಿ ಯಾಪಾಟಿ ಕುಬೇರನಾದನೆಂದರೆ ರಾಜರಾಜಶ್ವರಿನಗರದಲ್ಲೊಂದು ಬಂಗಲೆ, ಗವಿಪುರಂ ಗುಟ್ಟಹಳ್ಳಿಯಲ್ಲೊಂದು ಮನೆ, ಮೈಸೂರಿನಲ್ಲೊಂದು ಸೈಟು, ಓಡಾಡಲು ಮೂರು ಕಾರು, ಜಯನಗರದ ತನ್ನ ಪ್ರೇಯಸಿಯೊಬ್ಬಳಿಗೆ ಸ್ವಂತಕ್ಕೆ ಮನೆ ಇಷ್ಟೆಲ್ಲವನ್ನೂ ಸಂಪಾದಿಸಿಬಿಟ್ಟ. ಹಡಬೆ ದುಡ್ಡು, ಮುಗ್ಧ ಹೆಂಗಸರು, ಅವರು ಕೊಡಿಟ್ಟ ಸಂಪತ್ತು, ಬುಟ್ಟಿಗೆ ಬಿದ್ದ ಅಮಾಯಕರು, ಅವರ ನಿಟ್ಟುಸಿರು, ಎಲ್ಲದರ ಫಲವೆಂಬಂತೆ ಅವಿವಾಹಿತ ಯುವತಿಯರನ್ನೇ ತನ್ನ ಅಡ್ಡೆ ತುಂಬ ಜಮಾಯಿಸಿಕೊಂಡ. ಹೀಗೆ ಆರ್ಯವರ್ಧನ್ ಸಂಖ್ಯಾವಂಚಕ ಅಡ್ಡೆಗೆ ಸೇರಿಕೊಂಡು ತಮ್ಮೆಲ್ಲಾ ಅದೃಷ್ಟವನ್ನೂ ಕಳೆಕೊಂಡು ಬೀದಿಪಾಲಾದ ಯುವತಿಯರ ಕಣ್ಣೀರ ಕತೆಗಳೇ ಪ್ರತ್ಯೇಕ ಪುಸ್ತಕಕ್ಕಾಗುವಷ್ಟಿದೆ. ಆ ಸಾಲಿಗೆ ಲೇಟೆಸ್ಟ್ ಎಂಟ್ರಿಯಂತಿದ್ದವಳು ಆಂಧ್ರದ ರಾಜೇಶ್ವರಿ (ಹೆಸರು ಬದಲಿಸಿದೆ). ಆಕೆ ಕೂಡ ಈತನ ಟೀವಿ ಪ್ರೋಗ್ರಾಂ ನೋಡಿಯೇ ಬಲೆಗೆ ಬಿದ್ದವಳು.

ಆರ್ಯವರ್ಧನ್ ಆಕೆಯನ್ನು ನಂಬಿಸಿದ ರೀತಿ, ದೋಚಿದ ಕ್ರೌರ್ಯ, ಆಕೆ ಪಟ್ಟ ಅವಮಾನ ಎಲ್ಲವನ್ನೂ ಪಟ್ಟಿ ಮಾಡುತ್ತಾಹೋದರೆ ಅದೇ ಮೆಗಾ ಧಾರಾವಾಹಿಯಾಗುವಷ್ಟಿದೆ. ಬೇರೆ ಯಾವುದೇ ದಾರಿ ಕಾಣದೆ ಆಕೆ ರಾಜರಾಜೇಶ್ವರಿನಗರದ ಇನ್ಸ್‌ಪೆಕ್ಟರ್ ಶಿವಾರೆಡ್ಡಿಯವರನ್ನು ಕಂಡು ಎದೆ ಬಡಿದುಕೊಂಡು ಕಣ್ಣೀರಿಟ್ಟಿದ್ದಾಳೆ. ಆರ್ಯವರ್ಧನ್ ವಿರುದ್ಧ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಯತ್ನ, ಮಹಿಳೆಯ ಮಾನಭಂಗ, ವಂಚನೆ, ಕೊಲೆ ಬೆದರಿಕೆ ಇತ್ಯಾದಿ ಅರ್ಧ ಡಜನ್ ಕೇಸುಗಳು ದಾಖಲಾಗಿವೆ. ಏನೇ ಮೆರೆದರೂ ಒಂದಲ್ಲ ಒಂದು ದಿನ ನೀರು ಕುಡಿಯಲೇಬೇಕಲ್ಲ, ಪಾಪದ ಕೊಡ ತುಂಬಿ ಬಂದಿದೆ. ಅರ್ಧ ಡಜನ್ ಕೇಡುಗಾಲ ಆತನ ಸಂಖ್ಯಾಜ್ಞಾನದ ಹಂಗೇ ಇಲ್ಲದೆ ವಕ್ಕರಿಸಿದೆ.

■ ರಾ. ಸೋಮನಾಥ್

---


10 ◀◀

...ಆದಷ್ಟು ಬೇಗ ಅದನ್ನು ಬಿಡುಗಡೆ ಮಾಡ್ತೀನಿ ... ಬಾಂಬ್ ಸಿಡಿಸಿದ್ದ. ಆ ಮೂಲಕ ಮೇಟಜ್ಜ ... ಕಾಮುಕ ಮುದುಕನನ್ನು ಹಿಡಿಯಲು ಸುಭಾಷ್, ...ಲಕ್ಷ್ಮಿಯಂತಹ ಚಾಲಾಕಿ ಕಳ್ಳರು ನಡೆಸಿದ್ದ ಕತ್ತಲ ...ವೊಂದು ಹಗರಣವಾಗಿ ಮೇಟಜ್ಜನ ಕುತ್ತಿಗೆಗೆ ...ಕೊಂಡಿದೆ.

ಮೇಟಿಯ 'ಕಾಮೇಷ್ಠಿ' ಯಾಗ

ಮೇಟಿ ಹುಟ್ಟಾ ಲಂಪಟನಷ್ಟೇ ಅಲ್ಲ, ಪಕ್ಕಾ ಕಚ್ಚೆ... ...ನೂ ಹೌದು. ಅಕ್ಕಿ ಮೇಲೆ ಇಷ್ಟ, ನೆಂಟರ ಮೇಲೆ ... ಅನ್ನೋ ಜಾಯಮಾನದ ಈ ಮುದಿ ಕುದುರೆಗೆ ... ಸುಖವೂ ಬೇಕು, ಕಾಸೂ ಖರ್ಚಾಗಬಾರದು. ... ಒಳಗೊಳಗೇ ಉಂಡೇಳಬೇಕು. ಅದಕ್ಕೋಸ್ಕರವೇ ...ವಾಡಿ ಕಾರ್ಯಕರ್ತೆಯರು, ಪ್ರೈಮರಿ ಸ್ಕೂಲ್ ...ಗಳು, ನರ್ಸ್‌ಗಳು ಹೀಗೆ ಅಸಹಾಯಕ ಹೆಂಗಸರನ್ನೇ ... ಹಾಸಿಕ್ಕೆ ಬಳಸಿಕೊಳ್ಳುತ್ತಾ ಬಂದಿದ್ದಾನೆ. ಯಾಕೆಂದರೆ ಇವರ ಬೇಡಿಕೆ ಚಿಕ್ಕವು ಮತ್ತು ಮುಂದೆ ತನಗೆ ಕಂಟಕವಾಗುವ ಧೈರ್ಯ ತೋರಲಾರರು ಎಂಬುದು ಅವನ ಲೆಕ್ಕಾಚಾರ. ಸಾವಿರಾರು ರೂಪಾಯಿಯಲ್ಲಿ ಕೆಲಸ ಮುಗಿಯುತ್ತೆ ಅನ್ನೋ ಪ್ಲಾನು!

ರಾಜಕೀಯ, ಮಂತ್ರಿಗಿರಿ ಅಂದರೆ ವಸೂಲಿ ಲೈಸನ್ಸ್ ಅಂತ ತಿಳಿದಿರುವ ಈ ಮುದಿ ಹೋರಿ ಆಸ್ತಿ ಮಾಡಿದ್ದಕ್ಕಿಂತ ಹೆಚ್ಚಾಗಿ ದುಡ್ಡು, ಬಂಗಾರ ಮಾಡಿದ್ದೇ ಜಾಸ್ತಿ. ತಾನೊಬ್ಬನೇ ತಿಂದರೆ ಸಾಲದೂ ಎಂಬಂತೆ ಇಡೀ ಕುಟುಂಬವನ್ನೇ ರಾಜಕಾರಣದ ಮೂಲಕ ವಸೂಲಿ ದಂಧೆಗಿಳಿಸಿದ್ದಾನೆ. ಬಾಗಲಕೋಟೆಯಲ್ಲಿ ವಸೂಲಿ ದಂಧೆ ನಡೆಸುತ್ತಿರುವುದೇ ಇವನ ಮಗಳು, ಜಿಲ್ಲಾ ಪಂಚಾಯ್ತಿ ಸದಸ್ಯೆ ಬಾಯಕ್ಕ. ಇನ್ನು ರೋಸ್ಟರ್ ಪದ್ಧತಿ ಇಲ್ಲದಿದ್ದರೂ ಅಳಿಯ ಡಾಕ್ಟರ್ ರಾಜಕುಮಾರ್‌ನನ್ನು ಜಿಲ್ಲಾ ಆರೋಗ್ಯ ಅಧಿಕಾರಿ ಅಂತ ನೇಮಿಸಿದ್ದಾನೆ. ಅದೇರೀತಿ ಮಗ ಮಲ್ಲ ಕ್ಲಾಸ್-1 ಕಂಟ್ರಾಕ್ಟರ್. ಸಾಲದ್ದಕ್ಕೆ ಸ್ವತಃ ಮೇಟಜ್ಜನೇ ಅಪೆಕ್ಸ್ ಮತ್ತು ಡಿಸಿಸಿ ಬ್ಯಾಂಕ್ ಸದಸ್ಯ. ತಾನು ಸಿದ್ದರಾಮಯ್ಯನ ಕುಲಬಾಂಧವ, ಅವರ ಆಪ್ತ ಅಂತ ಹೇಳಿಕೊಳ್ಳುತ್ತಲೇ ಬೇರೆ ಕಾರ್ಯಕರ್ತರಿಗೂ ಅವಕಾಶಕೊಡದೆ ಕೊಬ್ಬಿದ ಈ ಮುದಿ ಕಾಮುಕ ಹೋರಿ ಕಂಡರೆ ಸ್ವತಃ ಕಾಂಗ್ರೆಸ್ ಕಾರ್ಯಕರ್ತರಿಗೇ ಆಗಿಬರುವುದಿಲ್ಲ.



ಮೇಟಜ್ಜನ ದೌರ್ಬಲ್ಯ ತಿಳಿದ ಅನೇಕ ಅಧಿಕಾರಿಗಳು, ಕಾರ್ಯಕರ್ತರು ಹೆಂಗಸರನ್ನು ಸಪ್ಲಾಯ್ ಮಾಡಿ ಅನೇಕ ಹುದ್ದೆಗಳನ್ನು ಅಲಂಕರಿಸಿಕೊಂಡದ್ದು ಉಂಟು. ಅಜ್ಜನ ಹಾಸಿಗೆ ಆರ್ಭಟ ಕೇವಲ ದೇಸಿ ತಳಿಗೆ ಮಾತ್ರ ಸೀಮಿತವಾದುದಲ್ಲ. ಆಗಾಗ್ಗೆ ವಿಮಾನ ಹಾರಿ ವಿದೇಶಕ್ಕೆ ಹೋಗಿಬರುತ್ತಿದ್ದುದು ಯಾಕೆ ಅಂತ ಈಗ ಗೊತ್ತಾಗುತ್ತಿದೆ. ವಯಾಗ್ರ ತಿಂದರೆ ಸೈಡ್‌ಎಫೆಕ್ಟ್ ಜಾಸ್ತಿ ಅನ್ನೋ ಕಾರಣಕ್ಕೆ 'ಅಜವಾ ಖಜುರ' ಅನ್ನೋ ಪುರುಷತ್ವ ಪರಿಸುವ ಹಣ್ಣು ತಿನ್ನಲು ಮೇಟಜ್ಜ ಗಲ್ಫ್ ಕಂಟ್ರಿಗಳಿಗೆ ಹೋಗಿಬರುತ್ತಿದ್ದ. ಅಂದಹಾಗೆ, ಈ ಹಣ್ಣು ಪ್ರತಿ ಕೆಜಿಗೆ 4-6 ಸಾವಿರ ರೂಪಾಯಿಯಂತೆ. ಆ ಕಾಸನ್ನೂ ಅಜ್ಜ ತನ್ನ ಜೇಬಿಂದ ತೆಗೆದುಕೊಟ್ಟಿರಲ್ಲ ಅನ್ನೋದನ್ನು ಬಿಡಿಸಿಹೇಳುವ ಅಗತ್ಯವಿಲ್ಲ ಬಿಡಿ. ನಾಲ್ಕಾರು ಬಾರಿ ಶ್ರೀಲಂಕಾಕ್ಕೆ ಹೋಗಿದ್ದು ಏಕೆ? ಮಲೇಶಿಯಾ ವಾಸ್ತವ್ಯ ಮಾಡಿದ್ದು ಇದಕ್ಕೇನಾ ಎನ್ನುವ ಪ್ರಶ್ನೆಗಳು ಈಗ ಸಹಜವಾಗಿಯೇ ಉದ್ಭವಿಸುತ್ತವೆ. ಅಂದಹಾಗೆ, ಈ ಹಿಂದೆ ಗುಳೇದಗುಡ್ಡ ಮತಕ್ಷೇತ್ರದ ಶಾಸಕನಾಗಿದ್ದಾಗಲೇ ಮೇಟಜ್ಜ ಒಬ್ಬಳನ್ನು ಹರಿದು ಮುಕ್ಕಿದ್ದ. ಆಮೇಲೆ ಆಕೆ ಈ ಕಡೆ ತಲೆಹಾಕಲೇ ಇಲ್ಲ.

ಸಿಎಂ ಸಿದ್ದರಾಮಯ್ಯನದು ಅದೇನು ಗ್ರಹಚಾರವೋ, ಏನು ಕತೆಯೋ. 'ಭಾಗ್ಯ'ಗಳ ಸರಮಾಲೆಯನ್ನೇ ತಂದುಸುರಿದು ಜನೋಪಕಾರಿ ಕೆಲಸ ಮಾಡಿದರೂ ಅವರ ಸರ್ಕಾರ ದುಷ್ಟಟ್ಟಾಗಿರುವ ಸಾಧನೆಗಿಂತ ಇಂಥಾ ಒಷ್ಟೊಷ್ಟು ವೇದನೆಗಳಲ್ಲೇ ಚರ್ಚೆಗೆ ಬರುತ್ತಿದೆ. ಇರಲಿ ಅಂತ ಒಬ್ಬೊಬ್ಬ ಕುಲಬಾಂಧವನನ್ನು ಆರಿದುತೂಗಿ ಸಂಪುಟಕ್ಕೆ ಸೇರಿಸಿಕೊಂಡರೆ ಆ ಮುದಿ ಹೋರಿಯಿಂದಲೇ ಇಂಥಾ ಇಕ್ಕಟ್ಟು!

■ ಮೋಹರಾಜ್

02 ಹೇಮರೆಡ್ಡಿ ಮಲ್ಲಮ್ಮ

ಹೀಗೆ ಇಷ್ಟೆಲ್ಲ ಮಾಡಿಯೂ ಬೈಗುಳ ತಿನ್ನುತ್ತಲೇ ಅವಳು ಆದರ್ಶಪ್ರಾಯವಾಗಿ ಬದುಕಿ ತೋರಿಸಿದಳು.

ಸತತವಾಗಿ ಕೆಲಸ ಮಾಡಿದ ನಂತರವೂ ರಾತ್ರಿ ಮಲಗುವ ಮುಂಚೆ ದೊಡ್ಡ ಮನೆತನಕ್ಕೆ ಸಾಕಾಗುವಷ್ಟು ಜೋಳವನ್ನು ಬೀಸಿಯೇ ಮಲಗಬೇಕು. ಅವಳ ಒಳಗಿನ ಶಕ್ತಿರೂಪವಾದ ಶ್ರೀಶೈಲ ಮಲ್ಲಿಕಾರ್ಜುನನೇ ಈ ಕೆಲಸ ಮಾಡುತ್ತಿದ್ದಾನೆ ಎಂಬುದು ಅವಳ ನಂಬಿಕೆಯಾಗಿತ್ತು. ದೇವರೇ ತನ್ನ ಕೆಲಸ ಮಾಡುತ್ತಿದ್ದಾನೆ ಎಂದು ಅವಳು ನೊಂದುಕೊಳ್ಳುತ್ತಿದ್ದಳು. ಅವಳದು ಅವಿಶ್ರಾಂತ ಜೀವನ. ಎಂದೂ ವಿಶ್ರಾಂತಿಯನ್ನು ಬಯಸದ ಜೀವನ.

ಮಲ್ಲಮ್ಮನ ಸ್ಥಿತಿಯನ್ನು ಕಂಡು ಮಾವ ಗಿರಿರೆಡ್ಡಿ ಮರುಗಿದ. ಆಗ ಅತ್ತೆ ಪದ್ಮಾವತಿ ಸಿಡಿಮಿಡಿಗೊಂಡಳು. ಮಲ್ಲಮ್ಮ ಮಾಡುವ ಕೆಲಸ ನಿಮಗೆ ಹಿಡಿಸಿದೆ ಎಂದರೆ ನಿಮ್ಮ ತಲೆ ಕೆಟ್ಟಿರಬಹುದು ಎಂದು ಪತಿಗೂ ಅವಮಾನ ಮಾಡಿದಳು. ಮಲ್ಲಮ್ಮನ ಮೇಲೆ ಹಾದರದ ಆರೋಪವನ್ನೂ ಹೊರಿಸಿದಳು! ಇತರ ಇಬ್ಬರು ಸೊಸೆಯರ ಜೊತೆ ಸೇರಿ ಮಲ್ಲಮ್ಮನಿಗೆ ಹೊಡೆದು ಮನೆಯಿಂದ ಹೊರ ದಬ್ಬಿದರು. ಗಂಡ ಭರಮರೆಡ್ಡಿಯ ಎದುರೇ ವ್ಯಭಿಚಾರದ ಆರೋಪ ಹೊರಿಸಿದರೂ ಸಾಧ್ವಿ ಮಲ್ಲಮ್ಮ ಶಾಂತಳಾಗೇ ಇದ್ದಳು. ಹೊಲದಲ್ಲಿನ ದನದ ಕೊಟ್ಟಿಗೆಯಲ್ಲೇ ಉಳಿದು ಕಾಯಕನಿರತಳಾದಳು.

ಇತ್ತ ಹೇಮರೆಡ್ಡಿ ಮನೆತನ ದಿನೇದಿನೇ ಅವನತಿಯ ಹಾದಿ ಹಿಡಿಯಿತು. ಕೊನೆ ಕೊನೆಗೆ ಎಲ್ಲ ಆಸ್ತಿಪಾಸ್ತಿ ಮಾರಾಟವಾಗುತ್ತ ಬಡತನ ಆವರಿಸಿತು. ಮಲ್ಲಮ್ಮನ ಅತ್ತೆ ಮತ್ತು ನೆಗೆಣ್ಣಿಯರು ರೋಗಗ್ರಸ್ತರಾದರು. ಪತ್ನಿ ಮತ್ತು ಇಬ್ಬರು ಸೊಸೆಯರ ದುಷ್ಟ ನಡವಳಿಕೆಯಿಂದಲೇ ಈ ದುರಂತ ಸ್ಥಿತಿ ಬಂದೊದಗಿದೆ ಎಂಬುದನ್ನು ಮನಗಂಡ ಪತಿ ಗಿರಿರೆಡ್ಡಿ ಅವರನ್ನು ಬಿಟ್ಟು ಮಲ್ಲಮ್ಮನ ಹಟ್ಟಿಗೆ ಬಂದು ವಾಸಿಸತೊಡಗಿದನು. ಮಲ್ಲಮ್ಮನ ಪತಿ ಬಹಳೇ ಸಂಭಾವಿತನಾಗಿದ್ದರಿಂದ ತಿಳಿದೂ ತಿಳಿಯದವರಂತೆ ಸುಮ್ಮನಿರುತ್ತಿದ್ದನು. ಕೊನೆಗೂ ಆತನೂ ಈ ಹೆಣ್ಣುಮಕ್ಕಳ ಕ್ರೌರ್ಯದ ಬಗ್ಗೆ ಹೇಸಿಕೊಂಡನು.

ಮನೆಯ ಪರಿಸ್ಥಿತಿ ತೀರ ಹದಗೆಟ್ಟಿದ್ದನ್ನು ನೋಡಲಿಕ್ಕಾಗದೆ ಮಲ್ಲಮ್ಮ ಮನೆಗೆ ಬಂದು ರೋಗಿಪೀಡಿತರಿಗೆಲ್ಲ ಶ್ರದ್ಧೆಯಿಂದ ಉಪಚರಿಸಿದಳು. ಶ್ರೀಶೈಲ ಮಲ್ಲಯ್ಯ ಎಲ್ಲರನ್ನು ಗುಣಪಡಿಸುವನು ಎಂಬ ಆತ್ಮವಿಶ್ವಾಸ ಅವಳದಾಗಿತ್ತು. ಕೊನೆಗೂ ಅವರೆಲ್ಲ ಗುಣಮುಖರಾದರು. ಅವರಿಗೆ ತಾವು ಮಾಡಿದ ತಪ್ಪಿನ ಅರಿವಾಯಿತು. ಮಲ್ಲಮ್ಮನನ್ನು ಕೊಂಡಾಡತೊಡಗಿದರು. ಮನೆಯ ಪರಿಸ್ಥಿತಿಯೂ ಸುಧಾರಿಸಿತು.

ಹೇಮರೆಡ್ಡಿ ಮನೆತನದಲ್ಲಿ ಮತ್ತೆ ನೆಮ್ಮದಿ ನೆಲಸಿತು. ಆದರೆ ಗಿರಿರೆಡ್ಡಿಯವರ ಕಿರಿಯ ಮಗ ವೇಮನರೆಡ್ಡಿ ಸ್ವೇಚ್ಛಾಚಾರಕ್ಕೆ ಬಲಿಯಾಗಿದ್ದ. ಚಿತ್ತರಂಜಿನಿ ಎಂಬ ವೇಶ್ಯೆಯ ಮನೆಯಲ್ಲೇ ವಾಸಿಸುತಿದ್ದ ಮನೆಯ ಸಂಪತ್ತು ಚಿತ್ತರಂಜಿನಿಯ ಪಾಲಾಗುತ್ತಲೇ ಇತ್ತು.

ಒಂದು ದಿನ ಆಕಸ್ಮಿಕವಾಗಿ ಎದುರಾದ ಮಲ್ಲಮ್ಮನ ಮೂಗುತಿಯ ಮೇಲೆ ಚಿತ್ತರಂಜಿನಿಯ ಕಣ್ಣು ಬಿದ್ದಿತು. ಅದರ ವಜ್ರದ ಹೊಳಪು ಅವಳನ್ನು ಆಕರ್ಷಿಸಿತು. ಮನೆಗೆ ಹೋದವಳೇ ಆ ಮೂಗುತಿ ತನಗೆ ಬೇಕೆಂದು ವೇಮನರೆಡ್ಡಿಗೆ ಒತ್ತಾಯಿಸತೊಡಗಿದಳು. ಅವಳ ಪ್ರೇಮಪಾಶದಲ್ಲಿ ಸಿಕ್ಕಬಿದ್ದಿದ್ದ ವೇಮನನಿಗೆ ಬೇರೆ ದಾರಿ ಇರಲಿಲ್ಲ, ಅತ್ತಿಗೆ ಮಲ್ಲಮ್ಮನ ಬಳಿ ಬಂದು ಚಿತ್ತರಂಜಿನಿಗಾಗಿ ಮೂಗುತಿಯನ್ನು ಕೇಳಿದ. ಮಲ್ಲಮ್ಮ ಒಂದು ಷರತ್ತಿನ ಮೇಲೆ ಮೂಗುತಿಯನ್ನು ಕೊಟ್ಟಳು. 'ಈ ಮೂಗುತಿಯನ್ನು ಪಡೆಯುವ ಮೊದಲು ಚಿತ್ತರಂಜಿನಿ ಬೆಳಕಿನಲ್ಲಿ ಬೆತ್ತಲೆಯಾಗಿ ನಿನ್ನ ಮಂಚಕ್ಕೆ ಮೂರುಸುತ್ತು ಪ್ರದಕ್ಷಿಣೆ ಹಾಕಬೇಕು' ಎಂಬುದೇ ಆ ಷರತ್ತು.

ಮೂಗುತಿ ಪಡೆಯುವುದಕ್ಕಾಗಿ ಚಿತ್ತರಂಜಿನಿ ಸಂತೋಷದಿಂದ ಹಾಗೇ ಮಾಡಿದಳು. ಆ ಸಂದರ್ಭದಲ್ಲಿ ಮೂಳೆ ಮಾಂಸದ ತಡಿಕೆಯಾದ ದೇಹವನು ಸಂಪೂರ್ಣವಾಗಿ ನೋಡಿದ ವೇಮನರೆಡ್ಡಿಯ ಮನಸ್ಸಿನಲ್ಲಿ ಹೇಸಿಕೆ ಹುಟ್ಟಿತು. ಬದುಕು ಇಷ್ಟೇಯೆ ಎನಿಸಿತು. ನಿಜದ ಸಾಕ್ಷಾತ್ಕಾರವಾಯಿತು: ಚಿತ್ತರಂಜಿನಿಗೆ ಅತ್ತೆಯ ಮೂಗುತಿ ಕೊಟ್ಟು ಹೊರನಡೆದ ವೇಮನರೆಡ್ಡಿ ಮತ್ತೆ ಎಂದೂ ಆಕೆಯ ಮನೆಯ ಕಡೆಗೆ ಸುಳಿಯಲಿಲ್ಲ.

ಮೂಗುತಿಯನ್ನು ಧರಿಸಿದ ಚಿತ್ತರಂಜಿನಿ ಕನ್ನಡಿಯಲ್ಲಿ ಮುಖವನ್ನು ನೋಡಿದಾಗ ಮುತ್ತೈದೆಯಂತೆ ಕಾಣತೊಡಗಿದಳು. ತನ್ನ ಬದುಕುವ ರೀತಿ ಹೀನವಾಗಿ ಕಾಣತೊಡಗಿತು. ಅವಳ ಮನ ಪರಿವರ್ತನೆಯಾಯಿತು. ಹಣ ಪಡೆದು ಮೈಕೂಲಿ ಮಾಡುವ ವೇಶ್ಯೆಗೆ ಪಣ್ಯಾಂಗನೆ ಎನ್ನುತ್ತಾರೆ. ಸಾತ್ವಿಕವಾಗಿ ಬದುಕುವ ಹೆಣ್ಣುಮಕ್ಕಳಿಗೆ ಪುಣ್ಯಾಂಗನೆ ಎನ್ನುತ್ತಾರೆ. ತಾನು ದೇಹ ಮಾರಿಕೊಳ್ಳುವ ಪಣ್ಯಾಂಗನೆಯಾಗದೆ ಕೈಕೂಲಿ ಮಾಡುತ್ತ ಮರ್ಯಾದೆಯಿಂದ ಬದುಕುವ ಪುಣ್ಯಾಂಗನೆಯಾಗುವ ನಿರ್ಧಾರ ಕೈಗೊಳ್ಳುತ್ತಾಳೆ. ಮಲ್ಲಮ್ಮನ ಮುತ್ತೈದೆತನದ ಸಂಕೇತವಾದ ಆ ಮೂಗುತಿಯನ್ನು ಮಲ್ಲಮ್ಮನಿಗೆ ಮರಳಿಸುತ್ತಾಳೆ. ಇತ್ತ ವೇಮನ ಯೋಗಿಯಾಗಿ ಸರ್ವಜ್ಞನ ಹಾಗೆ ಶ್ರೇಷ್ಠ ಕವಿಯಾಗುತ್ತಾನೆ.

ಹೀಗೆ ಮಲ್ಲಮ್ಮ ಪರಿವರ್ತನೆಯ ದೇವತೆಯಾಗಿ ನಮ್ಮ ಮನದಲ್ಲಿ ಮೂಡುತ್ತಾಳೆ. ಸತ್ಯ ಮತ್ತು ಸಾತ್ವಿಕತೆಯ ಮುಂದೆ ಎಲ್ಲ ಅನಿಷ್ಟ ಶಕ್ತಿಗಳು ದುರ್ಬಲಗೊಂಡು ಸಾತ್ವಿಕತೆಯ



ದಾರಿಯಲ್ಲೇ ಮುನ್ನಡೆಯಬೇಕಾಗುವುದು ಎಂಬುದರ ಬಗ್ಗೆ ಮಲ್ಲಮ್ಮನಿಗೆ ಅಚಲವಾದ ನಂಬಿಕೆ ಇತ್ತು. ಬಸವಣ್ಣನವರ ಈ ಕ್ರಾಂತಿಕಾರಿ ಗುಣ ಹೇಮರೆಡ್ಡಿ ಮಲ್ಲಮ್ಮನಲ್ಲಿ ಸಹಜಸ್ಥಿತಿಯಲ್ಲಿತ್ತು. ಬಸವಣ್ಣನವರು ಇಷ್ಟಲಿಂಗ ತತ್ತ್ವದ ಮೂಲಕ ಎಂಥವರೂ ಬದಲಾವಣೆ ಹೊಂದುತ್ತಾರೆ ಎಂಬುದರಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟಿದ್ದರು. ಎಡದ ಕೈಯಲ್ಲಿ ಕತ್ತಿ ಬಲದ ಕೈಯಲ್ಲಿ ಮಾಂಸ ಬಾಯಲ್ಲಿ ಸುರೆಯ ಗಡಿಗೆ ಇದ್ದರೂ ಕೊರಳಲ್ಲಿ ಇಷ್ಟಲಿಂಗ ಇರುವವರನ್ನು ಕೂಡಲಸಂಗಮ ಎಂದು ಕರೆಯುವುದಾಗಿ ಬಸವಣ್ಣನವರು ಘೋಷಿಸಿದ್ದರು. ಇಷ್ಟಲಿಂಗದ ಪರಿಸರಕ್ಕೆ ಬಂದ ಎಂಥ ಹೀನವ್ಯಕ್ತಿ ಕೂಡ ಒಳ್ಳೆಯವನಾಗ[...] ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿ[...] ಸುಳ್ಳರು ಮತ್ತು ವೇಶ್ಯೆಯರು ಕೂಡ ಇಷ್ಟಲಿಂ[...] ಶರಣರ ವ್ಯಕ್ತಿತ್ವ ಪಡೆದರು ಎಂಬುದಕ್ಕೆ [...] ಸಾಕ್ಷಿಯಾಗಿದೆ. ಬಸವಣ್ಣನವರ ತತ್ತ್[...] ಪರಿವರ್ತನೆಗೊಂಡು ಕಲ್ಯಾಣದ ನೂರಾರು ಪಣ್ಯಾಂ[...] ಪುಣ್ಯಾಂಗನೆಯರಾದರು. ಅದೇರೀತಿ ಪ[...] ಚಿತ್ತರಂಜಿನಿಯನ್ನು ಹೇಮರೆಡ್ಡಿ ಮ[...] ಪುಣ್ಯಾಂಗನೆಯಾಗಿ ಮಾಡಿದಳು. ಪ[...] ವೇಮನರೆಡ್ಡಿಯನ್ನು ವೇಮನಯೋಗಿಯಾಗಿ ಪರಿವ[...] ಹೀಗೆ ಕುಟುಂಬದಿಂದ ಹಿಡಿದು ಸಮಾಜದವ[...] ಪರಿವರ್ತನೆ ಮಾಡುವ ಶಕ್ತಿಯನ್ನು ಹೊಂದಿದ್ದ[...]

ಮುತ್ತೈದೆಯಾದ ಹೇಮರೆಡ್ಡಿ ಮಲ್ಲ[...] ಸೌಭಾಗ್ಯದ ಸಂಕೇತವಾದ ಮೂಗುತಿಯನ್ನು [...] ಕೊಡುವಂಥ ಪ್ರಸಂಗ ಭಾರತದ ಐದು [...] ವರ್ಷಗಳ ಇತಿಹಾಸದಲ್ಲೇ ಅನನ್ಯವಾ[...] ಬಸವಣ್ಣನವರಿಗೆ ಇಷ್ಟಲಿಂಗದ ಮಹಿಮೆ [...] ರೀತಿಯಲ್ಲೇ ಮಲ್ಲಮ್ಮನಿಗೆ ತನ್ನ ಮೂಗುತಿಯ [...] ಗೊತ್ತಿತ್ತು. ಆ ದೃಢವಿಶ್ವಾಸದಿಂದಲೆ [...] ಮೂಗುತಿಯನ್ನು ಕೊಡುವ ಕ್ರಾಂತಿಕಾರಿ ನಿರ್ಧಾ[...] ಕೈಗೊಂಡಿದ್ದಳು. ತನ್ನ ಮೂಗುತಿ ಮುಟ್ಟಿದ ವೇ[...] ಮುತ್ತೈದೆಯ ವ್ಯಕ್ತಿತ್ವವನ್ನು ಹೊಂದುತ್ತಾಳೆ ಎಂ[...] ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿಕೊಟ್ಟಳ[...] ಮೂಗುತಿ ತನ್ನ ಬಿಟ್ಟು ಎಲ್ಲಿಯೂ ಹೋಗ[...] ಎಂಬುದರಲ್ಲಿ ಅವಳಿಗೆ ಅಚಲ ವಿಶ್ವಾಸವಿದ್ದುದ[...] ಆಕೆಗೆ ಈ ಕಠಿಣ ನಿರ್ಧಾರ ಸಾಧ್ಯವಾಯಿತು. [...] ದಿವ್ಯ ಜೀವಕಾರುಣ್ಯದಿಂದ ವಿಟಪುರುಷ ವೇ[...] ಯೋಗಿ ವೇಮನನಾದ.

ಹೀಗೆ ಹೇಮರೆಡ್ಡಿ ಮಲ್ಲಮ್ಮನ ವ್ಯಕ್ತಿತ್ವ ಕ[...] ಪ್ರಜ್ಞೆಯಿಂದ ಹೊರಟು ಇಡೀ ವಿಶ್ವವನ್ನೇ ವ್ಯಾಪಿ[...] ಅವಳ ಪ್ರಕಾರ ರೆಡ್ಡಿ ಕುಲ ಶ್ರೀಮಂತವಾಗುವುದು [...] ಮಸ್ತಿ ಮಾಡುವುದಕ್ಕಾಗಿ ಅಲ್ಲ, ಕೌಟುಂಬಿಕ [...] ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸುವು[...] ಹೇಮರೆಡ್ಡಿ ಮಲ್ಲಮ್ಮ ಶ್ರೀಶೈಲ ಮಲ್ಲಿಕಾರ್ಜು[...] ಕೊಡಿಸಿದ ಶ್ರೀಮಂತಿಕೆಯನ್ನು ರೆಡ್ಡಿ ಜ[...] ಧರ್ಮದರ್ಶಿಗಳಂತೆ ಸ್ವೀಕರಿಸಬೇಕು. ಆ ಸ[...] ಲೋಕಕಲ್ಯಾಣಕ್ಕಾಗಿ ಬಳಸಬೇಕು. ಆ ಮೂಲಕ ಹೇ[...] ಮಲ್ಲಮ್ಮನಿಗೆ ಗೌರವ ಸಲ್ಲಿಸಬೇಕು.


■ ರಂಜಾನ್ ದ[...]

ಜಾಣ ಮರೆವು-ಕಿವುಡು-ಕುರುಡು

ಜಾಣ ಮರೆವು ಇರುವಂತೆ ಜಾಣ ಕಿವುಡು ಮತ್ತು ಜಾಣ ಕುರುಡು ಸಹ ಇದೆ ಎಂಬುದಕ್ಕೆ ಮೋದಿ ಭಕ್ತರೇ ಸಾಕ್ಷಿ. ಮೋದಿ ಮಾಡಿರುವ ಘೋರ ಪ್ರಮಾದಗಳನ್ನು ಸಮರ್ಥಿಸುವ ಭರದಲ್ಲಿ ಮೋದಿ ಭಕ್ತರು ಹಿಂದಿನ ಪ್ರಧಾನಿ ಮನಮೋಹನ್ ಸಿಂಗ್ ಏನೂ ಮಾಡಲಿಲ್ಲ; ಅವರು ಕೇವಲ ಕೀಲು ಬೊಂಬೆಯಂತಿದ್ದರು ಎಂದು ಮೂರ್ಖವಾದ ಮಾಡುತ್ತಾರೆ. 2008 ರಲ್ಲಿ ಅಮೆರಿಕಾ ಸಹಿತ ಜಗತ್ತಿನ ಎಲ್ಲಾ ಮುಂದುವರಿದ ದೇಶಗಳು ಭೀಕರ ಆರ್ಥಿಕ ಹಿಂಜರಿತಕ್ಕೆ ತುತ್ತಾಗಿ ಎಲ್ಲೆಡೆ ಕೋಲಾಹಲವಾದರೂ ಭಾರತ ಮಾತ್ರ ಬಂಡೆಕಲ್ಲಿನಂತೆ ತೀವ್ರ ರಿಸ್ಸೆಷನ್ ಬಿರುಗಾಳಿ ಎದುರಿಸಿದ್ದು ಮನಮೋಹನ್ ಸಿಂಗ್ ಅವರಂತಹ ಚಾಣಾಕ್ಷ ಅರ್ಥಶಾಸ್ತ್ರಜ್ಞ ಆಗ ಪ್ರಧಾನಿ ಆಗಿದ್ದರಿಂದ. ಮೋದಿಯಂತಹ ಅರೆಸಾಕ್ಷರ ಆಗ ಪ್ರಧಾನಿಯಾಗಿದ್ದರೆ ಅವರು ಒಣ ಪ್ರಚಾರಕ್ಕಾಗಿ ಏನೋ ಮಾಡಲು ಹೋಗಿ ಇನ್ನೇನೋ ಮಾಡಿ ಭಾರತದ ಆರ್ಥಿಕತೆಯನ್ನು ಸಂಪೂರ್ಣ ಮುಳುಗಿಸುತ್ತಿದ್ದರು. ಮೋದಿ ಭಕ್ತರಿಗೆ ಈ ವಿಷಯ ಗೊತ್ತಿದೆ ಆದರೂ ಒಪ್ಪುತ್ತಿಲ್ಲ, ಇದಕ್ಕೇ ಅನ್ನುವುದು ಜಾಣ ಮರೆವು-ಕುರುಡು-ಕಿವುಡು ಎಂದು.

ತಮ್ಮವರ ಸಣ್ಣ ಸಾಧನೆಗಳನ್ನು ಭೂತ ಕನ್ನಡಿಯಲ್ಲಿ ತೋರಿಸಿ ಎದುರಾಳಿಗಳ ಸಾಧನೆಗಳನ್ನು ಬೇಕೆಂದೇ ಗೌಣವಾಗಿಸುವ ಕ್ಷುದ್ರ ಮನಸ್ಥಿತಿ ಸಂಘಿಗಳಲ್ಲಿ ಇದೆ. ಮೋದಿ ಜೋರಾಗಿ ಸೀನಿದರೂ ಅದನ್ನು "ಆಹಾ! ಎಂತಹ ಅದ್ಭುತ ಸೀನಯ್ಯನ ಸೀನು" ಎಂದು ವೈಭವೀಕರಿಸುವ ಇವರು ಬೇರೆಯವರ ದೊಡ್ಡ ದೊಡ್ಡ ಸಾಧನೆಗಳನ್ನು ಮಾತ್ರ ತುಚ್ಛೀಕರಿಸುತ್ತಾರೆ. ರಾತ್ರಿ ಒಂದು ಬೀದಿ ನಾಯಿ ಯಾವುದೋ ಕಾರಣಕ್ಕೆ ಜೋರಾಗಿ ಬೊಗಳಿದರೆ ಉಳಿದ ಎಲ್ಲಾ ಬೀದಿ ನಾಯಿಗಳೂ ಒಂದೊಂದಾಗಿ ದನಿಗೂಡಿಸಿ ಊಳಿಡಲು ತೊಡಗುತ್ತವೆ. ಮೊದಲ ನಾಯಿ ಯಾಕೆ ಬೊಗಳಿದ್ದೆಂದು ನಂತರದ ನಾಯಿಗಳಿಗೆ ಗೊತ್ತೇ ಇರುವುದಿಲ್ಲ, ಆದರೂ ಬೊಗಳುತ್ತವೆ. ಅದೇ ತರಹ ಮೋದಿ ಭಕ್ತರೂ ಹೊಗಳುತ್ತಾರೆ.

ಇನ್ನೊಂದು ಉತ್ತಮ ಉದಾಹರಣೆ ಎಂದರೆ ಜನರು ತಮ್ಮ ತಮ್ಮ ಮಕ್ಕಳ ಅಥವಾ ಮೊಮ್ಮಕ್ಕಳ ಗುಣಗಾನ



ಮಾಡುವುದು. ತಮ್ಮ ಮಕ್ಕಳು-ಮೊಮ್ಮಕ್ಕಳಲ್ಲಿ ಇರುವ ಅಥವಾ ಇರದಿರುವ ಎಲ್ಲಾ ಪ್ರತಿಭೆಗಳನ್ನು ಉತ್ಪ್ರೇಕ್ಷಿಸಿ ಅವರು ಮಾಡುತ್ತಾರೆ. ಈ ಸ್ವಭಾವ ನಗರ ಪ್ರದೇಶದ ಎಲ್ಲಾ ವಿದ್ಯಾವಂತ ಕುಟುಂಬಗಳಲ್ಲಿ ಕಂಡುಬರುತ್ತದೆ.

ಒಮ್ಮೆ ಒಂದು ಮಹಿಳಾ ಮಂಡಲ ಸಭೆಯಲ್ಲಿ ಎಲ್ಲಾ ಹೆಂಗಸರು ತಮ್ಮ ತಮ್ಮ ಮಕ್ಕಳ ಪ್ರತಿಭೆಗಳನ್ನು ಅಥವಾ ಮುಗ್ಧ-ತುಂಟತನವನ್ನು ವರ್ಣಿಸಲು ತೊಡಗಿದರಂತೆ. ಆದರೆ ಒಂದು ಹೆಂಗಸಿಗೆ ತನ್ನ ಆರು ವರ್ಷದ ಮಗುವಿನಲ್ಲಿ ಅಂತಹ ಯಾವುದೇ ವಿಶೇಷ ಪ್ರತಿಭೆ ಇರದಿರುವುದರಿಂದ ತನ್ನ ಮಗುವಿನ ಪ್ರತಿಭೆ ಹೇಗೆ ಹೊಗಳುವುದೆಂದು ಯೋಚನೆ ಆಗಿತ್ತಂತೆ. ಅವಳ ಮುಜುಗರ ಇನ್ನೂ ಹೆಚ್ಚು ಮಾಡಲು ಎಂಬಂತೆ ಆ ಮಗು ಸಭೆಯ ನಡುವೆ ಜೋರಾಗಿ ಹೂಸು ಬಿಟ್ಟಿತು. ತಕ್ಷಣ ಆ ಹೆಂಗಸು ತಾನು ಯಾರಿಗೂ ಕಮ್ಮಿ ಇಲ್ಲ ಎಂದು ತೋರಿಸಲು ಹೇಳಿದಳು: "ಓ ನೋಡಿ, ನನ್ನ ಮಗು ಎಷ್ಟು ಇಂಪಾದ ಸ್ವರದಲ್ಲಿ ಎಷ್ಟೊಂದು ಪರಿಮಳದ ಹೂಸು ಬಿಡುತ್ತದೆ!"

ಈಗ ಮೋದಿ ಭಕ್ತರೂ ಆ ಹೂಸುಬುರುಕ ಮಗುವಿನ ತಾಯಿಯಂತೆ ಆಗಿರುವರು. ಮೋದಿಯ ಭಗ್ಗೆ ಕಾಲ್ಪನಿಕ ಘಟನೆಗಳನ್ನು ಹೆಣೆದು ಹೊಗಳಿಕೆಯಲ್ಲಿ ಯಾವಾಗಲೂ ಮುಳುಗಿರುತ್ತಾರೆ. ಹಿಂದೆ ಎಷ್ಟೋ ಸಾರಿ ಸರ್ಜಿಕಲ್ ಸ್ಟ್ರೈಕ್ ಆಗಿದ್ದರೂ ಅದನ್ನು ಈ ಭಕ್ತರು ಕಡೆಗಣಿಸಿ ಮೊನ್ನೆ ನಡೆದ ಸರ್ಜಿಕಲ್ ಸ್ಟ್ರೈಕ್‌ಗೆ ಮಾತ್ರ ಭಾರಿ ಪ್ರಚಾರ ಕೊಟ್ಟು ಅದು ಕೇವಲ ಮೋದಿಯಿಂದ ಮಾತ್ರ ಸಾಧ್ಯವಾಗಿದ್ದು ಎನ್ನುತ್ತಿದ್ದಾರೆ. ಮೋದಿಯ ನೋಟು ರದ್ದತಿಯ ವಿಕ್ಷಿಪ್ತ ನಿರ್ಣಯದಿಂದ ದೇಶದ ಪ್ರತಿಯೊಬ್ಬ ನಾಗರಿಕನಿಗೂ ತೊಂದರೆ ಆಗಿದ್ದರೂ, ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬ ಗಿಳಿಪಾಠ ಭಕ್ತರು ಒಪ್ಪಿಸುತ್ತಿದ್ದಾರೆ. ಸ್ವತಃ ಇವರಿಗೇ ಗೊತ್ತಿಲ್ಲ ಯಾವ ರೀತಿಯಲ್ಲಿ ಜನರಿಗೆ ಒಳ್ಳೆಯದಾಗುತ್ತದೆ ಎಂದು.

ಮನಮೋಹನ್ ಸಿಂಗ್ ಅವರ ಜ್ಞಾನಕ್ಕೆ ಸ್ವತಃ ಅಮೆರಿಕದ ಅಧ್ಯಕ್ಷ ಒಬಾಮಾರೇ ಮಾರುಹೋ[...] ಜೀವನದಲ್ಲಿ ಅತಿ ಹೆಚ್ಚು ಪ್ರಭಾವ ಬೀರಿದ [...] ವ್ಯಕ್ತಿಗಳಲ್ಲಿ ಮನಮೋಹನ್ ಸಿಂಗ್ ಒಬ್ಬರು ಎಂ[...] ಡೈರಿಯಲ್ಲಿ ನಮೂದಿಸಿದ್ದಾರೆ. ಆದರೆ ಮೋದಿಯ[...] ಒಬಾಮಾ ಏನೂ ಬರೆದಿಲ್ಲ, ಆದರೂ ಇಡೀ [...] ಮೋದಿಯನ್ನು ಹೊಗಳುತ್ತಿದೆ ಎಂದು ಭಕ್ತರು [...] ಪ್ರಚಾರ ಮಾಡುತ್ತಿದ್ದಾರೆ. ಜಯಲಲಿತಾ ತೀರಿಕೊ[...] ಶಶಿಕಲಾ ಮುಖ್ಯಮಂತ್ರಿ ಆಗದಂತೆ ತಡೆದು [...] ಸೆಲ್ವಂರನ್ನು ಮುಖ್ಯಮಂತ್ರಿ ಮಾಡಿದ್ದು ತಮ್ಮ [...] ಎಂದು ಭಕ್ತರು ಹಸಿ ಸುಳ್ಳು ಹೇಳುತ್ತಿದ್ದಾರೆ.

ನಮ್ಮ ಪೌರಾಣಿಕ ದೇವರುಗಳು ಹುಟ್ಟಿದ್ದು[...] ಎಂದು ಇದರಿಂದ ಅಂದಾಜು ಮಾಡಬಹುದು. ಹ[...] ಕಾಲದಲ್ಲಿ ಒಬ್ಬ ವ್ಯಕ್ತಿ ಏನೇನೋ ತಂತ್ರ ಕುತಂತ್ರ [...] ಅಧಿಕಾರ ಗಳಿಸಿ ರಾಜನಾಗುತ್ತಿದ್ದ; ನಂತರ ಎ[...] ಮಂದಿಮಗಧರು ಅವನ ಆಸ್ಥಾನ ಸೇರಿ ತಮ್ಮ ಹೊಟ್ಟೆ[...] ದಾರಿ ಮಾಡಿಕೊಳ್ಳುತ್ತಾರೆ. ಇವರೇ ರಾಜನನ್ನು ಮ[...] ಆ ರಾಜನ ಬಗ್ಗೆ ಕಾಲ್ಪನಿಕ ಶೌರ್ಯದ ಅಥವಾ ಪ[...] ಕತೆಗಳನ್ನು ಹೆಣೆದು ರಾಜನಿಂದ ಬಹುಮಾನ ಗಿ[...] ಕಾಲ್ಪನಿಕ ಕಥೆಗಳನ್ನು ಹಳ್ಳಿ ಹಳ್ಳಿ ತಿರುಗುವ [...] ದಾಸರ ಮೂಲಕ ಪ್ರಜೆಗಳಲ್ಲಿ ಹರಡಿಸುತ್ತಾರೆ. ಹಿ[...] ರಾಜನನ್ನು ದೈವತ್ವಕ್ಕೇರಿಸಿ ಕೊನೆಗೆ ಪ್ರಜೆಗಳ ಮ[...] ರಾಜನಿಗೆ ದೇವರ ಪಟ್ಟ ಕಟ್ಟಿ ಬಿಡುತ್ತಾರೆ. ನಂತ[...] ಕಾಲ್ಪನಿಕ ಕತೆಗಳೇ ರಾಮಾಯಣ, ಮಹಾಭ[...] ದಶಾವತಾರದ ಪುರಾಣ ಕತೆಗಳಾಗಿ ಮಾಪ[...] ತಲೆಮಾರಿನಿಂದ ತಲೆಮಾರಿಗೆ ಹೊಸ ಹೊಸ ಪವಾಡ[...] ಆ ಪುರಾಣ ಕಥೆಗಳಲ್ಲಿ ಸೇರಿಸುತ್ತಾ ಹೋಗಿ [...] ಅದು ಪವಿತ್ರ ಗ್ರಂಥವಾಗಿ ಒಬ್ಬ ಸಾಧಾರಣ ವ[...] ದೇವರ ಅವತಾರ ಎನಿಸಿಕೊಳ್ಳುತ್ತಾನೆ. ಎಲ್ಲಾ [...] ದೇವ-ದೇವಿಯರ ಅವತಾರದ ಕಥೆಗಳು ಹುಟ್ಟಿದ್ದು ಹೀ[...] ಅದರಂತೆಯೇ ಮುಂದೊಮ್ಮೆ ಮೋದಿಯೂ ಒಬ್ಬ [...] ಪುರುಷ ಎಂದು ಕಥೆ ಕಟ್ಟಿ ಮೋದಿ ಯಾವುದೋ [...] ಮಗುವಿನ ತಲೆಯ ಮೇಲೆ ಕೈಯಿಟ್ಟ ಕೂಡಲೇ ಆ[...] ಜೀವಂತವಾಯಿತು ಎಂದು ಕಾಲ್ಪನಿಕ ಕಥೆಗಳು ಹ[...] ಆಶ್ಚರ್ಯವಿಲ್ಲ. ಭಕ್ತರು ತಮ್ಮ ಭ್ರಮಾಧೀನ ಗು[...] ಮನಸ್ಥಿತಿಯಲ್ಲಿ ಏನನ್ನೂ ನಂಬಲು ಸಿದ್ಧ

■ ಎಕಲವ್ಯ ಮುಂಡಾಲ, ಮಂಗಳ[...]

ಮೈಸೂರು: ಶ್ರೀನಿವಾಸ್ ಪ್ರಸಾದರ 'ಸ್ವಾಭಿಮಾನ' ನೆಲ ಕಚ್ಚಿತಾ?


ಸಂಪುಟದಿಂದ ಕೈಬಿಟ್ಟ ಕಾರಣಕ್ಕೆ ಸಿಎಂ [illegible]ದ್ದರಾಮಯ್ಯ ಮಂತ್ರಿ ಮಹದೇವಪ್ಪನ ವಿರುದ್ಧ ತೊಡೆ [illegible]ಟ್ಟಿದ್ದ ಶ್ರೀನಿವಾಸ್ ಪ್ರಸಾದ್‌ರ ಸ್ವಾಭಿಮಾನದ ರಣಕಹಳೆಗೆ [illegible]ವರೇ ಮಣ್ಣು ಹಾಕಿ ಮುಚ್ಚಿದರಾ ಎನ್ನುವ ಅನುಮಾನ [illegible]ಡುತ್ತಿದೆ. ಮೈಸೂರು ಜಿಲ್ಲೆಯ ತಿ.ನರಸೀಪುರದಲ್ಲಿ [illegible] ಸ್ವಾಭಿಮಾನಿ ಸಮಾವೇಶದಲ್ಲಿ 'ಇದು ಕೊನೆಯ [illegible]ಮಾನಿ ಸಮಾವೇಶ್' ಎಂದುಚ್ಚರಿಸುವ ಮೂಲಕ ತಮ್ಮ [illegible]ನ್ನು ಹೊರಹಾಕಿದ್ದಾರೆ. ಅವರ ನಿರ್ಧಾರ ಕೇಳಿ [illegible]ಭಿಮಾನಿ ಸಮಾವೇಶದ ಜರ್ನಿಯಲ್ಲಿ ಬಳಲಿ ಬೆಂಡಾಗಿ [illegible]ವಳಿದುಹೋಗಿದ್ದ ಇವರ ಬೆಂಬಲಿಗರು, ನಿಷ್ಠರು, [illegible]ಷಿಗಳು, ಸ್ನೇಹಿತರು ನಿಟ್ಟುಸಿರು ಬಿಟ್ಟಿರಬೇಕು. [illegible]ಸಾದ್‌ರು ಇದು ಕೊನೆಯ ಸಮಾವೇಶ ಎಂದು [illegible]ಳುತ್ತಿದ್ದಂತೆಯೇ ಸದ್ಯ ತಾಪತ್ರಯ ತಪ್ಪಿತಲ್ಲ ಎಂದು [illegible]ಸಾಲಾಗಿ ಮುಂದಿನ ಕಾಂಗ್ರೆಸ್ ಕಾರ್ಯಕ್ರಮಕ್ಕೋ, [illegible]ಡಿಎಸ್ ಕಾರ್ಯಕ್ರಮಕ್ಕೋ, ಬಿಜೆಪಿ ಕಾರ್ಯಕ್ರಮಕ್ಕೋ [illegible]ಥವಾ ಮಠ ಮಾನ್ಯ ಸಂಘಟನೆಗಳ ಕಾರ್ಯಕ್ರಮಗಳ [illegible]ಗೋ ದಾರಿ ಸವೆಸಲು ಸಜ್ಜಾಗುತ್ತಿರಬಹುದು.

ಈ ಮಾತನ್ನು ಅಲ್ಲಗಳೆಯುವಂತಿಲ್ಲ. ಯಾಕೆಂದರೆ [illegible]ಮಾವೇಶದಲ್ಲಿ ಭಾಗವಹಿಸಿದ್ದವರೆಲ್ಲ ಎಲ್ಲಿಯೂ ಸಲ್ಲದವರು. ಅಂದರೆ ಯಾವ ಪಕ್ಷದವರೂ ಅಲ್ಲದ ಸಮಯಕ್ಕೆ ತಕ್ಕಂತೆ [illegible]ಯಾಯ ಪಕ್ಷಗಳಲ್ಲಿ ಅಥವಾ ನಾಯಕರ ಸಮಾರಂಭಗಳಲ್ಲಿ [illegible]ಣಿಸಿಕೊಂಡು ಬೆನಿಫಿಟ್ ಪಡೆಯಲು ಯತ್ನಿಸುವ [illegible]ಮಂದಿಯೇ ಹೆಚ್ಚಾಗಿದ್ದರು.

ಇನ್ನು ಶ್ರೀನಿವಾಸ ಪ್ರಸಾದ್‌ರು ಸ್ವಕ್ಷೇತ್ರ ನಂಜನಗೂಡಿ[illegible]ಲ್ಲಿ ಸ್ವಾಭಿಮಾನಿ ಹೆಸರಿನಲ್ಲಿ ತೊಡೆ ತಟ್ಟಿದ್ದು ಸ್ವಲ್ಪ [illegible]ಜೋರಾಗಿಯೇ ಕೇಳಿಸಿತ್ತು. ನಂತರ ಚಾಮರಾಜನಗರದಲ್ಲಿ [illegible]ತೊಡೆ ತಟ್ಟಿದ ಸದ್ದು ಪರವಾಗಿಲ್ಲ ಅನ್ನಿಸಿತ್ತು. ಇನ್ನು [illegible]ನ್ನು ಮೂರನೇ ಹಾಗೂ ಸಿಎಂ ಸಿದ್ದರಾಮಯ್ಯ ಅವರ [illegible]ತ ಜಿಲ್ಲೆಯಲ್ಲಿ ಯಾವ ರೀತಿ ತೊಡೆ ತಟ್ಟುತ್ತಾರೆ [illegible]ಎಂಬುದನ್ನು ಒಂದು ಸಲ ನೋಡಿಯೇ ಬಿಡಬೇಕು [illegible]ಎಂದು ಸಮಾವೇಶಕ್ಕೆ ಬಂದಿದ್ದವರು ಪೆಚ್ಚುಮೋರೆ [illegible]ಹಾಕಿಕೊಂಡು ಹಿಂತಿರುಗುವಂತಾಯಿತು. ಏಕೆಂದರೆ [illegible]ಮಾವೇಶದಲ್ಲಿ ವೇದಿಕೆಯ ಮೇಲೆ ಪ್ರಸಾದ್ ಅವರು [illegible]ತೊಡೆ ತಟ್ಟಿದ್ದು ಪಕ್ಕದಲ್ಲಿ ಕುಳಿತ್ತಿದ್ದವರಿಗೇ ಕೇಳಲಿಲ್ಲ. [illegible]ನ್ನು ಪ್ರೇಕ್ಷಕರ ಸಾಲಿನಲ್ಲಿ ಕುಳಿತವರಿಗೆ ಎಲ್ಲಿ ಕೇಳಬೇಕು. [illegible]ಸಾದ್ ಅವರ ಬಾಯಿಂದ ಏನೇನೋ ಕೇಳಿಸಿಕೊಳ್ಳಬೇಕು [illegible]ಎಂದು ಬಂದಿದ್ದವರು ನಿರಾಶರಾಗಬೇಕಾಯಿತು. ಪಾಪ, [illegible]ಡವಾದ ಮನಸ್ಸಿನಿಂದ ಬಂದು ಹಿಂದಿನ ಸಾಲಿನಲ್ಲಿ [illegible]ಳಿತಿದ್ದವರಿಗೆ ತೊಡೆ ತಟ್ಟಿದ ಸದ್ದು ಕೇಳುವುದಿರಲಿ [illegible]ವರು ಏನು ಹೇಳುತ್ತಿದ್ದಾರೆ ಎಂಬುದೇ ತಿಳಿಯದೆ ಪಕ್ಕದಲ್ಲಿ [illegible]ಸಾದ್‌ರಿಗಿಂತಲು ಜೋರಾಗಿ 'ಸದ್ದು' ಮಾಡುತ್ತಿದ್ದ [illegible]ಟ್‌ಪಾತ್ ವ್ಯಾಪಾರಿಗಳ ಕಡೆಗೆ ಗಮನ ಹರಿಬಿಟ್ಟು [illegible]ರುಕಲು ತಿಂಡಿ ಬಾಯಾಡಿಸುತ್ತಾ ನಿಂತಿದ್ದರು.

ಇನ್ನು ಪ್ರಸಾದ್ ಅವರ ಮಾತನ್ನು ಕ್ಯುರಿಯಾಸಿಟಿಯಿಂದ [illegible]ಕೇಳಿಸಿಕೊಳ್ಳಲು ಹಿಂದಿನ ಸಾಲಿನಿಂದ ಮುಂದಿನ ಸಾಲಿಗೆ [illegible]ಮುಂದಿನ ಸಾಲಿನಿಂದ ಹಿಂದಿನ ಸಾಲಿಗೆ ಎಡತಾಕುತಿದ್ದವರ [illegible]ಹೊಟ್ಟೆ ಪ್ರಸಾದ್ ಅವರ ಮಾತಿನಿಂದ ತಣ್ಣಗಾಗದೆ, ಕೆಲವರಿಗೆ [illegible] ಪರದೆ ತಲೆಯ ಮೇಲೆ ಬೀಳುತ್ತಿದ್ದ ಮಳೆಯಿಂದ [illegible]ಚ್ಚಿಕೊಳ್ಳಲು ಪಕ್ಕದ ಟೀ ಅಂಗಡಿಯಲ್ಲಿ ಬಂದು ನಿಂತಿದ್ದರು. [illegible]ವರಲ್ಲಿ ಒಬ್ಬ 'ಅಣ್ಣ ಅದ್ಯಾನ, ಪ್ರಸಾದ್ ಯೋಳಿದ್ನೆ [illegible]ಕೇಳ್ತರಲ್ಲ. ನಂಜನ್‌ಗೂಡ್ನಲ್ವಿ ಇದೇ ಮಾತ್ ಹೇಳಿದ್ರು, ನಗ್ರದಲ್ಲೂ ಇದೇ ಮಾತ್ಯೋಳಿದ್ರು. ಇವತ್ತೂ ಇದೇ ಮಾತು.... ಯಾರ್ಯಾರು ರೆಕಾರ್ಡ್ ಮಾಡ್ಕ ಬಂದು ಬೇಕಾದೊತ್ಗ ಆನ್ ಮಾಡ್ಕಂದರ ಕಾಣಿ' ಅಂದಿದ್ದು ಸ್ವಾಭಿಮಾನಿ ಸಮಾವೇಶಕ್ಕೆ ಫಲಿತಾಂಶ ಕೊಟ್ಟಂತಿತ್ತು. ಮತ್ತೊಬ್ಬ 'ಯೋ ಬುಡಯ್ಯ ಅತ್ತಗ ಅಮ ಮಾತಾಡುದ್ರ ಎರ್ಡಾದ್ದ. ಆಗದೇ ಆಗದು. ಸಿದ್ರಾಮಯ್ಯ ಎಲ್ಲಿದ್ದನೋ. ಇಮ ಮಾತಾಡದೆಲ್ಲವಿ ಅವ್ರುನಗ್ ಕೇಳ್ಸಿದ ಅಷ್ಟ ಪ್ರಸಾದ್ ಸಿದ್ರಾಮಯ್ನ ಎದುರ್ಗ ಈಗ್ ಮಾತಡಕ್ಕಾದ್ದ. ಯಾನ ದೂರ್ದಲ್ ಮಾತಾಡ್ಕಬೇಕು' ಅಂದಿದ್ದು, ಇದನ್ನೆಲ್ಲಾ ಸಮೀಕರಿಸುವಂತೆ 'ಅಯ್ಯೋ ಬುಡ್ರಪ್ಪ ಅತ್ತಗ ಅವ್ರುರ್ ಮಾತಾಡದು ನಮ್ಮ ಹಿಟ್ಗು ಬಟ್ಗು ಬಂದದ. ವಂದ್ಗಿರಗಂಟ ಒಬ್ಬರ್‌ಗೊಬ್ರು ಕಿತ್ರು ಕಿಳ್ಡಾರ್ದಗ್ ಇರ್ನಿಲ್ವ. ಆವಾಗ್ ಇದ್ನೆಲ್ಲ ಯೋಳಕಾಯ್ತಿರ್ನಿಲ್ವ. ರಾಜ್ಕೀಯದವ್ರುರೆಲ್ಲ ಹಿಂಗೆ ಕಣ ಯಾರೂ ಸಾಚ ಅಲ್ಲ. ಗಂಟ್ಗೊಂದು ಗಳುಗ್ಗೊಂದು ಮಾತಾಡ್ತರ. ಈವ್ರುರ್ ಮಾತ್ ಕಟ್ಗಂದು ನೀವ್ಯಾಕ್ ಕಿತ್ತಾಡಿರಿ. ಬಂದ್ ದಾರಿ ನೋಡಿ' ಅಂದದ್ದು ಎಲ್ಲವೂ ಪ್ರಸಾದ್‌ರ ರಾಜಕೀಯ ಸಮಾವೇಶಕ್ಕೆ ಹಿಡಿದ ಕನ್ನಡಿಯಂತಿತ್ತು.




ಸಮಾವೇಶದಲ್ಲಿ ನೆರೆದಿದ್ದ ಜನಸ್ತೋಮ

ಶ್ರೀನಿವಾಸ ಪ್ರಸಾದ್ ಅವರು ನಂಜನಗೂಡಿನಲ್ಲಿ ನಡೆದ ಮೊದಲ ಸ್ವಾಭಿಮಾನಿ ಸಮಾವೇಶದಲ್ಲಿ ಹೇಳಿದ್ದ ಮಾತುಗಳೇ ಚಾಮರಾಜನಗರದಲ್ಲಿ ನಡೆದ ಸ್ವಾಭಿಮಾನಿ ಸಮಾವೇಶದಲ್ಲೂ ಇದ್ದವು. ಮಂಗಳವಾರ ನಡೆದ ಸ್ವಾಭಿಮಾನಿ ಸಮಾವೇಶದಲ್ಲೂ ಅದೇ ಮಾತುಗಳನ್ನಾಡಿದರು. ಇದರಲ್ಲಿ ಪದಗಳು ಬೇರೆ ಎಂಬುದನ್ನು ಬಿಟ್ಟರೆ ಮೂರೂ ಸಮಾವೇಶದ ಅರ್ಥಗಳು ಒಂದೇ ಆಗಿತ್ತು. ಅದು ತಮ್ಮನ್ನು ಸಂಪುಟದಿಂದ ಕಿತ್ತುಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಾಗೂ ಅವರ ಸಂಪುಟದ ಸಚಿವರನ್ನು ಬಾಯಿಗೆಬಂದಂತೆ ತೆಗಳುವುದು. ತಮ್ಮ ಶಕ್ತಿ ಪ್ರದರ್ಶನ ತೋರಿಸುವುದು. ಇವುಗಳನ್ನು ಬಿಟ್ಟರೆ ಬೇರೆ ಯಾವ ಉದ್ದೇಶವೂ ಅದರಲ್ಲಿ ಕಾಣಲಿಲ್ಲ. ಅವರನ್ನೇ ನಂಬಿಕೊಂಡು ಬಂದಿದ್ದ ಸ್ವಾಭಿಮಾನಿ ಜನರ ಸ್ವಾಭಿಮಾನಿ ಬದುಕಿಗೆ ಮಾರ್ಗವಾಗುವಂತ ಒಂದೆರಡು ಮಾತುಗಳು ಅಲ್ಲಿ ಬರಲಿಲ್ಲ.

ಯಥಾಪ್ರಕಾರ 'ಸಿದ್ದರಾಮಯ್ಯ ಪರಿಣಾಮಕಾರಿ ಸಂಪುಟ ರಚನೆ ಮಾಡುತ್ತೇನೆಂದು ಹೇಳಿ ರಾಜಕೀಯದಲ್ಲಿ ಯಾವುದೇ ಕಳಂಕವಿಲ್ಲದ ನನ್ನನ್ನು ಸಂಪುಟದಿಂದ ಕಿತ್ತು ಹಾಕಿದರು. ಸೌಜನ್ಯಕ್ಕೂ ನನ್ನನ್ನು ಒಂದು ಮಾತನ್ನೂ ಕೇಳಲಿಲ್ಲ. ಈಗ ಅವರು ಯಾವ ರೀತಿ ಪರಿಣಾಮಕಾರಿ ಸಂಪುಟ ಹೊಂದಿದ್ದಾರೆ. ಮುಖ್ಯಮಂತ್ರಿಗಳ ಆಡಳಿತ ವೈಖರಿ ಬಗ್ಗೆ (ಇವರಿಗೆ) ಜನರಿಗೆ ಬೇಸರವಾಗಿದೆ. ಉತ್ತರ ಕರ್ನಾಟಕದ ಹಿರಿಯ ಸಚಿವರಿಗೆ ಅವಕಾಶ ನೀಡದೇ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆಯನ್ನು ಮಂತ್ರಿ ಮಾಡಿದ್ದೇಕೆ? ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹಿಂದಿನ ಚುನಾವಣೆಯಲ್ಲಿ ನೀವು ನನ್ನ ಹತ್ತಿರ ಸಹಾಯ ಕೇಳಿಕೊಂಡು ಬಂದಿರಲಿಲ್ಲವೆ. ದೆಹಲಿಗೆ ಸೂಟ್‌ಕೇಸ್ ಹೊರಲು ಮಾದೇವಪ್ಪನನ್ನು ಇಟ್ಟುಕೊಂಡಿದ್ದಾರೆ. ಭ್ರಷ್ಟ ಅಧಿಕಾರಿಗಳನ್ನು ಪಕ್ಕದಲ್ಲಿ ಇಟ್ಟುಕೊಂಡಿದ್ದಾರೆ' ಅಂತ ಆರೋಪಗಳ ಸುರುಮಳೆಗರೆವುದನ್ನು ಬಿಟ್ಟು ಮತ್ಯಾವ ಹೊಸ ವಿಷಯವನ್ನೂ ಅವರು ಪ್ರಸ್ತಾಪಿಸಲಿಲ್ಲ.

ಮೈಸೂರು ಭಾಗದಲ್ಲಿ ದಲಿತ ಸಮುದಾಯದ ಬಹಳಷ್ಟು ಮಂದಿ ಪ್ರಸಾದ್ ಅವರನ್ನು ನಂಬಿಕೊಂಡಿದ್ದಾರೆ. ಶ್ರೀನಿವಾಸ ಪ್ರಸಾದ್ ಅವರು ನಮ್ಮನ್ನು ಎಲ್ಲಾದರೂ, ಯಾವ ಪಕ್ಷದಲ್ಲಾದರೂ ಹೇಗಾದರೂ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಾರೆ. ಅಷ್ಟು ಆಗಲಿಲ್ಲವೆಂದರೂ ಕೊನೆಯ ಪಕ್ಷ ತಮ್ಮ ಬದುಕಿಗೊಂದು ಸ್ವಾಭಿಮಾನಿ ನೆಲೆಯನ್ನಾದರೂ ತೋರಿಸುತ್ತಾರೆ ಎಂದು ನಂಬಿದ್ದಾರೆ. ಆದರೆ ಶ್ರೀನಿವಾಸ ಪ್ರಸಾದ್ ಅವರು ತಮ್ಮನ್ನು ನಂಬಿಕೊಂಡು ಬಂದ ಜನರಿಗೆ ದಿಕ್ಕು ತೋರುವ ಸಮಾಲೋಚನೆಗೆ ಇಳಿಯುವ ಬದಲು ತೆಗಳಿಕೆ ಸಮಾವೇಶಗಳನ್ನೇ ಸ್ವಾಭಿಮಾನ ಎಂದು ಕರೆದುಕೊಳ್ಳುತ್ತಿರೋದು ವಿಪರ್ಯಾಸ.

ಇದನ್ನು ನೋಡಿದರೆ ಶ್ರೀನಿವಾಸ ಪ್ರಸಾದ್ ಕೂಡಾ ಉಳಿದವರಂತೆ ಬೆನಿಫಿಟ್ ಬಯಸುವ ರಾಜಕಾರಣಿಯಾಗುತ್ತಿದ್ದಾರೆಯೇನೋ ಅನ್ನಿಸುತ್ತದೆ. ಯಾಕೆಂದರೆ ನಂಜನಗೂಡಿನಲ್ಲಿ ಮೊದಲ ಸ್ವಾಭಿಮಾನಿ ಸಮಾವೇಶ ನಡೆಸುವ ಮುನ್ನ ಇದೇ ಪ್ರಸಾದ್ ಅವರು ಒಂದು ಮಾತು ಹೇಳಿದ್ದರು. 'ನನ್ನ ಹಿತೈಷಿಗಳು, ಸ್ನೇಹಿತರು, ನನ್ನ ಬೆಂಬಲಿಗರೊಂದಿಗೆ ಮಾತನಾಡಿ ನನ್ನ ಮುಂದಿನ ನಿರ್ಧಾರ ತಿಳಿಸುತ್ತೇನೆ. ಅದಕ್ಕಾಗಿ ನಂಜನಗೂಡಿನಲ್ಲಿ ಸ್ವಾಭಿಮಾನಿ ಸಮಾವೇಶ ಆಯೋಜಿಸಿದ್ದೇನೆ. ಅಲ್ಲಿ ನನ್ನ ನಿರ್ಧಾರ ಪ್ರಕಟಿಸುತ್ತೇನೆ' ಎಂದಿದ್ದರು. ಅದರ ಅರ್ಥ ಅವರನ್ನು ನಂಬಿ ಕೂತವರ (ಸಮುದಾಯದವರು) ಒಳಿತಿಗಾಗಿ ಒಂದೊಳ್ಳೆ ನಿರ್ಧಾರವನ್ನು ಕೈಗೊಳ್ಳುವುದು ಎಂದು. ಆ ಮಾತಾಡಿ ಮೂರು ಸಮಾವೇಶಗಳೂ ಮುಗಿದು ಹೋಯಿತು. ಅವರ ನಿರ್ಧಾರ ಪ್ರಕಟವಾಗಲೇ ಇಲ್ಲ. ಹಾಗಾದರೆ ಅವರು ಆಯೋಜಿಸುತ್ತಿರುವ ಸಮಾವೇಶಗಳು ಯಾರಿಗಾಗಿ? ಸೇಡು ತೀರಿಸಿಕೊಳ್ಳಲೋ ಅಥವಾ ತನ್ನನ್ನೇ ನಂಬಿರುವ ಬೆಂಬಲಿಗರ (ದಲಿತ ಸಮುದಾಯದವರು) ಬದುಕಿಗೋ ತಿಳಿಯದಾಗಿದೆ.

ಅದೇನೇ ಇರಲಿ, ಪ್ರಸಾದ್ ಅವರು ಬೈಯುವ ಕಾರ್ಯಕ್ರಮಕ್ಕೆ ತಿಲಾಂಜಲಿ ಇಟ್ಟು, ಇನ್ನಾದರೂ ಸಮುದಾಯದ, ಅವರನ್ನೇ ನಂಬಿ ಕೂತವರ ಉಳಿವಿಗೆ, ಗೆಲುವಿಗೆ, ಸ್ವಾಭಿಮಾನಿ ಬದುಕಿಗೆ ಒಂದೊಳ್ಳೆ ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯಗಳು ಮೇಲಿಂದ ಮೇಲೆ ಕೇಳಿಬರುತ್ತಿದೆ. ಜೊತೆಗೆ ಈಗಿನ ಜನಾಂದೋಲನದ ಮಹಾಮೈತ್ರಿಯಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು ಹಲವರ ಒತ್ತಾಯವೂ ಆಗಿದೆ. ಇವುಗಳೆಲ್ಲದರ ನಡುವೆ ಜನಾಂದೋಲನಗಳ ಮಹಾಮೈತ್ರಿಯ ಮುಖ್ಯಸ್ಥರೂ ಸಹ ಪ್ರಸಾದ್ ಅವರ ಬಳಿ ಒಮ್ಮೆಯಾದರೂ ಮಾತನಾಡಬೇಕಿತ್ತು ಎಂಬುದು ಕೆಲ ಪ್ರಗತಿಪರರ ಮಾತು. ಈ ನಿಟ್ಟಿನಲ್ಲಿ ಜನಾಂದೋಲನಗಳ ಮಹಾಮೈತ್ರಿಯ ಮುಖ್ಯಸ್ಥರು ಹಾಗೂ ಪ್ರಸಾದ್ ಗುಣಾತ್ಮಕವಾಗಿ ಚಿಂತಿಸುತ್ತಾರೆಯೇ? ಕನಿಷ್ಠ ಪಕ್ಷ ಅದಾದರು ಆದರೆ ಶೋಷಿತ ಸಮುದಾಯಗಳಿಗೆ ಮತ್ತಷ್ಟು ಶಕ್ತಿ ಬಂದಂತಾಗುತ್ತದೆ.

■ಶರ

08 ◀◀ ಕೊಡಗು: ಅರಣ್ಯ ಇಲಾಖೆಯ ದೌರ್ಜನ್ಯ

[illegible]ದಾಖಲೆಯಲ್ಲಿ, ಅಂದರೆ ಆರ್.ಟಿ.ಸಿ.ಯಲ್ಲಿ ಇದನ್ನು [illegible]ರೆಸ್ಟ್ ಪೈಸಾರಿ ಎಂದು ದಾಖಲಿಸಲಾಗಿದೆ. ಪಟ್ಟ ಎಂಬ [illegible]ಕಣದಲ್ಲಿ ಇದನ್ನು ದಾಖಲಿಸಲಾಗಿದೆ. ಕರ್ನಾಟಕ ಭೂ [illegible]ದಾಯ ಕಾಯ್ದೆಯಲ್ಲಿ ಎಲ್ಲಿಯೂ ಫಾರೆಸ್ಟ್ ಪೈಸಾರಿ [illegible] ನಿಬಂಧನೆ ಇಲ್ಲ. ಪೈಸಾರಿ ಎಂಬುದು ಭೂ [illegible]ದಾಯ ವ್ಯಾಪ್ತಿಗೆ ಬರುವ ನಿಬಂಧನೆಯಾಗಿದೆ. ಅರಣ್ಯ [illegible]ಖೆಯವರು ಫಾರೆಸ್ಟ್ ಪೈಸಾರಿ ಎಂಬ ನಿಬಂಧನೆಯನ್ನು [illegible]ಗಿಯೇ ಸೃಷ್ಟಿಸಿಕೊಂಡಿರುವುದಾಗಿದೆ. ಇಲ್ಲದಿರುವ [illegible] ನಿಬಂಧನೆಯ ಅಡಿಯಲ್ಲಿ ಅರಣ್ಯ ಇಲಾಖೆ [illegible]ಜಮಾಸಿಕೆಯನ್ನು ಮಾಡುತ್ತಿದೆ.

ಅರಣ್ಯ ಇಲಾಖೆಯ ತಜ್ಞರ ಸಮಿತಿಯವರು ಸಿ. [illegible]ರಾಜ್‌ರವರ ಅಧ್ಯಕ್ಷತೆಯಲ್ಲಿ ಈ ಹಿಂದೆ ನೀಡಿದ [illegible]ವರದಿಯಲ್ಲಿ ಪೈಸಾರಿ ಜಮೀನನ್ನು ಕೂಡ ಅರಣ್ಯ ಎಂದು [illegible]ರಸ್ಸು ಮಾಡಿ ವರದಿ ನೀಡಿತ್ತು. ಈ ವರದಿಯನ್ನು [illegible]ವರೆಗೆ ಯಾರೂ ಅಂಗೀಕರಿಸಿಲ್ಲ. ಹಾಗಿದ್ದರೂ ಕೂಡ [illegible] ಇಲಾಖೆಯಲ್ಲಿ ಇರುವಂತಹ ಬಡ ವರ್ಗದವರಿಗೆ [illegible] ಇರುವಂತಹ ಪೈಸಾರಿ ಜಮೀನಿನ ಮೇಲೆ ಅರಣ್ಯ [illegible] ಜಮಾಬಂದಿ ಮಾಡುತ್ತಿದೆ. ಇದನ್ನು ವಿರೋಧಿಸುವ [illegible] ಅಥವ ಆತ್ಮವಿಶ್ವಾಸ ಸರಕಾರಕ್ಕಾಗಲಿ ಅಥವ [illegible] ಪಕ್ಷಕ್ಕಾಗಲಿ [illegible] ಹಾಗಾಗಿ ಇಂತಹ [illegible]ಯನ್ನು ಅರಣ್ಯ ಇಲಾಖೆ ಮಾಡುತ್ತಿದೆ.

[illegible] ಪ್ರಕಾರ ಇದು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಇರುವಂತಹ ಸಿಡಿ ಜಮೀನು ಆಗಿರಬೇಕು. ಇಲ್ಲವೇ ಪೈಸಾರಿಯೇ ಆಗಿರಬೇಕು. ಈ ಹಿಂದೆ ಸಿಡಿ ಜಮೀನನ್ನು ಅರಣ್ಯ ಅಭಿವೃದ್ಧಿಪಡಿಸಲು ಕಂದಾಯ ಇಲಾಖೆಯು ಅರಣ್ಯ ಇಲಾಖೆಗೆ ಸುತ್ತೋಲೆಯೊಂದರ ಮೂಲಕ ಹಸ್ತಾಂತರಿಸಿತ್ತು. ಅದನ್ನು ಯಾವಾಗ ಬೇಕಾದರೂ ಹಿಂದಕ್ಕೆ ಪಡೆಯುವ ಅಧಿಕಾರವನ್ನು ಕಂದಾಯ ಇಲಾಖೆ ಇಟ್ಟುಕೊಂಡಿತ್ತು. ಆದರೆ ಅರಣ್ಯ ಇಲಾಖೆ ಈಗ ಈ ಜಮೀನುಗಳು ತನ್ನದೆಂದು ವಾದಿಸುತ್ತಿದೆ. ಇದನ್ನು ಸುಬ್ಬಯ್ಯನವರು ಬಡ ವರ್ಗದ ವಿರುದ್ಧ ಅರಣ್ಯ ಇಲಾಖೆ ಮತ್ತು ಸ್ಥಾಪಿತ ಹಿತಾಸಕ್ತಿಗಳು ಮಾಡುತ್ತಿರುವ ಪಿತೂರಿ ಎಂದು ಹೇಳಿದ್ದಾರೆ.

ಈಗ ಇದು ರಾಜ್ಯ ಮಟ್ಟದ ಸುದ್ದಿಯಾಗಿದೆ. ಭೂಮಿಗಾಗಿ ರಾಜ್ಯ ಮಟ್ಟದಲ್ಲಿ ಹೋರಾಟ ನಡೆಸುತ್ತಿರುವ ಸಮಿತಿ ಇದನ್ನು ಕೈಗೆತ್ತಿಕೊಂಡಿದೆ. ದಿನಾಂಕ 13ರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಈ ವಿಚಾರ ಪ್ರಮುಖವಾಗಿ ಚರ್ಚೆಯಾಗಿದ್ದು ಈ ಪ್ರದೇಶದಲ್ಲಿಯೇ ಅವರಿಗೆ ನಿವೇಶನವನ್ನು ನೀಡಬೇಕು ಎಂಬ ಹೋರಾಟ ಪ್ರಾರಂಭವಾಗುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ಯಾವ ತಿರುವು ಪಡೆಯುತ್ತದೆ ಎಂಬುದನ್ನು ಕಾದುನೋಡಬೇಕು.

■ಬಿ.ಎನ್. ಮನುಶೆಟ್ಟಿ

ಅನಾಣ್ಯೀಕರಣ: ಸಂಘಟಿತ ಲೂಟಿ, ವಿಧಿವತ್ತಾದ ಬಲಾತ

ನಿಜದ ಪ್ರಜಾಪ್ರಭುತ್ವವನ್ನು 20 ಜನ ಕೇಂದ್ರ ಸ್ಥಾನದಲ್ಲಿ ಕುಳಿತು ಮುನ್ನಡೆಸಲು ಸಾಧ್ಯವಿಲ್ಲ, ಅದನ್ನು ಕೆಳಮಟ್ಟದಿಂದ ಪ್ರತಿಯೊಂದು ಹಳ್ಳಿಯ ಜನರಿಂದ ಮುನ್ನಡೆಸಬೇಕಾಗುತ್ತದೆ

\- ಗಾಂಧಿ.

"ಇಂಡಿಯಾದಲ್ಲಿ ವ್ಯವಸ್ಥೆಯ ಬದಲಾವಣೆಯ ಅವಶ್ಯಕತೆ ಇದೆ, ಕರೆನ್ಸಿಯ ಬದಲಾವಣೆ ಅಲ್ಲ ಎನ್ನುವ ತತ್ವ ಈ ಹಿಂದೂತ್ವವಾದಿ ಮೋದಿಯವರಿಗೆ ಬೇಕಾಗಿಲ್ಲ. ಪ್ರಧಾನಿ ಮೋದಿಯವರ ನೋಟು ಅಮಾನ್ಯದ ಪ್ರಹಸನಕ್ಕೆ 30 ದಿನ ತುಂಬಿವೆ. ಬರೋಬ್ಬರಿ ಒಂದು ತಿಂಗಳು. ಆರಂಭದಲ್ಲಿ ಕಪ್ಪುಹಣ ನಿಯಂತ್ರಿಸುತ್ತೇನೆ, ಭಯೋತ್ಪಾದನೆ ನಿಗ್ರಹಕ್ಕೆ ಈ ಕ್ರಮ ಸಹಕಾರಿಯಾಗುತ್ತದೆ ಎಂದು ಎದೆ ಬಡಿದುಕೊಂಡಿದ್ದ ಮೋದಿಯ ಮರೆಮೋಸದ ಮಾತನ್ನು ನಂಬಿ ಇದನ್ನು ಶತಮಾನದ ನಿರ್ಧಾರ ಎಂದು ಹೊಗಳಿದ್ದ ಬಹುಪಾಲು ಮಾಧ್ಯಮಗಳು ಇಂದು ಸ್ವತಃ ಪಶ್ಚಾತ್ತಾಪದಿಂದ ಬಳಲುತ್ತಿವೆ. 'ದ ಹಿಂದೂ' ಪತ್ರಿಕೆಯಲ್ಲಿ ಬಂದ ಎಸ್‌ಬಿಐ ಬ್ಯಾಂಕ್‌ನ ವರದಿಯ ಅನುಸಾರ ಚಲಾವಣೆಯಲ್ಲಿರುವ 15.4 ಲಕ್ಷ ಕೋಟಿ ಅಮಾನ್ಯಗೊಂಡ ಕರೆನ್ಸಿ (ರೂ. 500, ರೂ. 1000) ಪೈಕಿ ಸುಮಾರು 2.5 ಲಕ್ಷ ಕೋಟಿ ಮೊತ್ತದ ಹಣವು ವ್ಯವಸ್ಥೆಯೊಳಗೆ ಜಮಾವಣೆಯಾಗದೆ ಉಳಿದುಬಿಡುತ್ತದೆ ಅಂದರೆ ಅದು ಪ್ರಯೋಜನಕ್ಕೆ ಬಾರದ ಹಣವಾಗುತ್ತದೆ. ಆದರೆ ಅದರಲ್ಲಿ ಶೇಕಡಾ 1 ಲಕ್ಷ ಕೋಟಿ ಮೊತ್ತದ ಹಣವನ್ನು ಸ್ವಘೋಷಿತ ಆದಾಯ ತೆರಿಗೆಯ ಅಡಿಯಲ್ಲಿ ಬೊಕ್ಕಸಕ್ಕೆ ಜಮಾವಣೆ ಆಗುತ್ತದೆ ಎಂದು ಅಂದಾಜಿಸಲಾಗಿದೆ. ಹಾಗಿದ್ದಲ್ಲಿ ಜಮಾವಣೆಯಾದ ಈ 1 ಲಕ್ಷ ಕೋಟಿ ಕಪ್ಪು ಹಣದ ಮೇಲೆ ಶೇಕಡಾ 50ರಷ್ಟು ಆದಾಯ ತೆರಿಗೆ ಬೀಳುತ್ತದೆ. ಅಂದರೆ ವಾಸ್ತವದಲ್ಲಿ ಡಿಸೆಂಬರ್ 30ರ ಒಳಗೆ 50 ಸಾವಿರ ಕೊಟಿ ಕಪ್ಪು ಹಣ ಸಕ್ರಮವಾದರೆ ಉಳಿದ ಕೇವಲ 50 ಸಾವಿರ ಕೋಟಿ ಕಪ್ಪು ಹಣ ಮಾತ್ರ ಬೊಕ್ಕಸಕ್ಕೆ ಜಮಾವಣೆ ಆಗುತ್ತದೆ. ಆದರೆ ಆದಾಯ ತೆರಿಗೆ ಇಲಾಖೆಯು ಈ 1 ಲಕ್ಷ ಕೋಟಿ ಹಣವನ್ನು ಸಹ ಮಾನ್ಯ ಮಾಡಲು ಹಿಂಜರಿಯುತ್ತಿದೆ. ಆದರೆ ಈ ಮೋದಿಯಂತಹ ಸರ್ವಾಧಿಕಾರಿ ವ್ಯಕ್ತಿತ್ವದಿಂದ ಕಳೆದ ಒಂದು ತಿಂಗಳಲ್ಲಿ ಈ ದೇಶಕ್ಕೆ ಉಂಟಾದ ಆರ್ಥಿಕ ನಷ್ಟದ ಲೆಕ್ಕವನ್ನೊಮ್ಮೆ ನೋಡಿ. ಎದೆ ಒಡೆಯದಿದ್ದಲ್ಲಿ ನಿಮ್ಮ ಪುಣ್ಯ.

ಕಳೆದ ಒಂದು ತಿಂಗಳಲ್ಲಿ ಸುಮಾರು 4 ಲಕ್ಷ ಉದ್ಯೋಗ ನಷ್ಟವಾಗಿದೆ. ಜಿಡಿಪಿಯ ಶೇಕಡಾ 16ರ ಪ್ರಮಾಣದಲ್ಲಿರುವ ಉತ್ಪಾದನಾ ವಲಯದಲ್ಲಿನ ಉತ್ಪಾದನಾ ವೆಚ್ಚ ಶೇಕಡಾ 30ರಷ್ಟು ಕುಸಿದಿದೆ. ಕಳೆದ 30 ದಿನಗಳಲ್ಲಿ ಭಾರತದ ಆರ್ಥಿಕ ವ್ಯವಸ್ಥೆಗೆ ಸುಮಾರು 1,25,000 ಕೋಟಿ ನಷ್ಟವಾಗಿದೆ ಎಂದು ಸಿಎಮ್‌ಐಎ ಸಂಸ್ಥೆ ಹೇಳಿದೆ. ಜನಸಾಮಾನ್ಯರಿಗೆ ಸರಾಸರಿ ಲೆಕ್ಕಾಚಾರದಲ್ಲಿ 15,000 ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ (ಉದ್ಯೋಗ ಕಡಿತ, ವೇತನ ಕಡಿತ, ದಿನನಿತ್ಯದ ಕನಿಷ್ಠ ಅಗತ್ಯ ವಸ್ತುಗಳ ಕಡಿತ, ಇತ್ಯಾದಿ). ಕಳೆದ ಒಂದು ತಿಂಗಳಲ್ಲಿ ವ್ಯಾಪಾರ ವಹಿವಾಟು ಕುಸಿದ ಪರಿಣಾಮವಾಗಿ ಕೈಗಾರಿಕೆ ಉದ್ಯಮದಲ್ಲಿ ಸುಮಾರು 60,000 ಕೋಟಿ ನಷ್ಟವಾಗಿದೆ ಎಂದು ಆರ್ಥಿಕ ತಜ್ಞರು ವಿವರಿಸುತ್ತಾರೆ. ಈ ಹೊಸ ಕರೆನ್ಸಿಯ ಮುದ್ರಣ ಮತ್ತು ಇತರೇ ವೆಚ್ಚವನ್ನು ಒಳಗೊಂಡಂತೆ ಆರ್‌ಬಿಐ ಮತ್ತು ಸಾರ್ವಜನಿಕ ಬ್ಯಾಂಕುಗಳಿಗೆ ಸುಮಾರು 17,000 ಕೋಟಿ ನಷ್ಟವಾಗಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸುತ್ತಾರೆ. 2016-17ರ ಬಜೆಟ್‌ನಲ್ಲಿ 150 ಲಕ್ಷ ಕೋಟಿ ಮೊತ್ತದ ಜಿಡಿಪಿಯನ್ನು ಘೋಷಿಸಲಾಗಿತ್ತು, ಆದರೆ ಈ ನೋಟು ಅಮಾನ್ಯದ ನಂತರದಲ್ಲಿ ಜಿಡಿಪಿ ಶೇಕಡಾ 1 ಕುಸಿದಿದೆ. ಅಂದರೆ 1.5 ಲಕ್ಷ ಕೋಟಿ ನಷ್ಟವಾಗಿದೆ. ರಾಜಕೀಯ ದುರುದ್ದೇಶದ ಈ ಏಕವ್ಯಕ್ತಿಯ ತುಘಲಕ್ ವರ್ತನೆಯ ಪ್ರಹಸನದ ಫಲವಾಗಿ ದೇಶದೆಲ್ಲೆಡೆ ಆರ್ಥಿಕ ತುರ್ತುಸ್ಥಿತಿ ನಿರ್ಮಾಣವಾಗಿದೆ. ದೇಶದಲ್ಲಿನ ಕಪ್ಪು ಹಣವನ್ನು ನಿಯಂತ್ರಿಸುತ್ತೇನೆ ಎಂದು ಕೊಚ್ಚಿಕೊಂಡ ಮೋದಿಯವರ ಈ ಪ್ರಲಾಪದ ಫಲವಾಗಿ ಈ ದೇಶದ ಶೇಕಡಾ 75 ಪ್ರಮಾಣದ ಸಂಪತ್ತಿನ ಮಾಲೀಕರಾಗಿರುವ - ವಾಸ್ತವದಲ್ಲಿ ಕಪ್ಪುಹಣ ಹೊಂದಿರುವ; ನಿಜದಲ್ಲಿ ಶಿಕ್ಷೆಗೆ ಗುರಿಯಾಗಬೇಕಾಗಿರುವ - ಇಲ್ಲಿನ 78 ಬಕಾಸುರ ಬಂಡವಾಳಶಾಹಿಗಳು ಅನಿರ್ಬಂಧಿತವಾಗಿ, ಕುಶಲ, ಕ್ಷೇಮದಿಂದ ತಮ್ಮ ವ್ಯವಹಾರ ಮುಂದುವರೆಸಿದ್ದಾರೆ. ಇನ್ನು ಈ ಆರ್ಥಿಕ ಪಿರಮಿಡ್‌ನ ತಳಭಾಗದಲ್ಲಿರುವ ಈ ದೇಶದ ಶೇಕಡಾ 4 ಸಂಪತ್ತಿನ ಒಡೆತನ ಹೊಂದಿರುವ ಶೇಕಡಾ 70ರಷ್ಟು ಪ್ರಮಾಣದ ಜನತೆ ತತ್ತರಿಸುತ್ತಿದ್ದಾರೆ. ಅವರದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿದ್ದಾರೆ. ಇವರ ಮೇಲೆ ದೇಶಪ್ರೇಮದ ಬ್ಲಾಕ್‌ಮೇಲ್ ಮಾಡಲಾಗುತ್ತಿದೆ. ಈ ನೋಟು ಅಮಾನ್ಯದ ನಂತರ ನಗರ ಪ್ರದೇಶಗಳಲ್ಲಿ ವಲಸೆ ಬಂದ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಕೂಲಿ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಅತ್ತ ಮರಳಿ ಹಳ್ಳಿಗಳಿಗೂ ಹೋಗಲಾರದೆ, ನಗರದಲ್ಲಿಯೂ ಉದ್ಯೋಗವಿಲ್ಲದೆ ತತ್ತರಿಸುತ್ತಿದ್ದಾರೆ.

ಕಡೆಗೆ ಸರ್ವಾಧಿಕಾರಿ ಮೋದಿಯವರ ಈ ನೋಟು ಅಮಾನ್ಯದ ಪರಿಣಾಮವಾಗಿ ಕೇವಲ 50,000 ಕೋಟಿ ಬೊಕ್ಕಸಕ್ಕೆ ಜಮಾವಣೆಯಾಗಿದ್ದರೆ (ಡಿಸೆಂಬರ್ 30ರವರೆಗೆ) ಸುಮಾರು 2,17,000 ಕೋಟಿ ಮೊತ್ತದಷ್ಟು ನಷ್ಟವಾಗಿದೆ. ಇದಕ್ಕೆ ಜಿಡಿಪಿಯ ಶೇಕಡಾ 1 ರಷ್ಟು ಕುಸಿತದಿಂದ ಉಂಟಾದ 1.5 ಲಕ್ಷ ಕೋಟಿಯನ್ನು ಸೇರಿಸಿದರೆ ಇಡೀ ನಷ್ಟವಾದ ಮೊತ್ತದ ಪ್ರಮಾಣ 3,67,000 ಕೋಟಿಯಷ್ಟಾಗುತ್ತದೆ.

ನೋಟಿನ ಅಮಾನ್ಯಕ್ಕಿಂತ ಮೊದಲೇ ಸುಮಾರು 8 ಲಕ್ಷ ಕೋಟಿಯಿಂದ 10 ಲಕ್ಷ ಕೋಟಿಯವರೆಗೂ ಮೊತ್ತದ ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸಲಾಗಿದೆ. ಇನ್ನೂ ಕುತೂಹಲವೆಂದರೆ ಸೆಪ್ಟಂಬರ್ 15-ಸೆಪ್ಟಂಬರ್ 30 ರ ನಡುವಿನ ಹದಿನೈದು ದಿನಗಳಲ್ಲಿ 3 ಲಕ್ಷ ಕೋಟಿ ಮೊತ್ತದ ಹಣವನ್ನು ಬ್ಯಾಂಕ್‌ನಲ್ಲಿ ಜಮಾ ಮಾಡಲಾಗಿದೆ. ಸಹಜವಾಗಿಯೇ ಇದು ಅನೇಕ ಅನುಮಾನಗಳಿಗೆ ಕಾರಣವಾಗಿದೆ.

ಇನ್ನು ಗ್ರಾಮೀಣ ಭಾಗದ ಪರಿಸ್ಥಿತಿ ಮತ್ತಷ್ಟು ಚಿಂತಾಜನಕವಾಗಿದೆ. ಜಿಡಿಪಿಯ ಶೇಕಡಾ 17 ಪ್ರಮಾಣದಲ್ಲಿರುವ ಕೃಷಿ ವಲಯದ ಕುಸಿತ ನಿಜಕ್ಕೂ ಕಳವಳಕಾರಿಯಾಗಿದೆ. ಈಗಾಗಲೇ ಬರ ಮತ್ತು ಕೃಷಿ ವೈಫಲ್ಯದ ಕಾರಣದಿಂದ ಕಂಗೆಟ್ಟಿರುವ ಗ್ರಾಮೀಣ ಜನಸಂಖ್ಯೆಗೆ ನೋಟು ಅಮಾನ್ಯದ ಕ್ರಮವು ಗಾಯದ ಮೇಲೆ ಉಪ್ಪು ಸವರಿದಂತಾಗಿದೆ. ರಾಜಕೀಯ ದುರುದ್ದೇಶಕ್ಕಾಗಿ ಜಾರಿಗೊಳಿಸಿದ ಈ ಕಪ್ಪುಹಣದ ನಿಯಂತ್ರಣದ ಮರೆಮೋಸದ ಆಟದಿಂದ ಗ್ರಾಮೀಣ ಜನತೆ ಕಂಗೆಡುತ್ತಿದ್ದಾರೆ. ಸಹಕಾರಿ ಬ್ಯಾಂಕುಗಳಿಗೆ ಅಮಾನ್ಯಗೊಂಡ ಕರೆನ್ಸಿಯನ್ನು ಸ್ವೀಕರಿಸಲು ಅನುಮತಿ ನೀಡಿಲ್ಲ. ಇದು ರೈತರನ್ನು ಅಕ್ಷರಶಃ ಬಿಕ್ಕಟ್ಟಿನಲ್ಲಿರಿಸಿದೆ. ಗ್ರಾಮೀಣ ಭಾಗದಲ್ಲಿ ಸಹಕಾರಿ ಬ್ಯಾಂಕುಗಳೊಂದಿಗೆ ವಹಿವಾಟು ನಡೆಸುವ ರೈತರು ಈ ನಿರ್ಬಂಧದಿಂದ ಮುಂದಿನ ದಾರಿ ಯಾವುದೆಂದು ಸಂಪೂರ್ಣ ಹತಾಶೆಗೊಂಡಿದ್ದಾರೆ. ಬೀಜವನ್ನು ಕೊಳ್ಳುವುದರಿಂದ ಹಿಡಿದು ಬಿತ್ತನೆ ಮಾಡಿ, ಕಟಾವು ಮಾಡಿದ ನಂತರ ತರಕಾರಿ, ಹಣ್ಣು ದಾನ್ಯಕಾಳುಗಳನ್ನು ಕೃಷಿ ನಿಯಂತ್ರಣ ಮಾರುಕಟ್ಟೆಗೆ ಸಾಗಿಸುವ ತನಕ ಇಡೀ ಪ್ರಕ್ರಿಯೆ ಶೇಕಡಾ ನೂರರಷ್ಟು ಪ್ರಮಾಣದಲ್ಲಿ ನೋಟಿನ ಮೇಲೆ ಅವಲಂಬಿತವಾಗಿದೆ. ಆದರೆ ಶೇಕಡಾ 82 ಪ್ರಮಾಣದಲ್ಲಿ ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿದ್ದ ರೂ. 500 ಮತ್ತು ರೂ. 1000 ನೋಟುಗಳು ಅಮಾನ್ಯಗೊಂಡ ನಂತರ ರೈತರು ಭಾಗಶಃ ಬೀದಿಗೆ ಬಿದ್ದಿದ್ದಾರೆ. ಉದಾಹರಣೆಗೆ ಟೊಮೆಟೋದ ಬೆಲೆ ಕ್ವಿಂಟಾಲ್‌ಗೆ 50 ರೂ.ಗೆ ಕುಸಿದಿದೆ. ರೈತರು ಬೀದಿಗೆ ಚೆಲ್ಲುತ್ತಿದ್ದಾರೆ. ಮಹರಾಷ್ಟ್ರದಲ್ಲಿ ರೈತನೊಬ್ಬ ಒಂದು ಎಕರೆ ಎಲೆಕೋಸನ್ನು ಬೆಳೆದು ಪ್ರತಿಯಾಗಿ ಕೇವಲ 6000 ರೂ. ಮಾತ್ರ ಗಳಿಸಿದ. ಮಾಮೂಲಿನ ಸಂದರ್ಭದಲ್ಲಿ 80,000 ರೂ. ದೊರಕುತ್ತಿತ್ತು, ಜಾಗತೀಕರಣದ ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಯ ಫಲವಾಗಿ ಕಳೆದ 20 ವರ್ಷಗಳಲ್ಲಿ 3 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಮೇಲೆ ಈ ನೋಟಿನ ಅಮಾನ್ಯದ ಫಲವಾಗಿ ಗಾಯದ ಮೇಲೆ ಬರೆ ಎಳೆದಂತಿದೆ. ಮೊನ್ನೆ ಕೇಂದ್ರ ಸರ್ಕಾರವು ಗೋದಿಯ ಆಮದಿನ ಮೇಲಿದ್ದ ಶೇಕಡ 10 ಡ್ಯೂಟಿ ತೆರಿಗೆಯನ್ನು ಸಂಪೂರ್ಣ ರದ್ದುಗೊಳಿಸಿದೆ. ಇದು ಸ್ಥಳೀಯ ಗೋಧಿ ಉತ್ಪಾದನೆಯ ಮಾರಾಟಕ್ಕೆ ದೊಡ್ಡ ಹೊಡೆತ ಕೊಡುತ್ತದೆ. ಕಳಪೆ ಗುಣಮಟ್ಟದ ಗೋದಿಯ ಆಮದು ಹೆಚ್ಚಾಗುತ್ತದೆ. ಈ ತೆರಿಗೆ ರದ್ದತಿಯ ನಡೆಗೆ ಯಾವುದೇ ಕಾರಣಗಳನ್ನು ನೀಡಿಲ್ಲ, ಆದರೆ ಇದು ರೈತರಿಗೆ ನೇಣುಗಂಬವಾಗುವುದರಲ್ಲಿ ಅನುಮಾನವಿಲ್ಲ.

ಕಪ್ಪುಹಣದಿಂದ ಪ್ರಾರಂಭಗೊಂಡು ಮಧ್ಯದಲ್ಲಿ ಕಪ್ಪುಹಣ ಸಕ್ರಮಗೊಳಿಸುವ ಯೋಜನೆಗೆ ಬಂದು ತಲುಪಿ ಒಂದು ತಿಂಗಳ ನಂತರ ಈಗ ನಗದುರಹಿತ ಆರ್ಥಿಕತೆ ಎನ್ನುವಲ್ಲಿಗೆ ಬಂದು ತಲುಪಿದೆ. ಇದರ ಕುರಿತಾಗಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಯಾವುದು ಕಪ್ಪುಹಣ, ಯಾವುದು ಕಾಳದಂಧೆ ಎನ್ನುವುದರ ಕುರಿತಾಗಿ ಆರ್ಥಿಕ ತಜ್ಞರು ವಿವರಿಸಿದ್ದಾರೆ. ಸಂಪತ್ತನ್ನು ಭೂಮಿ, ಆಸ್ತಿ ಬಂಗಾರ, ಮನೆ, ಷೇರು ಮಾರುಕಟ್ಟೆ ಅಥವಾ ಕರೆನ್ಸಿ ರೂಪದಲ್ಲಿ ಕೂಡಿಡುತ್ತಾರೆ. ಇದರಲ್ಲಿ ಕರೆನ್ಸಿ ಒಂದು ಭಾಗ ಮಾತ್ರ. ಜಾಗತೀಕರಣದ ಮುಕ್ತ ಮಾರುಕಟ್ಟೆಯ ಈ ದಿನಗಳಲ್ಲಿ ವ್ಯಕ್ತಿಯೊಬ್ಬನ ಬಳಿ ಇರುವ ಇಡೀ ಸಂಪತ್ತಿನಲ್ಲಿ ಶೇಕಡಾ 1 ಪ್ರಮಾಣದಲ್ಲಿ ಮಾತ್ರ ಕರೆನ್ಸಿ ಇರುತ್ತದೆ. ಉಳಿದೆಲ್ಲವನ್ನೂ ಕಾಳದಂಧೆ ಅಥವಾ ಕಪ್ಪುಹಣದ ವ್ಯವಹಾರ ಮೂಲಕ ಸಂಪತ್ತನ್ನು ಕೂಡಿಡುತ್ತಾರೆ. ಖ್ಯಾತ ಅರ್ಥ ಶಾಸ್ತ್ರಜ್ಞ ಅರುಣ್ ಕುಮಾರ್ ಅವರು "ಕಪ್ಪು ಆರ್ಥಿಕತೆ ನನ್ನ ಅಂದಾಜಿನ ಅನುಸಾರ ಜಿಡಿಪಿಯ ಶೇಕಡಾ 62 ಪ್ರಮಾಣದಲ್ಲಿದೆ. ಈಗಿನ ಜಿಡಿಪಿಯ 150 ಲಕ್ಷ ಕೋಟಿಯಲ್ಲಿ ನಾವು 93 ಲಕ್ಷ ಕೋಟಿ ಕಪ್ಪು ಆದಾಯವನ್ನು ಉತ್ಪಾದಿಸುತ್ತಿದ್ದೇವೆ. ಕಪ್ಪುಹಣದ ಸಂಪತ್ತು ಜಿಡಿಪಿಗಿಂತ ದುಪ್ಪಟ್ಟು ಅಂದರೆ 300 ಲಕ್ಷ ಕೋಟಿಯಷ್ಟಿದೆ. ಇದರಲ್ಲಿ 3 ಲಕ್ಷ ಕೋಟಿಯನ್ನು ಕಪ್ಪು ಹಣದ ರೂಪದಲ್ಲಿ ಕೂಡಿಟ್ಟಿದ್ದಾರೆ. ಅಂದರೆ ಶೇಕಡಾ 1 ಪ್ರಮಾಣದಲ್ಲಿ ಮಾತ್ರ ಕಪ್ಪು ಹಣವಿದೆ. ಮತ್ತೊಂದು ಮುಖ್ಯ ವಿಷಯವೆಂದರೆ ಕಪ್ಪು ಆದಾಯ, ಕಪ್ಪು ಹಣ, ಕಪ್ಪು ಸಂಪತ್ತು ಈ ಮೂರು ಬೇರೆ ಬೇರೆ. ನಿಮ್ಮ ಕಪ್ಪು ಸಂಪತ್ತಿನಲ್ಲಿ ಕಪ್ಪು ಹಣದ ಪ್ರಮಾಣ ಕೇವಲ ಶೇಕಡಾ 1 ಪ್ರಮಾಣ ಮಾತ್ರ. ಅಂದರೆ ನೀವು 3 ಲಕ್ಷ ಕೋಟಿಯನ್ನು ನಿರ್ಮೂಲನೆ ಮಾಡಿದರೆ ನೀವು ಕಪ್ಪು ಸಂಪತ್ತಿನಿಂದ ಕೇವಲ ಶೇಕಡಾ 1 ಪ್ರಮಾಣದಷ್ಟು ಮತ್ತು ಕಪ್ಪು



ಆದಾಯದಿಂದ ಶೇಕಡಾ 3 ಪ್ರಮಾಣದಷ್ಟು ಮಾತ್ರ ವರ್ಜಿಸುತ್ತೀರಿ. ಆದರೆ ನೀವು ಆ 3 ಲಕ್ಷ ಕೋಟಿಯನ್ನಾದರೂ ಸಂಪೂರ್ಣ ನಿರ್ಮೂಲನೆ ಮಾಡುತ್ತೀರಾ? ಇಲ್ಲ, ಆ ಮೂರು ಲಕ್ಷ ಕೋಟಿಯನ್ನು ಕಳೆದ ಒಂದು ತಿಂಗಳಲ್ಲಿ ಬಂಗಾರದ ರೂಪದಲ್ಲಿ ಪರಿವರ್ತಿಸಿದ್ದಾರೆ. ಒಬ್ಬ ಉದ್ದಿಮೆದಾರ ತನ್ನ ಕೆಲಸಗಾರರಿಗೆ ಮೂರು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟಿದ್ದಾನೆ. ಆ ಕೆಲಸಗಾರರು ಆ ಮೂರು ತಿಂಗಳ ಸಂಬಳದ ಹಣವನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡುತ್ತಾರೆ. ಅಲ್ಲಿಗೆ ನಿಮ್ಮ ಕಪ್ಪು ಹಣವು ಸಂಪೂರ್ಣವಾಗಿ ಉಪಯೋಗಿಸಲ್ಪಟ್ಟಿತು" ಎಂದು ವಿವರಿಸುತ್ತಾರೆ.

ಮರೆಯುವ ಮುನ್ನ

ಇಲ್ಲಿ ಈ ಜಾಗತೀಕರಣ ಭಾರತದಲ್ಲಿ ಬದಲಾದ ಅರ್ಥವ್ಯವಸ್ಥೆ ಮತ್ತು ಅದರ ಲೆಕ್ಕಾಚಾರವನ್ನು ಅರಿಯದೇ ಹೋದರೆ ನಾವು ಸುಮ್ಮನೆ ಪೊದೆಯನ್ನು ಬಡಿಯುತ್ತಿರುತ್ತೇವೆ. ಈ ಮುಕ್ತ ಮಾರುಕಟ್ಟೆಯ ನವ ಉದಾರೀಕರಣ ವ್ಯವಸ್ಥೆಯಲ್ಲಿ ಬಂಡವಾಳಶಾಹಿಯು ತನ್ನ ಉದ್ಯಮವನ್ನು, ವಹಿವಾಟನ್ನು ವಿಸ್ತರಿಸುತ್ತೇನೆ ಎಂದು ಯೋಜನೆಗಳನ್ನು ಪ್ರಕಟಿಸುತ್ತಾ ಹೋಗುತ್ತಾನೆ. ಅದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಲಾಗುತ್ತದೆ. ಈ ವಹಿವಾಟಿನ ವಿಸ್ತರಣೆಗಾಗಿ ಹೆಚ್ಚು ಹೆಚ್ಚು ಹಣವನ್ನು ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳಿಂದ ಸಾಲವನ್ನು ಪಡೆದಷ್ಟು ಅದನ್ನು ಆರ್ಥಿಕ ಅಭಿವೃದ್ಧಿ ಎಂದೇ ಕರೆಯುತ್ತಾರೆ. ಏಕೆಂದರೆ ಆ ಮೂಲಕ ಈ ಬಂಡವಾಳಶಾಹಿಯು ಸಣ್ಣಸಣ್ಣ ಉದ್ಯಮಗಳನ್ನು ಸೃಷ್ಟಿಸುತ್ತಾನೆ ಮತ್ತು ಈ ಒಂದು ವ್ಯವಹಾರದ ವರ್ತುಲವು ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರವಾಗಿರುತ್ತದೆ ಎಂದು ಮುಕ್ತ ಮಾರುಕಟ್ಟೆಯ ತಜ್ಞರು ವಿಶ್ಲೇಷಿಸುತ್ತಾರೆ ಮತ್ತು ಇದನ್ನು ಎಲ್ಲಾ ಹಣಕಾಸು ಮಂತ್ರಿಗಳು (ಪಕ್ಷಾತೀತವಾಗಿ) ಅನುಮೋದಿಸುತ್ತಾರೆ. ಆದರೆ ಇದೇ ಸಂದರ್ಭದಲ್ಲಿ ಉದ್ಯೋಗ ಹೆಚ್ಚಳದ ಬದಲಾಗಿ ತೀವ್ರಗತಿಯಲ್ಲಿ ನಿರುದ್ಯೋಗ ಶುರುವಾಗುತ್ತಿರುವುದನ್ನು ಯಾರೂ ಗಮನಿಸುವುದಿಲ್ಲ. ಅಂದರೆ ಮಸಲ ಒಬ್ಬ ದೊಡ್ಡ ಉದ್ಯಮಿಯು ತನ್ನ ವ್ಯಾಪಾರಕ್ಕೆ ಆಧುನಿಕ ತಂತ್ರಜ್ಞಾನದ ಯಂತ್ರಗಳನ್ನು ಖರೀದಿಸಿ ಕಡಿಮೆ ಕಾರ್ಮಿಕರನ್ನು ಬಳಸಿಕೊಂಡು ಹೆಚ್ಚಿನ ಉತ್ಪಾದನೆಯನ್ನು ಕೊಡುತ್ತೇನೆ; ಇದರಿಂದ ಜಿಡಿಪಿ ವೃದ್ಧಿಯಾಗುತ್ತದೆ ಎಂದ ನೀದಿ ಬ್ಯಾಂಕುಗಳಿಂದ ಸಾಲ ಪಡೆಯುತ್ತಾ ವಾಸ್ತವದಲ್ಲಿ ತಂತ್ರಜ್ಞಾನದ ಹೆಸರಿನಲ್ಲಿ ನಿ ಸೃಷ್ಟಿಯಾಗುತ್ತಿರುತ್ತದೆ. ಆದರೆ ಇದನ್ನು ಸರ್ಕಾರ ಪರಿಗಣಿಸುವುದಿಲ್ಲ, ಮತ್ತೊಂದೆಡೆ ಗ್ರಾಮೀಣ ಕೃಷಿ ಚಟುವಟಿಕೆಗಳು ಕುಸಿದು ಅಲ್ಲಿನ ಜನಸ ಪಟ್ಟಣಗಳಿಗೆ ವಲಸೆ ಬರತೊಡಗುತ್ತಾರೆ. ದೊಡ್ಡ ಹಾಗೂ ಸಣ್ಣ ಉದ್ಯಮಗಳು, ರಿಯಲ್ ಗುತ್ತಿಗೆದಾರರು ಕಾಂಟ್ರಾಕ್ಟ್ ರೂಪದಲ್ಲಿ ನ ನೇಮಿಸಿಕೊಳ್ಳುತ್ತಾರೆ. ಆದರೆ ಈ ಗುತ್ತಿಗೆ ಕೂಲಿ ಇಲ್ಲಿ ಉದ್ಯೋಗ ಭದ್ರತೆ ಇರುವುದಿಲ್ಲ, ವೇ ಇರುವುದಿಲ್ಲ, ಇವರೆಲ್ಲ ಸದಾ ಅನಿಶ್ಚತೆಯಲ್ಲಿ ಹೈರ್ ಅಂಡ್ ಫೈರ್ ನೀತಿಯಡಿ ಅಸಹಾಯಕರಾಗಿರುತ್ತಾರೆ. ಆದರೆ ಈ ನವಉದ ಆರ್ಥಿಕ ನೀತಿಯು ಈ ಅಸಮಾನತೆ, ನಿರುದ ಆರ್ಥಿಕ ಹಿಂಜರಿತ ಎಂದು ಪರಿಗಣಿಸುವ ಇಡೀ ವ್ಯವಸ್ಥೆಯು ಆ ಬಂಡವಾಳಶಾಹಿಯು ಹೂಡಿದ, ಎಲ್ಲಿ ವ್ಯಾಪಾರ ವಿಸ್ತರಿಸಿದ ಎನ್ನುವು ಕೇಂದ್ರೀಕೃತವಾಗಿರುತ್ತದೆ. ಹೀಗಾಗಿಯೇ ಗ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ತ ವರ್ಷಗಳ ಅವಧಿಯಲ್ಲಿ ಗುಜರಾತ್‌ಗೆ ಎಷ್ಟು ಹರಿದುಬಂತು, ಎಷ್ಟು ಹೂಡಿಕೆಯಾಗಿದೆ ಎಂ ಕೊಚ್ಚಿಕೊಳ್ಳುವುದನ್ನೇ ನಮ್ಮ ಮಾಧ್ಯಮಗಳು ಎಂದು ಬಣ್ಣಿಸಿದವು. ಆದರೆ ಇಂದು ಗು ಅತಿ ಹೆಚ್ಚಿನ ಪ್ರಮಾಣದಲ್ಲಿ ನಿರುದ್ ಅಪೌಷ್ಟಿಕತೆಯಿದೆ, ಅತಿ ಹೆಚ್ಚು ಗುತ್ತಿ ಕಾರ್ಮಿಕರಿದ್ದಾರೆ. ಅಂದು ಗುಜರಾತ್‌ಗೆ ಆಗಿ ಇಂಡಿಯಾ ಅನುಭವಿಸುತ್ತಿದೆ.

ಇಂದು ದೇಶದ 64 ಬಂಡವಾಳಶಾ ಬರಬೇಕಿದ್ದ 7000 ಕೋಟಿಗೂ ಹೆಚ್ಚಿನ ವಸೂಲಿಯಾಗದ ಸಾಲ ಎಂದು ಬ್ಯಾಂಕುಗಳು ಇಂದು ದಿವಾಳಿಯಾಗುವ ಸ್ಥಿತಿಯಲ್ಲಿರುವ ಬ್ಯಾಂಕುಗಳಿಗೆ ಆಕ್ಸಿಜನ್ ನೀಡಲು ಈ ನೋಟ ಎನ್ನುವ ಮರೆಮೋಸದ ನಾಟಕ ನಡೆಯುತ್ತಿ 70 ಜನಸಂಖ್ಯೆಯು ಬದುಕಿನೊಂದಿಗೆ ಕಳಚಿಕೊಂಡ ಎಲೈಟ್ ಗುಂಪಿನ ವ್ಯಾಪಾರದ ಹೆಸರಿನಲ್ಲಿ ನಡೆದ ಹಗಲು ದರೋಡೆಗೆ ಇಂದ 70ರಷ್ಟು ಜನತೆ ಬೆಲೆ ತೆರುತ್ತಿದ್ದಾರೆ. ಬಂಡವಾಳಶಾಹಿಗಳ ಅನುಕೂಲಕ್ಕಾಗಿ ನಡೆದ ಈ ಅಮಾನ್ಯ ಎನ್ನುವ ಹಗಲು ದರೋಡೆ ಮುಂದಿನ ಜನಸಾಮಾನ್ಯರ ಖಾಸಗಿ ಬದುಕನ್ನು ಸಹ ನಾಶ ಮಾರ್ಚ 2015ರಲ್ಲಿ ಬಿಡುಗಡೆಯಾದ ಮಾಹಿತಿ ಇಂಡಿಯಾದ 10 ಸೂಪರ್ ಶ್ರೀ ಕಾರ್ಪೋರೇಟ್‌ಗಳು 7.3 ಲಕ್ಷ ಕೋಟಿಯಷ್ಟು ಬ್ಯಾಂಕುಗಳಿಂದ ಸಾಲವಾಗಿ ಪಡೆದಿದ್ದಾರೆ. ಅಮಾನ್ಯದಿಂದ ಆರ್‌ಬಿಐ ಶೇಕಡಾ 1 ಬಡ್ಡಿಯನ್ನು ಕಡಿತಗೊಳಿಸುವ ಸಾಧ್ಯತೆಗಳಿ ಅನಾಮತ್ತಾಗಿ ಈ 10 ಬಕಾಸುರ ಬಂಡವಾಳ 7,300 ಕೋಟಿಯಷ್ಟು ಉಳಿತಾಯವಾಗು ಬಂಡವಾಳಶಾಹಿಗಳ ನೇತಾರ ಮೋದಿಯ ಆರ್ಥಿಕ ನೀತಿಗಳು ಇದೇ ದಿಕ್ಕಿನಲ್ಲಿ ಮುಂ ದೇಶದ ಸಂಪತ್ತು, ಬಡಜನರ ಬಳಿ ಉಳಿದ ಸಂಪತ್ತು ನೇರವಾಗಿಯೇ ಈ ಸೂಪರ್ ಶ್ರೀ ವರ್ಗಾವಣೆಯಾಗುತ್ತದೆ.

ಇಂದು ಈ ಬಕಾಸುರ ಬಂಡವಾಳ ವಹಿವಾಟನ್ನು ದೇಶದ ಆರ್ಥಿಕ ಸ್ಥಿತಿಯೆಂದು ಮಾನದಂಡವನ್ನಾಗಿ ಬಳಸಿಕೊಳ್ಳುತ್ತಿರುವ ಈ ಮಾರುಕಟ್ಟೆಯ ಎಲ್ಲಾ ನೀತಿಗಳನ್ನು ತಿರಸ್ಕರಿ ಹಣಕಾಸು ನಿರ್ವಹಣೆ ಮತ್ತು ಆರ್ಥಿಕ ಮರುಪರಿಶೀಲನೆ ನಡೆಸದ ಹೊರತು ಈ ಬಿ ಪರಿಹಾರವಿಲ್ಲ. ಇಲ್ಲಿ ಆರ್ಥಿಕ ನಿರ್ವಹಣೆ ಐಡಿಯಾಲಜಿಯ ತೊಂದರೆ ಇದೆ. ರಿಯಲ್ ಮಾಲ್‌ಗಳು, ಸಾವಿರಾರು ಕೋಟಿ ಬಂ ಉದ್ಯಮಗಳು ಎನ್ನುವ ಕಾಳದಂಧೆಯ ಮ ಪ್ರೋತ್ಸಾಹ ನೀಡುತ್ತಾ ಮತ್ತೊಂದೆಡೆ ಈ ಅಮಾನ್ಯದ ಮೂಲಕ ಆರ್ಥಿಕ ಸುಭದ್ರತೆ ಸಾ ಎಂದು ಹೇಳುತ್ತಿರುವ ಪ್ರಧಾನಿ ನರೇಂದ್ರ ಮೋ ಕೇಂದ್ರ ಸರ್ಕಾರದ ಈ ಎಲ್ಲಾ "ಸರ್ಜಿಕಲ್ ಅಸಹಾಯಕ ಬಡಜನತೆಯ ಮೇಲೆ ಮಾತ್ರ ಸತ್ಯ ಜನತೆಗೆ ಅರಿವಾಗಬೇಕಾಗಿದೆ. ಮೂಡಿಸಬೇಕಾಗಿದೆ. ಇಲ್ಲದಿದ್ದಲ್ಲಿ ಮುಂದಿನ ದೇಶವು ಯಾತನಾ ಶಿಬಿರದ ಅಡೊಂಬಲವಾಗ ಅನುಮಾನವಿಲ್ಲ.

■ ಬಿ.ಶ್ರೀಪಾದ

ಭ್ರಷ್ಟಾಚಾರ ನಿರ್ಮೂಲನ

ಬಾಯಲ್ಲಿ ಘೋಷಣೆ ಬಗಲಲ್ಲಿ ಪೋಷಣೆ

"ನೋಟು ರದ್ದತಿಯಿಂದ ಕೇವಲ ಭ್ರಷ್ಟಾಚಾರಿಗಳಿಗೆ ...ಷ್ಟವಾಗಿದೆ....." ಈ ನುಡಿಮುತ್ತನ್ನು ಉದುರಿಸಿದ ...ಹಾನುಭಾವ ಇನ್ಯಾರೂ ಅಲ್ಲ, ದೇಶದ ಪ್ರಧಾನಮಂತ್ರಿಯ ...ಸ್ಥಾನದಲ್ಲಿರುವ ವ್ಯಕ್ತಿ. ಮೊನ್ನೆ ಡಿಸೆಂಬರ್ 11ರಂದು ಉತ್ತರ ...ಪ್ರದೇಶದ ಬಹರಾಯಿಚ್‌ನಲ್ಲಿ ಬಿಜೆಪಿಯ ಪರಿವರ್ತನಾ ...ಯಾತ್ರೆಯ ಸಂದರ್ಭದಲ್ಲಿ ಆತನ ಬಾಯಿಂದ ಹೊರಬಿದ್ದ ...ಮಾತುಗಳಿವು (ಡೆಕ್ಕನ್ ಹೆರಾಲ್ಡ್, 12.12.2016). ಈ ...ಮಾತುಗಳು ಎರಡು ವಿಷಯಗಳನ್ನು ಸ್ಪಷ್ಟವಾಗಿ ಎತ್ತಿ ...ತೋರಿಸುವುದರೊಂದಿಗೆ ಆತನೋರ್ವ ಸಂವೇದನಾರಹಿತ ...ವ್ಯಕ್ತಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸುತ್ತವೆ. ...ಒಂದು, ತನ್ನ ಈ "ಮಹಾಯಜ್ಞ" ಇದುವರೆಗೆ 80ಕ್ಕೂ ... ಅಮಾಯಕ ಜನರನ್ನು ನೇರ ಆಹುತಿಯಾಗಿಸಿರುವ ...ದು ಆತನಿಗೆ ಸಮಸ್ಯೆಯೆಂದು ಅನಿಸದಿರುವುದು. ಎರಡು, ... ಈ "ಸರ್ಜಿಕಲ್ ದಾಳಿ"ಯ ಪರಿಣಾಮವಾಗಿ ಜನ...ಸಾಮಾನ್ಯರು ಎದುರಿಸುತ್ತಿರುವ ನಾನಾ ಸಮಸ್ಯೆಗಳಿಗೆ ಆತ ...ಕಿವಿ ಕುರುಡಾಗಿರುವುದು. ಲೋಕಸಭೆ ಯನ್ನು ಕಡೆಗಣಿಸಿ ...ಸಾರ್ವಜನಿಕ ಸಭೆಗಳಲ್ಲಿ ಮಾತಾಡುವ ದೇಶದ ಪ್ರಧಾನಿ ...ಯು ತೀವ್ರ ಸಮಸ್ಯೆಗೊಳಗಾಗಿರುವ ಅಸಂಘಟಿತ ವಲಯ, ...ಕಾವಲಯ, ರೈತರು, ಕಾರ್ಮಿಕರು ಮತ್ತು ಕೋಟ್ಯಂತರ ...ಸಾಮಾನ್ಯ ಕುಟುಂಬಗಳ ಬಗ್ಗೆ ತುಟಿ ಬಿಚ್ಚದಿರುವುದು ...ಹಳ್ಳಿ ಖೇದಕರ. ದಿನಕ್ಕೊಂದು ನಿಯಮಗಳನ್ನು ಮಾಡುತ್ತಾ ...ಸಾಮಾನ್ಯರಿಗೆ ಈ ಪರಿಯ ಸಮಸ್ಯೆಗಳನ್ನು ತಂದೊಡ್ಡಿದ ...ಆತ ಈಗ ಫೋಕಸ್‌ಅನ್ನು ನಗದುರಹಿತ ವ್ಯವಹಾರಕ್ಕೆ ...ವರ್ಗಾಯಿಸಲು ಕಾರಣವೇನೆಂದು ಆತ ತಿಳಿಸುತ್ತಿಲ್ಲ. ...ಅಲ್ಲದೆ ಕಾಳಧನದ ಪ್ರಮಾಣ ಜಿಡಿಪಿಯ ಸುಮಾರು ...ಶೇಕಡಾ 6ನ್ನು ಮೀರದಿರುವಾಗ ನೋಟು ರದ್ದತಿ ಯಾಕೆ ...ಅನಿವಾರ್ಯವಾಯಿತು, ಭ್ರಷ್ಟಾಚಾರ, ಖೋಟಾನೋಟು, ...ಭಯೋತ್ಪಾದನೆಗಳನ್ನು ನಿಗ್ರಹಿಸಲು ಅನ್ಯ ಮಾರ್ಗಗಳು ...ಇಲ್ಲವೆ ಎಂಬ ಪ್ರಶ್ನೆಗೂ ಉತ್ತರ ಇಲ್ಲ.

...ಮೋದಿ ಸರ್ಕಾರ ನಿಜಕ್ಕೂ ಪ್ರಾಮಾಣಿಕವಾಗಿದ್ದರೆ ...ಕಪ್ಪುಹಣವನ್ನು ಸಾಮಾನ್ಯ ಜನರಿಗೆ ಬವಣೆಯಾಗದ ...ರೀತಿಯಲ್ಲಿ ಹೊರತೆಗೆಯಬಹುದಿತ್ತು, ಜತೆಗೆ ಕಪ್ಪುಹಣದ ...ಮೂಲವಾದ ಕಪ್ಪು ದಂಧೆಗಳನ್ನು ನಿಲ್ಲಿಸಲು ಸೂಕ್ತ ಕ್ರಮ ...ಕೈಗೊಳ್ಳಬಹುದಿತ್ತು. ತೆರಿಗೆ ಇಲಾಖೆ, ಕಂದಾಯ ಇಲಾಖೆ, ...ಜಾರಿ ನಿರ್ದೇಶನಾಲಯ, ಭ್ರಷ್ಟಾಚಾರ ನಿಗ್ರಹ ದಳ ಇವೇ ...ಮೊದಲಾದ ಇಲಾಖೆಗಳನ್ನು ಬಲಪಡಿಸಿ ಪೂರ್ತಿ ಸ್ವಾತಂತ್ರ್ಯ ...ಕೊಟ್ಟರೆ, ಇವರ ಕಾರ್ಯಾಚರಣೆಗಳಲ್ಲಿ ಯಾವ ಹಸ್ತಕ್ಷೇಪವೂ ...ಇಲ್ಲದಂತೆ ನೋಡಿಕೊಂಡರೆ ಭ್ರಷ್ಟಾಚಾರವನ್ನು ತಡೆಗಟ್ಟಲು ...ಸಾಧ್ಯವಿಲ್ಲವೆ? ಕೇಂದ್ರದಲ್ಲಿ ಲೋಕಪಾಲ, ರಾಜ್ಯಗಳಲ್ಲಿ ...ಲೋಕಾಯುಕ್ತರನ್ನು ನೇಮಿಸಿ ಅವರಿಗೆ ಭ್ರಷ್ಟ ಅಧಿಕಾರಿ, ...ರಾಜಕಾರಣಿಗಳ ವಿರುದ್ಧ ಪ್ರಕರಣ ದಾಖಲಿಸುವ ಸಕಲ ...ಅಧಿಕಾರ ಕೊಟ್ಟರೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ...ಸಾಧ್ಯವಿಲ್ಲವೆ? ವಿದೇಶೀ ತೆರಿಗೆ ತಾಣಗಳ ಜತೆ ಸೂಕ್ತ ...ಒಪ್ಪಂದಗಳನ್ನು ಮಾಡಿಕೊಂಡರೆ ತೆರಿಗೆಗಳ್ಳರು ಅಲ್ಲಿ ...ಬಚ್ಚಿಟ್ಟಿರುವ ಸಂಪತ್ತನ್ನು ಭಾರತಕ್ಕೆ ಮರಳಿ ತರಲಾಗುವು...ದಿಲ್ಲವೆ? ರಾಜಕೀಯ ಪಕ್ಷಗಳು ಸ್ವೀಕರಿಸುವ ದೇಣಿಗೆಗಳ ...ವಿಚಾರದಲ್ಲಿ ಪಾರದರ್ಶಕತೆಯನ್ನು ಕಡ್ಡಾಯಗೊಳಿಸಿದರೆ ...ಕಪ್ಪುಹಣಕ್ಕೆ ಕಡಿವಾಣ ಬೀಳುವುದಿಲ್ಲವೆ? ಭ್ರಷ್ಟಾಚಾರ ...ವಿರೋಧ ಕಾಯ್ದೆಯನ್ನು ತೆಳುಗೊಳಿಸದೆ ಕಟ್ಟುನಿಟ್ಟಾಗಿ ...ಜಾರಿಗೊಳಿಸಿದರೆ ಭ್ರಷ್ಟಾಚಾರಕ್ಕೆ ಇತಿಶ್ರೀ ಹಾಡಲು ...ಸಾಧ್ಯವಿಲ್ಲವೆ? ಖಂಡಿತಾ ಇದೆ. ಆದರೆ ಸರ್ಕಾರದಲ್ಲಿ ...ಪ್ರಾಮಾಣಿಕತೆ ಮತ್ತು ಇಚ್ಛಾಶಕ್ತಿ ಎರಡೂ ಇಲ್ಲ. ವಾಸ್ತವದಲ್ಲಿ ...ಸರ್ಕಾರದ ಅಸಲಿ ಧೋರಣೆ ಬೇರೆಯೆ ಇದೆ.

ಭ್ರಷ್ಟಾಚಾರ, ಕಪ್ಪುಹಣದ ಬಗ್ಗೆ ಅಸಲಿ ಧೋರಣೆ

ತೆರಿಗೆ ತಾಣಗಳಲ್ಲೊಂದಾದ ಸ್ವಿಜರ್‌ಲ್ಯಾಂಡ್ ಜತೆ ...ಮೋದಿ ಸರ್ಕಾರ ಮಾಡಿಕೊಂಡಿರುವ ಒಪ್ಪಂದವನ್ನು ...ಯಾರಾದರೂ ನೋಡಿದರೆ ಜನರು ಸ್ತಂಭೀಭೂತರಾಗುವುದರಲ್ಲಿ ...ಸಂದೇಹವಿಲ್ಲ. ಏಕೆಂದರೆ ಬಚ್ಚಿಟ್ಟ ಕಪ್ಪುಹಣವನ್ನೆಲ್ಲ ...ಹೊರಹಾಕುವೆ ಎನ್ನುವ ಇದೇ ಸರ್ಕಾರ ಈ ಮೂಲಕ ...ದೊಡ್ಡ ದೊಡ್ಡ ಕಾಳಧನಿಕರು ಸ್ವಿಜರ್‌ಲ್ಯಾಂಡಿನ ...ಬ್ಯಾಂಕುಗಳಲ್ಲಿರುವ ತಮ್ಮ ಕಪ್ಪುಹಣವನ್ನು ಮತ್ತಷ್ಟು ಸುರಕ್ಷಿತ ...ತಾಣಗಳಿಗೆ ವರ್ಗಾಯಿಸಲು ಸಕಲ ಅನುಕೂಲತೆಗಳನ್ನು ...ಮಾಡಿಕೊಟ್ಟಿದೆ! ಎರಡನೆಯದಾಗಿ, ರಾಜಕೀಯ ಪಕ್ಷಗಳಿಗೆ ...ಹರಿದುಬರುವ ದೇಣಿಗೆಗಳ ಮೂಲ ಮತ್ತು ಪರಿಮಾಣ...ವನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಿದರೆ ತನ್ನ ಗುಟ್ಟೆಲ್ಲಾ ...ರಟ್ಟಾಗಲಿದೆ ಎನ್ನುವ ಕಾರಣಕ್ಕೆ ಪಾರದರ್ಶಕತೆಯನ್ನೂ ...ವಿರೋಧಿಸುತ್ತಿದೆ! ಮೂರನೆಯದಾಗಿ, ಭ್ರಷ್ಟಾಚಾರ ನಿರೋಧ ...ಕಾಯ್ದೆಯನ್ನು ಭ್ರಷ್ಟಾಚಾರಿಗಳಿಗೇ ನೆರವಾಗುವ ರೀತಿಯಲ್ಲಿ ...ತಿದ್ದುಪಡಿ ಮಾಡಿ ಇದೀಗ ಅದನ್ನು ಅನುಮೋದನೆಗಾಗಿ ...ಸಂಸತ್ತಿನ ಮುಂದೆ ಇರಿಸಿದೆ! ಈ ಕಾಯ್ದೆ ಎಲ್ಲಾದರೂ ...ಜಾರಿಗೊಂಡಲ್ಲಿ ಭ್ರಷ್ಟ ರಾಜಕಾರಣಿ ಮತ್ತು ಅಧಿಕಾರಿಗಳ ...ಕೂಟಗಳಿಗೆ ಎಲ್ಲಾ ವಿಧದ ಗಂಭೀರ ತನಿಖೆಗಳಿಂದ ರಕ್ಷಣೆ ...ದೊರೆಯಲಿದೆ!

ಹುಸಿದು ಸ್ವಿಜರ್‌ಲ್ಯಾಂಡ್ ಜತೆಗಿನ ಒಪ್ಪಂದ

...ಒಇಸಿಡಿ ರಾಷ್ಟ್ರಗಳು (Organisation for Economic Co-operation and Development; OECD) ಮತ್ತು ಐರೋಪ್ಯ ದೇಶಗಳು ಒಂದು ಜಂಟಿ ಒಡಂಬಡಿಕೆ ಮಾಡಿಕೊಂಡಿವೆ. ಅದನ್ನು "ತೆರಿಗೆ ವಿಚಾರಗಳಲ್ಲಿ ಪರಸ್ಪರ ಆಡಳಿತಾತ್ಮಕ ನೆರವಿನ ಒಡಂಬಡಿಕೆ" ಎಂದು ಕರೆಯಲಾಗಿದೆ. ಅದರ ಉದ್ದೇಶ: 1) ತೆರಿಗೆ ವಿಚಾರಗಳಲ್ಲಿ ಪರಸ್ಪರರಿಗೆ ನೆರವಾಗುವುದು. 2) ತೆರಿಗೆ ಕಾಯ್ದೆಗಳನ್ನು ಅನ್ವಯಿಸುವ ಮತ್ತು ಒತ್ತಾಯಪೂರ್ವಕವಾಗಿ ಹೊರಿಸುವ ವಿಷಯದಲ್ಲಿ ಸದಸ್ಯ ರಾಷ್ಟ್ರಗಳು ತಮ್ಮ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವ ಸಲುವಾಗಿ ಪರಿಣಾಮಕಾರಿಯಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳುವುದನ್ನು ಖಚಿತಪಡಿಸುವುದು. ಸದರಿ ಒಡಂಬಡಿಕೆಗೆ ಕೆಲವೊಂದು ತಿದ್ದುಪಡಿ ಮಾಡಲಾಗಿದ್ದು ಸ್ವಿಜರ್‌ಲ್ಯಾಂಡ್ ಸೆಪ್ಟೆಂಬರ್ 2016ರ ಕೊನೆಯಲ್ಲಿ ಅದನ್ನೆಲ್ಲ ಅನುಮೋದಿಸಿದೆ ಮತ್ತು ಅದು ಅಧಿಕೃತವಾಗಿ ಜನವರಿ 2017ರಿಂದ ಜಾರಿಗೆ ಬರಲಿದೆ. ಪನಾಮಾ ದೇಶ ಸ್ವಿಜರ್‌ಲ್ಯಾಂಡ್‌ಗೂ ಮೊದಲೆ ಈ ಒಡಂಬಡಿಕೆಯನ್ನು ಒಪ್ಪಿಕೊಂಡಿದೆ. ಸ್ವಿಜರ್‌ಲ್ಯಾಂಡ್‌ನ ಜಿನೀವಾದ ಎಚ್‌ಎಸ್‌ಬಿಸಿ ಬ್ಯಾಂಕು ಮತ್ತು "ಪನಾಮಾ ಪೇಪರ್ಸ್" ಮೂಲಕ ಸೋರಿಕೆಯಾದ ಮಾಹಿತಿಗಳಿಗೆ ವಿಶ್ವದೆಲ್ಲೆಡೆ ವ್ಯಕ್ತವಾದ ತೀಕ್ಷ್ಣ ಪ್ರತಿಕ್ರಿಯೆಗಳೆ ಇದಕ್ಕೆ ಕಾರಣ.

ವಿಷಯ ಹೀಗಿದ್ದರೂ ನಮ್ಮಲ್ಲಿ ನಡೆದಿರುವುದೇ ಬೇರೆ.



ಭಾರತ ಮತ್ತು ಸ್ವಿಜರ್‌ಲ್ಯಾಂಡ್ ಇದೇ ನವೆಂಬರ್ 22ರಂದು ಭಾರಿ ಅನುಮಾನಗಳಿಗೆ ಎಡೆಮಾಡಿಕೊಡುವಂಥ ಜಂಟಿ ಘೋಷಣೆಯೊಂದಕ್ಕೆ ಸಹಿ ಹಾಕಿವೆ. ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ ಈ ಘೋಷಣೆಗೆ ಭಾರತದ ಪರವಾಗಿ ಕೇಂದ್ರ ನೇರ ತೆರಿಗೆ ಮಂಡಳಿಯ ಅಧ್ಯಕ್ಷರು ಸಹಿ ಹಾಕಿದ್ದಾರೆ. ಘೋಷಣೆಯ ಕುರಿತು ಮಂಡಳಿ ನೀಡಿರುವ ಪತ್ರಿಕಾಹೇಳಿಕೆಯ ಪ್ರಕಾರ ಸ್ವಿಜರ್‌ಲ್ಯಾಂಡ್ ಸರಕಾರ ಭಾರತೀಯರ ಸ್ವಿಸ್ ಬ್ಯಾಂಕ್ ಖಾತೆಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು 2019ರ ಸೆಪ್ಟೆಂಬರ್ ನಂತರದಿಂದ ತನ್ನಷ್ಟಕ್ಕೆ ತಾನು ಬಿಡುಗಡೆ ಮಾಡುವುದಕ್ಕೆ ಭಾರತ ಒಪ್ಪಿದೆ. ಆದರೆ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಇದು 2018ರ ನಂತರ ತೆರೆಯಲಾಗುವ ಖಾತೆಗಳಿಗಷ್ಟೆ ಸೀಮಿತವಾಗಿದೆ! ಇದರ ಅರ್ಥ ಒಂದೇ: ಕಾಳದಂಧೆಕೋರರಿಗೆ ತಮ್ಮ ಸಂಪತ್ತನ್ನು ಬೇರೆಡೆಗೆ ಸಾಗಿಸಲು ಧಾರಾಳ ಸಮಯಾವಕಾಶ ಒದಗಿಸಲಾಗಿದೆ.

ಫ್ರಾನ್ಸ್ ಸರಕಾರ ಎಚ್‌ಎಸ್‌ಬಿಸಿ ಜಿನೀವಾ ಶಾಖೆಯಲ್ಲಿ ಖಾತೆ ಹೊಂದಿರುವ 628 ಭಾರತೀಯರ ಹೆಸರುಗಳನ್ನು ಭಾರತಕ್ಕೆ ಕೊಟ್ಟು ನಾಲ್ಕು ವರ್ಷಗಳೇ ಸಂದಿವೆ. ಅವುಗಳ ಪೈಕಿ 428 ಮಂದಿಯ ಮೇಲೆ ನೇರ ಕಾನೂನು ಕ್ರಮ ಕೈಗೊಳ್ಳಬಹುದಾಗಿದೆ. ಆದರೆ ಇದುವರೆಗೆ ಬರೀ 128 ಪ್ರಕರಣಗಳಲ್ಲಷ್ಟೆ ತೆರಿಗೆಯ ಪ್ರಮಾಣವನ್ನು ನಿರ್ಧರಿಸಲಾಗಿದೆ. ತೆರಿಗೆ ತಪ್ಪಿಸಿ, ಲೆಕ್ಕಪತ್ರ, ದಾಖಲೆಗಳನ್ನು ಒದಗಿಸಲು ವಿಫಲರಾಗಿರುವವರ ಮೇಲೆ ಒಟ್ಟು ದಾಖಲಿಸಲಾಗಿರುವ ಪ್ರಕರಣಗಳ ಸಂಖ್ಯೆ ಕೇವಲ 60.

"ಪನಾಮಾ ಪೇಪರ್ಸ್"ನಲ್ಲಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 16ನೆ ಸ್ಥಾನದಲ್ಲಿದೆ. ಕೇವಲ ಸೋರಿಕೆಯಾಗಿರುವ ಕಡತಗಳಲ್ಲಷ್ಟೆ ಉಲ್ಲೇಖವಾಗಿರುವಂಥಾ 1668 ಖಾತೆದಾರರು ಮತ್ತು 26,999 ಖಾತೆಗಳಲ್ಲಿ ಸುಮಾರು ರೂ. 26,820 ಕೋಟಿಗಳ ಕಥೆ ಹುದುಗಿದೆ. 2014ರ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಮೋದಿ ವಿದೇಶಗಳಲ್ಲಿರುವ ಅಕ್ರಮ ಸಂಪತ್ತಿನ ಮೊತ್ತ ರೂ. 6500 ಕೋಟಿ ಎಂದಿದ್ದ. ಆದರೆ ಕಪ್ಪುಹಣ ಕಾಯ್ದೆ (ಬಹಿರಂಗಪಡಿಸದಿರುವ ವಿದೇಶೀ ಆದಾಯ ಮತ್ತು ಸೊತ್ತು) ಮತ್ತು ತೆರಿಗೆ ಕಾಯ್ದೆ 2015ರ ನಂತರ ಇದೇ ಮೊತ್ತ ರೂ. 2400 ಕೋಟಿಗೆ ಇಳಿದಿದೆ! ಕೊನೆಗೆ ಏನಾಯಿತೆಂದರೆ ಸರ್ಕಾರ 2014ರ ಚುನಾವಣೆಗಳ ಸಂದರ್ಭದಲ್ಲಿ ಭಾಜಪದ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ; ತೆರಿಗೆಗಳ್ಳರ ಮೇಲೆ ಕ್ರಮ ತೆಗೆದುಕೊಳ್ಳುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಆಪಾದಿಸಿದ ಹಿರಿಯ ನ್ಯಾಯವಾದಿ ರಾಮ್ ಜೇಠ್ಮಲಾನಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ ಮೇಲೆ ವಿಶೇಷ ತನಿಖಾ ತಂಡವೊಂದನ್ನು ರಚಿಸಲಾಯಿತು. ಅದರ ವರದಿ ಇನ್ನೂ ಬಹಿರಂಗವಾಗಿಲ್ಲ. ಇದೆಲ್ಲವನ್ನು ನೋಡಿದಾಗ ತಿಳಿಯುವುದಿಲ್ಲವೆ ಕಪ್ಪುಹಣವನ್ನು ಮಟ್ಟಹಾಕುತ್ತೇವೆ ಎನ್ನುವ ಮೋದಿ ಸರ್ಕಾರದ ಮಾತು ಎಷ್ಟೊಂದು ಅಪ್ರಾಮಾಣಿಕ ಎಂದು.

ಕಾಳಧನಿಕರು ನೇರ ತೆರಿಗೆ ತಪ್ಪಿಸಿ ಆ ಹಣದ ಬಹುಪಾಲನ್ನು ವಿದೇಶಗಳಲ್ಲಿ ಸುರಕ್ಷಿತವಾಗಿ ಇರಿಸುತ್ತಾರೆ ಮತ್ತು ಚಿನ್ನ ರಿಯಲ್ ಎಸ್ಟೇಟ್ ಇತ್ಯಾದಿಗಳಲ್ಲಿ ಹೂಡುತ್ತಾರೆ. ಪರಿಣಾಮವಾಗಿ ನೇರ ತೆರಿಗೆಗಳನ್ನು ಪಾವತಿಸುವಷ್ಟು ಆದಾಯ ಹೊಂದಿರದ ಸಾಮಾನ್ಯ ಜನರೆಲ್ಲಾ ಮಾರಾಟ ತೆರಿಗೆ, ವ್ಯಾಟ್ ಇತ್ಯಾದಿಗಳ ರೂಪದಲ್ಲಿ ಸಾಕಷ್ಟು ದೊಡ್ಡ ಮೊತ್ತದಲ್ಲಿ ಪರೋಕ್ಷ ತೆರಿಗೆಗಳನ್ನು ಪಾವತಿಸಬೇಕಾಗಿ ಬಂದಿದೆ. 2013ರಲ್ಲಿ ಕಪ್ಪು ಆರ್ಥಿಕತೆಯಲ್ಲಿರುವ ಒಟ್ಟು ಕಾಳಧನದ ಪ್ರಮಾಣ ಜಿಡಿಪಿಯ ಸುಮಾರು ಶೇಕಡಾ 75ರಷ್ಟು ಇತ್ತು. ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ರಾಜನೀತಿ ಸಂಸ್ಥೆ (National Institute of Public Finance and Policy) ಕೊಟ್ಟಿರುವ ಗೋಪ್ಯ ವರದಿಯ ಪ್ರಕಾರ ಕಪ್ಪು ಆರ್ಥಿಕತೆಯ ಪ್ರಧಾನ ಕ್ಷೇತ್ರಗಳೆಂದರೆ ಉನ್ನತ ಶಿಕ್ಷಣ, ರಿಯಲ್ ಎಸ್ಟೇಟು ಮತ್ತು ಗಣಿಗಾರಿಕೆ. 2015-16ರ ಆರ್ಥಿಕ ಸಮೀಕ್ಷೆ ತೆರಿಗೆ ಜಿಡಿಪಿ ನಿಷ್ಪತ್ತಿಯನ್ನು ಹೆಚ್ಚಿಸಲು ಸೂಚಿಸುವುದರೊಂದಿಗೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೆಚ್ಚು ಖರ್ಚು ಮಾಡುವಂತೆ ಹೇಳಿದೆ. ಕಪ್ಪು ಆರ್ಥಿಕತೆಗೆ ಇತಿಶ್ರೀ ಹೇಳಿದರೆ, ವಿದೇಶಗಳಲ್ಲಿರುವ ಕಪ್ಪುಹಣವನ್ನು ತಂದರೆ ಇದು ಸಾಧ್ಯವಾಗಬಹುದು. ಆದರೆ ಸ್ವಿಜರ್‌ಲ್ಯಾಂಡ್ ಜತೆಗಿನ ಒಪ್ಪಂದವನ್ನು ನೋಡಿದರೆ ಅಲ್ಲಿರುವ ಕಪ್ಪುಹಣವನ್ನು ಭಾರತಕ್ಕೆ ಮರಳಿ ತರುವ ವಿಚಾರದಲ್ಲಿ ಮೋದಿ ಸರ್ಕಾರಕ್ಕೆ ಯಾವುದೇ ಆಸಕ್ತಿ ಇರುವಂತಿಲ್ಲ. ನೋಟು ರದ್ದತಿಗಾಗಿ ಮತ್ತು ಇದೀಗ ನಗದುರಹಿತ ವಹಿವಾಟಿಗಾಗಿ ಇಷ್ಟೊಂದು ಶಕ್ತಿ ಮತ್ತು ಸಂಪನ್ಮೂಲಗಳನ್ನು ವ್ಯಯಿಸುತ್ತಿರುವ ಸರ್ಕಾರ ಯಾಕೆ ವಿದೇಶಗಳಲ್ಲಿರುವ ಕಪ್ಪುಹಣದ ಬಗ್ಗೆ ಸುಮ್ಮನಾಗಿದೆ ಮತ್ತು ಸ್ವಿಜರ್‌ಲ್ಯಾಂಡ್ ಜತೆ ಇಂಥಾ ಕೆಲಸಕ್ಕೆ ಬಾರದ ಒಪ್ಪಂದ ಮಾಡಿಕೊಂಡಿದೆ ಎಂದು ಮತದಾರರು ಕೇಳಬೇಕಾಗಿದೆ. ಪ್ರತಿಯೊಬ್ಬ ಭಾರತೀಯನ ಜೇಬಿಗೆ ರೂ. 15 ಲಕ್ಷ ಹಾಕುವೆನೆಂದ ಮೋದಿಯ ಭರವಸೆ ಬರೀ "ಚುನಾವಣಾ ಜುಮ್ಲಾ" ಎನ್ನುವ ಸತ್ಯಾಂಶವನ್ನು ಮತದಾರರು ಈಗಲಾದರೂ ಅರ್ಥ ಮಾಡಿಕೊಳ್ಳುವರೆ?

ರಾಜಕೀಯ ಪಕ್ಷಗಳ ದೇಣಿಗೆ ಮತ್ತು ಪಾರದರ್ಶಕತೆ

ವೇದಾಂತ ಎಂಬ ಕಾರ್ಪೋರೇಟ್ ಸಂಸ್ಥೆಯಿಂದ ದೇಣಿಗೆ ಪಡೆದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ವಿದೇಶೀ ದೇಣಿಗೆ ಕಾಯ್ದೆಯ (Foreign Contribution (Regulation) Act 2010; FCRA) ಉಲ್ಲಂಘನೆ ಮಾಡಿರುವುದಾಗಿ ದಿಲ್ಲಿ ಉಚ್ಚನ್ಯಾಯಾಲಯ ಮಾರ್ಚ್ 2014ರಲ್ಲಿ ತೀರ್ಪು ನೀಡಿತ್ತು. ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಮೋದಿ ಸರ್ಕಾರ ಈ ವರ್ಷದ ಫೆಬ್ರವರಿಯಲ್ಲಿ ಎಫ್‌ಸಿಆರ್‌ಎ ಕಾಯ್ದೆಗೆ ಅನುಕೂಲಕರವಾದ ತಿದ್ದುಪಡಿ ತಂದಿರುವ ಫಲವಾಗಿ ಈಗ ಆ ಪ್ರಕರಣವನ್ನು ಹಿಂತೆಗೆದುಕೊಳ್ಳಲಾಗಿದೆ!

ಕೇಂದ್ರ ಮಾಹಿತಿ ಆಯೋಗದ ಪೂರ್ಣ ಪೀಠ ಜೂನ್ 2013ರಲ್ಲಿ ನೀಡಿರುವ ತೀರ್ಪಿನ ಪ್ರಕಾರ ಬಿಜೆಪಿ, ಕಾಂಗ್ರೆಸ್, ಎನ್‌ಸಿಪಿ, ಬಿಎಸ್‌ಪಿ, ಸಿಪಿಎಂ ಮತ್ತು ಸಿಪಿಐ ಪಕ್ಷಗಳು "ಸಾರ್ವಜನಿಕ ಪ್ರಾಧಿಕಾರ"ಗಳಾಗಿದ್ದು ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಯಲ್ಲಿ ಬರುತ್ತವೆ. ಆದರೆ ಯಾವೊಂದು ಪಕ್ಷವೂ ಆಯೋಗದ ಆದೇಶವನ್ನು ಪರಿಪಾಲಿಸಿಲ್ಲ. ಆಯೋಗದ ನೋಟಿಸುಗಳಿಗೂ ಉತ್ತರಿಸಿಲ್ಲ. ಕೊನೆಗೆ ಮೇ 2015ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೂಡಲಾಯಿತು. ಈ ಕುರಿತು ಅದೇ ಆಗಸ್ಟ್‌ನಲ್ಲಿ ಅಫಿಡವಿತ್ ಸಲ್ಲಿಸಿದ ಮೋದಿ ಸರ್ಕಾರ ರಾಜಕೀಯ ಪಕ್ಷಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ತರಬಾರದೆಂದು ಹೇಳಿದೆ!


ತಾನು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಡೆದುಹಾಕಲಿದ್ದೇನೆ, ಕಪ್ಪುಹಣವನ್ನು ನಾಶಪಡಿಸಲಿದ್ದೇನೆ ಎಂದು ಘೋಷಿಸುವ ಮೋದಿ ಸರ್ಕಾರ ಎಫ್‌ಸಿಆರ್‌ಎ ಕಾಯ್ದೆ ಅಡಿ ನಿಷಿದ್ಧವಾಗಿರುವ ದೇಣಿಗೆಗಳನ್ನು ಯಾವುದೆ ಮುಲಾಜಿಲ್ಲದೆ ಸ್ವೀಕರಿಸುತ್ತದೆ ಮಾತ್ರವಲ್ಲ ಅದರ ವಿವರಗಳನ್ನು ಸಾರ್ವಜನಿಕರಿಗೆ ಬಹಿರಂಗಪಡಿಸದೆ ಗೌಪ್ಯವಾಗಿರಿಸಲು ಬಯಸುತ್ತದೆ. ಇದರರ್ಥವೇನು? ಆದುದರಿಂದ ಎಲ್ಲಿಯತನಕ ರಾಜಕೀಯ ಪಕ್ಷಗಳು ತಮ್ಮ ಹಣಕಾಸಿನ ವಿಷಯದಲ್ಲಿ ಪಾರದರ್ಶಕತೆ ಪಾಲಿಸುವುದಿಲ್ಲವೊ ಅಲ್ಲಿಯತನಕ ಕಪ್ಪುಹಣ ನಿರ್ಮೂಲನ ಎನ್ನುವುದು ಬರೀ ಬೂಟಾಟಿಕೆಯ ಮಾತಾಗಿ ಉಳಿಯುತ್ತದೆ ಎಂಬುದನ್ನು ಮತದಾರರು ಮನಗಾಣಬೇಕು. ಇಂಥವರು ಕಾಳಧನದ ವಿರುದ್ಧ ನಡೆಸುತ್ತಿರುವ ತಥಾಕಥಿತ ಹೋರಾಟ ಎಷ್ಟು ಸಾಚಾ ಆಗಿರಲು ಸಾಧ್ಯ ಎಂದು ಯೋಚಿಸಬೇಕು.

ಆದರೆ ಇವತ್ತಿನ ದುರಂತ ಏನೆಂದರೆ ಮೋದಿ ಸರ್ಕಾರ ನೋಟು ರದ್ದತಿಯ ನಾಟಕವಾಡುತ್ತಾ 24x7 ಪ್ರಚಾರಯಂತ್ರದ ಮೂಲಕ ಜನರ ಕಣ್ಣಿಗೆ ಮಂಕುಬೂದಿ ಎರಚುತ್ತಿದೆ. ಜನರನ್ನು ಭಾವನಾತ್ಮಕ ಮಾತುಗಳ ಮೂಲಕ ವಂಚಿಸಲಾಗುತ್ತಿದೆ. ಮೋದಿ ಎಂದರೆ ದೇಶವನ್ನು ಉದ್ಧಾರ ಮಾಡಲೆಂದು ಜನ್ಮವೆತ್ತಿ ಬಂದ ಪವಾಡ ಪುರುಷನೋ ಎಂಬಂತೆ (ಅನತಿ ಕಾಲದಲ್ಲಿ ಪ್ರವಾದಿ ಎಂದಾದರೂ ಆಶ್ಚರ್ಯವಿಲ್ಲ!) ನಂಬಿಸಲಾಗುತ್ತಿದೆ. ಗಡಿಕಾಯುವ ಸೈನಿಕರಿಗೆ ಹೋಲಿಸಿದರೆ ಜನರ ಸಂಕಷ್ಟಗಳು ನಗಣ್ಯ ಎಂದು ಬಿಂಬಿಸಲಾಗುತ್ತಿದೆ (ಆದರೆ ಇತ್ತೀಚಿನ ಘಟನೆಯೊಂದರಲ್ಲಿ ನೋಟು ರದ್ದತಿಗೆ ಒಬ್ಬ ಸೈನಿಕನೆ ಬಲಿಯಾಗಿದ್ದಾನೆ. ಆಗ್ರಾದ ನಿವೃತ್ತ ಯೋಧನೊಬ್ಬ ತನ್ನ ಹೃದಯ ಚಿಕಿತ್ಸೆಗೆ ಬೇಕಾಗಿದ್ದ ಹಣವನ್ನು ತನ್ನದೇ ಖಾತೆಯಿಂದ ಪಡೆಯಲು ಸತತ ಒಂದು ವಾರ ಪ್ರಯತ್ನಿಸಿ ವಿಫಲನಾದಾಗ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾನೆ). ಇಂದು ಒಂದಿಷ್ಟು ಕಷ್ಟವಾದರೂ ಶೀಘ್ರದಲ್ಲಿ ಭಾರಿ ಕ್ರಾಂತಿಕಾರಿ ಬದಲಾವಣೆಯಾಗಿ "ಒಳ್ಳೆಯ ದಿನಗಳು" ಬರಲಿವೆ ಎಂದು ಜನರ ಮಿದುಳನ್ನು ತೊಳೆಯಲಾಗುತ್ತಿದೆ. ಪರಿಣಾಮವಾಗಿ ದಶಕಗಳು ಉರುಳಿದರೂ ಕಡಮೆಯಾಗುವ ಬದಲು ದಿನೇದಿನೇ ಹೆಚ್ಚುತ್ತಲೇ ಇರುವ ಭ್ರಷ್ಟಾಚಾರ, ಕಾಳದಂಧೆಗಳಿಂದ ರೋಸತ್ತ ಜನಸಾಮಾನ್ಯರು ಮೋದಿ ಸರ್ಕಾರದ ಈ ಪುಂಖಾನುಪುಂಖ ಸುಳ್ಳುಗಳನ್ನು ನಿಜವೆಂದೇ ನಂಬುತ್ತಿದ್ದಾರೆ. ಆದರೆ ಸತ್ಯದ ಅರಿವಾಗುವಷ್ಟರಲ್ಲಿ ಕಾಲ ಮಿಂಚಿರಬಹುದು.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: thewire.in ನಲ್ಲಿ ಅಲ್ಲಟ್ಟಿನಾ ಅಲ್ಲೇನಾರ Double Standards; ಜಗದೀಪ್ ಚೋಕರ್‌ರ Time to Get Real About Foreign Money and Black Money in Politics; 12.12.2016ರ ದ ಹಿಂದೂ ನಲ್ಲಿ ... Time to Blow the Whistle)

ಬೂಸಿ ಬಸ್ಯ... ಮೋದಿ!



ಎತ್ತು ಮತ್ತು ಕರಿ ಕಲ್ಲುಬಂಡೆ

ಒಬ್ಬ ಶಾಲೆಯ ಮಾಸ್ತರ ಮಕ್ಕಳಿಗೆ ಪಾಠ ಮಾಡುತ್ತ 'ನೋಡಿ ಮಕ್ಕಳೆ, ನಮ್ಮ ನಮ್ಮ ಜಗಳವನ್ನು ನಾವೇ ಬಗೆಹರಿಸಿಕೊಳ್ಳಬೇಕು. ಮೂರನೇ ವ್ಯಕ್ತಿಯ ಹತ್ರ ಹೋದರೆ ಎಲ್ಲವೂ ಹಾಳಾದಂತೆ'' ಎಂದು ನೀತಿಪಾಠ ಹೇಳಿದ. ಕ್ಲಾಸಿನ ಮಕ್ಕಳೆಲ್ಲರೂ "ಅದು ಹೇಗೆ, ಸರ್. ವಿವರಿಸಿ ಹೇಳಿ'' ಎಂದು ಕೇಳಿದರು. ಆಗ ಆ ಮಾಸ್ತರ ನೀತಿ ಪಾಠವನ್ನು ವಿವರಿಸಲು ಒಂದು ಕತೆ ಹೇಳಲು ಶುರು ಮಾಡಿದ.

ಒಂದೂರಿನಲ್ಲಿ ಒಂದು ಎತ್ತು ಇತ್ತು. ಎತ್ತರವಾಗಿ, ದಷ್ಟ-ಪುಷ್ಟವಾಗಿ ಬೆಳೆದು ಸಂತೋಷದಿಂದ ಇತ್ತು. ಚಿಕ್ಕಂದಿನಿಂದಲೂ ಅದು ಊರ ಹೊರಗಿನ ಹುಲ್ಲುಗಾವಲಿನಲ್ಲಿ ಮೇಯುತಿತ್ತು. ಮೇಯ್ದಾದ ಮೇಲೆ ಒಂದು ವಿಶಾಲವಾದ ಆಲದ ಮರದ ತಂಪಾದ ನೆರಳಲ್ಲಿ ಇದ್ದ ಕರಿ ಕಲ್ಲು ಬಂಡೆಯ ಮೇಲೆ ಕುಳಿತುಕೊಂಡು ವಿಶ್ರಾಂತಿ ಪಡೆಯುತ್ತಿತ್ತು, ಅಲ್ಲಿ ತಿಂದಿದ್ದನ್ನೆಲ್ಲಾ ಮೆಲುಕು ಹಾಕುತ್ತಿತ್ತು. ಸಂಜೆ ಹೊತ್ತು ಅಲ್ಲಿಂದ ಹೋಗುವ ಮೊದಲು ಆ ಬಂಡೆಯ ಮೇಲೆ ಉಚ್ಚೆ ಹೊಯ್ದು, ಹೇತು ಹೋಗುತ್ತಿತ್ತು. ಪ್ರತಿ ದಿನ ಇದೇ ಅದರ ದಿನಚರಿಯಾಗಿತ್ತು.

ಹೀಗಿರಬೇಕಾದರೆ ಒಮ್ಮೆ ಆ ಕರಿ ಕಲ್ಲು ಬಂಡೆಗೆ ಬಹಳ ಕೋಪ ಬಂತು. "ಕುಳಿತುಕೊಳ್ಳುವುದಕ್ಕೆ ಅಂತ ಈ ಎತ್ತಿಗೆ ಜಾಗ ಕೊಟ್ಟರೆ ಅದು ನನ್ನ ಮೇಲೆ ಉಚ್ಚೆ ಹೊಯ್ದು, ಹೇತು ಹೋಗುತ್ತಿದೆಯಲ್ಲ!?'' ಎಂದು ಅಸಮಾಧಾನಗೊಂಡಿತು. ಕೋಪವನ್ನು ತಡೆಯಲಾರದೆ ಅದು ಒಮ್ಮೆ ಎತ್ತಿಗೆ, "ಎಲೈ, ದನವೆ! ನೀನು ಇನ್ನು ಮುಂದೆ ನನ್ನ ಮೇಲೆ ಕೂರಬೇಡ. ಕುಂತರೆ ನಿನ್ನನ್ನು ಹೊಡೆದು ಹಾಕುತ್ತೇನೆ. ನನ್ನ ಮೇಲೆ ಕುಳಿತುಕೊಳ್ಳುವುದು ಅಲ್ಲದೆ, ನನ್ನ ಮೇಲೇಯೇ ಉಚ್ಚೆ ಹೊಯ್ದು, ಹೇಲುತ್ತೀಯಾ? ಹುಷಾರ್'' ಎಂದು ಗದರಿಸಿತು. ಯಾವತ್ತು ಇಲ್ಲದ್ದು ಇವತ್ಯಾಕೆ ಈ ಕರಿಬಂಡೆ ತನ್ನ ಮೇಲೆ ಹೀಗೆ ರೇಗಾಡುತ್ತಿದೆ ಎಂದು ಎತ್ತಿಗೆ ಆಶ್ಚರ್ಯವಾಯಿತು.

ಎತ್ತು ಕೇಳಿತು, "ಯಾಕೆ ಕೂರಬಾರದು? ಚಿಕ್ಕಂದಿನಿಂದಲೂ ನಾನು ಇಲ್ಲೇ ಕುಳಿತುಕೊಳ್ಳುತ್ತಿರೋದು. ಇವತ್ಯಾಕೆ ನೀನು ತಕರಾರು ಮಾಡುತ್ತಿರುವೆ.'' ಅದಕ್ಕೆ ಕರಿ ಬಂಡೆ ಹೇಳಿತು, "ನಿನಗ್ಯಾಕೆ ಅವೆಲ್ಲಾ? ನೀನು ನನ್ನ ಮೇಲೆ ಕುಳಿತುಕೊಂಡರೆ ನನಗೆ ಅವಮಾನ ಮಾಡಿದ ಹಾಗೆ. ನನ್ನ ಅಂತಸ್ತೇನು, ನಿನ್ನ ಅಂತಸ್ತೇನು!''ಎಂದು ಮರುತ್ತರ ನೀಡಿತು. ಕರಿ ಬಂಡೆಗೆ ತನ್ನ ಮೇಲೆ ಹೊಟ್ಟೆಕಿಚ್ಚು ಬಂದು, ತಾಳಲಾರದೆ ಹೀಗೆ ಮಾತನಾಡುತ್ತಿದೆ ಎಂದು ಎತ್ತಿಗೆ ಅನಿಸಿತು. ಅದರ ಸೊಕ್ಕಿನ ಮಾತುಗಳು ಎತ್ತಿಗೆ ಹಿಡಿಸಲಿಲ್ಲ, ಪಿತ್ತ ನೆತ್ತಿಗೇರಿ ಮೂದಲಿಸಿತು, "ಎಲಾ! ಕರಿ ಬಂಡೆಯೆ. ಅಂತಸ್ತಿನ ಬಗ್ಗೆ ಮಾತನಾಡುತ್ತೀಯಾ!? ನಿನ್ನ ಮುಖ ನೋಡಿಕೊಂಡಿದ್ದೀಯಾ ಕನ್ನಡಿಯಲ್ಲಿ? ಗಂಡಸರ ನಿಂತ ಶಿಶ್ನದ ಹಾಗೆ ಇದೆ ನಿನ್ನ ಮೂತಿ. ಓಡಾಡೊಕ್ಕೆ ನನ್ನ ಹಾಗೆ ಕಾಲುಗಳಿಲ್ಲ, ಹಾಯುವದಕ್ಕೆ ಕೊಂಬುಗಳಿಲ್ಲ, ಬಿದ್ದಲ್ಲೆ ಬಿದ್ದುಕೊಂಡಿರುತ್ತೀಯ. ಮೈ ಬಣ್ಣ ನೋಡು! ಕರಿ ಕಗ್ಗತ್ತಲು! ಇಷ್ಟಿದ್ದರೂ ನಿನಗೆ ಇಷ್ಟೊಂದು ಜಂಭ ಇದೆಯಲ್ಲ!?''



ಕರಿ ಬಂಡೆ ಸುಮ್ಮನಿರಲಿಲ್ಲ, ಗಂಡಸರ ಶಿಶ್ನಕ್ಕೆ ತನ್ನನ್ನು ಹೋಲಿಸಿದ್ದು ಅತ್ಯಂತ ಘೋರ ಅಗೌರವ ಎಂದು ಕರಿ ಬಂಡೆ ಮತ್ತಷ್ಟು ಕೋಪದಿಂದ ಬುಸುಗುಡುತ್ತಾ, "ಥೂ, ನಿನ್ನ ಜನ್ಮಕ್ಕೆ ಬೆಂಕಿ ಹಾಕ! ನಿನ್ನ ಸ್ಥಾನ ಏನು, ನನ್ನ ಸ್ಥಾನ ಏನು? ಕೋಲಿನಿಂದ ನಿನ್ನ ತಿಕದ ಮೇಲೆ ಒಂದು ಕೊಟ್ಟರೆ ಕತ್ತೆಯ ಹಾಗೆ ಕಿರುಚಿಕೊಂಡು ಓಡುತ್ತಿಯ. ನನ್ನನ್ನು ನೋಡು! ಜನ ನನ್ನಿಂದ ದೇವರನ್ನು ಸೃಷ್ಟಿಸಿ ಪೂಜಿಸುತ್ತಾರೆ. ನಿನಗ್ಯಾರು ಅಂಥ ಮರ್ಯಾದೆ ಕೊಡೋರು? ನಿನಗಿಂತ ನಾನೆ ಶ್ರೇಷ್ಠ. ನಿನ್ನಂಥ ಕನಿಷ್ಠರು ನನ್ನ ಮೇಲೆ ಕುಳ್ಳುವುದೆಂದರೇನು? ಜೋಕೆ! ನಾಲಿಗೆ ಹಿಡಿದು ಮಾತಾಡು'' ಎಂದು ಗದರಿಸಿತು.

ಅದಕ್ಕೆ ಎತ್ತು, "ನಿನ್ನನೊಬ್ಬನನ್ನೇ ಪೂಜಿಸುತ್ತಾರೆ ಅಂದುಕೊಂಡೆಯ, ಹೆಡ್ಡ! ನನ್ನನ್ನೂ ಪೂಜಿಸುತ್ತಾರೆ. ಜನರ ದೃಷ್ಟಿಯಲ್ಲಿ ನಾನು ದೇವರ ಅವತಾರ. ನನಗೆ ತಿನ್ನಲು ಏನೆಲ್ಲಾ ಕೊಡುತ್ತಾರೆ! ಹಬ್ಬದ ದಿನಗಳಲ್ಲಂತೂ ನನ್ನನ್ನು ಹುಡುಕಿಕೊಂಡು ಬಂದು ನನ್ನ ತಿಕವನ್ನು ಮುಟ್ಟಿ ನಮಸ್ಕಾರ ಮಾಡುತ್ತಾರೆ. ನಾನು ಹೊಯ್ಯುವ ಉಚ್ಚೆಯನ್ನು ಕುಡಿದು, ತಲೆ ಮೇಲೆ ಹಾಕಿಕೊಳ್ಳುತ್ತಾರೆ. ನಿನಗೆ ಇಷ್ಟೆಲ್ಲಾ ಮರ್ಯಾದೆ ಇದೆಯ? ನೀನೊಬ್ಬ ಕಲ್ಲು ಬಂಡೆ. ನನ್ನ ಪಾದಕ್ಕೆ ಸಮಾನ'' ಎಂದು ತೆಗಳಿತು.

ಕರಿ ಬಂಡೆ ಸುಮ್ಮನಿರಲಿಲ್ಲ, ಕೋಪದಿಂದ ಮತ್ತಷ್ಟು ಬಿಸಿಯಾಗಿ ಗುಡುಗಿತು, "ಆ ಗಂಡಸರ ಮುಂದೆ ಕೂಲಿಯಾಳಾಗಿ ಕೆಲಸ ಮಾಡುವ ಜೀತದಾಳು ನೀನು. ನಿನಗೆ ಪೂಜೆಯೆ? ನನ್ನನ್ನು ನೋಡು. ಸಾವಿರಾರು ಭಕ್ತರು ನನ್ನನ್ನು ಪೂಜಿಸುತ್ತಾರೆ. ದೇವಸ್ಥಾನಗಳಲ್ಲಿ ಇರೋದು ನಾನೆ. ನನ್ನ ಮೇಲೆ ಹಾಲು, ತುಪ್ಪ, ಬೆಣ್ಣೆ ಮೊಸರುಗಳನ್ನು ಸುರಿದು ಭಕ್ತರಿಗೆ ನೈವೇದ್ಯವನ್ನು ಕೊಡುತ್ತಾರೆ. ನಿನಗ್ಯಾರು ಇಷ್ಟೆಲ್ಲಾ ಕೊಡೋದು? ಹೋಗು, ಹೋಗು. ಸುಮ್ಮನೆ ವಾದಿಸಬೇಡ. ನಿನಗೆ ನನ್ನ ಮೇಲೆ ಕುಳಿತುಕೊಳ್ಳುವುದಕ್ಕೆ ಅರ್ಹತೆಯಿಲ್ಲ, ಬೇಕಾದರೆ ನನ್ನ ಎದುರಿಗೆ ಸೇವಕನ ಹಾಗೆ ಕುಳಿತುಕೊ. ನಿನಗೆ ಅದೆ ಸರಿಯಾದ ಸ್ಥಾನ. ಇಲ್ಲದಿದ್ದರೆ ನಿನ್ನನ್ನು ಅಲ್ಲಾಡಿಸಿಬಿಟ್ಟೇನು, ಹುಷಾರ್!''

ದೊಡ್ಡವರಿಗಾಗಿ ಮಕ್ಕಳ ಕಥೆ

ಹೀಗೆ ಕರಿ ಬಂಡೆ ಮತ್ತು ಎತ್ತಿನ ಜಗಳ ಸಾಗುತ್ತಿದ್ದಾಗ ಅದೇ ದಾರಿಯಲ್ಲಿ ಒಂದು ಬೆಕ್ಕು ಹೋಗುತ್ತಿತ್ತು. ಎತ್ತು ಬೆಕ್ಕನ್ನು ಕರೆದು, "ಬೆಕ್ಕಣ್ಣ ಇಲ್ಲಿ ಬಾ. ನಮ್ಮ ಜಗಳವನ್ನು ಪರಿಹರಿಸು. ನೀನು ಓದಿರುವವನು. ಬುದ್ಧಿವಂತ. ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು ಎಂದು ನೀನೇ ತೀರ್ಮಾನಿಸು?'' ಎಂದು ಕೇಳಿಕೊಂಡಿತು. ಬೆಕ್ಕು ಹೇಳಿತು, "ನೋಡು, ಎತ್ತಣ್ಣ ನಾನು ಓದಿಕೊಂಡಿರುವುದೇನೋ ನಿಜ. ಆದರೆ ನನಗಿಂತ ಹೆಚ್ಚು ಓದಿ, ವಿದ್ಯೆಯನ್ನು ಗಟ, ಗಟ ಕುಡಿದಿರುವವರು ನನ್ನ ಗುರುಗಳು. ಅವರು ವೇದಾಂತಿಗಳು. ಪುರಾಣ, ಶಾಸ್ತ್ರ ಜ್ಯೋತಿಷ್ಯ, ವಾಸ್ತು ಜನ್ಮಾಂತರ, ಕರ್ಮಾಕರ್ಮಗಳ ಬಗ್ಗೆ ಎಲ್ಲವನ್ನು ತಿಳಿದುಕೊಂಡಿರುವವರು. ಅವರ ಬಳಿ ಹೋದರೆ ನಿಮ್ಮಲ್ಲಿ ಯಾರು ಶ್ರೇಷ್ಠರು ಎಂದು ಗೊತ್ತ್ಯಾ... ಮೂವರೂ ವೇದಾಂತ ಗುರುಗಳ ಬಳಿ ಹೋ... ಬೆಕ್ಕು ವೇದಾಂತ ಗುರುವಿನ ಕಿವಿಯೊಳಗೆ ... ಪಿಸುಗುಟ್ಟಿ ಹೇಳಿತು. ಕರಿ ಬಂಡೆ ಮತ್ತು ... ಒಮ್ಮೆ ನೋಡಿದ ವೇದಾಂತ ಗುರು ಒಳಗೊ... ನಗುತ್ತಾ "ಬಕರಾಗಳು. ಸರಿಯಾಗಿ ಸಿಕ್ಕಿದ್ದಾವೆ... ಮಾಡ್ತೀನಿ ಇವಕ್ಕೆ'' ಎಂದು ಮನಸ್ಸಿನಲ್ಲಿ ಅಂದುಕೊಂಡ. "ನೋಡಿ, ಪ್ರಕೃತಿಯಲ್ಲಿ ಎಲ್ಲ... ಸರಿಸಮಾನರು. ನಾವೆಲ್ಲ ಆ ದೇವರ ಸೃಷ್ಟಿಗಳ... ಆದ್ದರಿಂದ 'ನಾನು ಶ್ರೇಷ್ಠ ಅವನು ಕನಿಷ್ಠ' ... ಬಡಿದಾಡಬಾರದು. ಆದಾಗ್ಯು ನೀವು ನನ್ನನ್ನು ನಂಬಿಕೊಂಡು ಇಲ್ಲಿಯವರೆಗು ಬಂದಿದ್ದೀರಿ. ... ಶ್ರೇಷ್ಠ ಯಾರು ಎಂದು ತೀರ್ಮಾನಿಸುವುದು ... ಕರ್ತವ್ಯ'' ಎಂದ ವೇದಾಂತ ಗುರು ಗಾಂಭೀ... ಒಂದೆರಡು ಮಾತುಗಳನ್ನು ಉದುರಿಸಿದ. ಕರಿ... ಮತ್ತು ಎತ್ತು ಇವನ ಮಾತುಗಳನ್ನು ಕೇಳಿ ಖುಷಿಪಟ್ಟವು.

ಸ್ವಲ್ಪ ಸಮಯ ಧ್ಯಾನಾಸಕ್ತನಾದವನಂತೆ ನ... ವೇದಾಂತ ಗುರು ಕರಿಬಂಡೆ ಮತ್ತು ಎತ್ತಿಗೆ ... "ನೋಡಿ, ನಾನು ಧ್ಯಾನ ಮಾಡುತ್ತಾ ದೇವರ ... ಈಗ ಮಾತನಾಡಿದೆ. ನಿಮ್ಮಲ್ಲಿ ಯಾರು ಶ್ರೇಷ್ಠ... ಎಂದು ನಿರ್ಣಯ ಕೊಡಬೇಕಾದರೆ ನಾನು ... ಹಾಗೆ ನೀವು ಕೇಳಬೇಕು. ಇದು ಆ ದೇವರ ... ಆದ್ದರಿಂದ ನೀವಿಬ್ಬರು ಈಗ ನಾನು ಹೇಳಿದ ಕೆಲಸವನ್ನು ಮಾಡಬೇಕು. ಅದರಲ್ಲಿ ಯಾರು ... ಕೆಲಸ ಮಾಡುತ್ತಾರೊ ಅವರೆ ಶ್ರೇಷ್ಠರು''. ಅಷ್ಟು... ಹೇಳಿದಕ್ಕೆ ಕರಿ ಬಂಡಿ ಮತ್ತು ಎತ್ತು ಒಪ್ಪಿಗೆಯ... ತಲೆಯಾಡಿಸಿದವು. ವೇದಾಂತ ಗುರು ಮುಂದು... ಹೇಳಿದ, "ಕರಿ ಬಂಡೆ, ನೀನು ನಮ್ಮ ಊರ... ಕಟ್ಟಿಸುತ್ತಿರುವ ದೇವಾಲಯಕ್ಕೆ ಕಲ್ಲನ್ನು ನೀಡಬೇ... ಎತ್ತು, ನೀನು ಕರಿ ಬಂಡಿ ಕೊಡುವ ಕಲ್ಲನ್ನು ದೇವಸ್ಥಾನದವರೆಗೆ ಸಾಗಿಸಬೇಕು. ಎಲ್ಲಾ ಕೆಲಸ... ಮುಗಿದ ಮೇಲೆ ನಾನು ತೀರ್ಮಾನ ಕೊಡುತ್ತೇ... ತೀರ್ಮಾನ ಆ ದೇವರ ತೀರ್ಮಾನಕ್ಕೆ ಸಮಾನ... ಜ್ಞಾಪಕವಿರಲಿ.'' ಈ ಮಾತಿಗೆ ಕರಿ ಬಂಡೆ ಮ... ಎತ್ತು ಮತ್ತೊಮ್ಮೆ ತಲೆಯಾಡಿಸಿದವು.

* * *


ಅನೇಕ ದಿನಗಳು ಕಳೆದವು. ಕರಿ ಬಂಡೆ ಗಾಣದೆತ್ತಿನಂತೆ ದುಡಿಯುತ್ತಿದೆ. ವೇದಾಂತ ಗು... ದೇವಸ್ಥಾನಕ್ಕೆ ಕಲ್ಲನ್ನು ನೀಡುತ್ತಾ, ನೀಡುತ್ತಾ ಸೊ... ಸಣ್ಣಗೆ ಆಗುತ್ತಿದೆ. ಎತ್ತು ಆ ಕಲ್ಲುಗಳನ್ನು ಎತ್ತಿ... ಸಾಗಿಸಿ, ಸಾಗಿಸಿ, ಬಡಕಲಾಗಿ ಅಸ್ಥಿಪಂಜರದಂತೆ ... ಕಾಣಿಸುತ್ತಿದೆ. ಇಬ್ಬರಲ್ಲಿ ಯಾರು ಶ್ರೇಷ್ಠರು ಅಂ... ವೇದಾಂತ ಗುರು ತೀರ್ಮಾನ ಕೊಡದೆ ಅವೆರು... ಹಗಲು-ರಾತ್ರಿ ಕತ್ತೆಗಳ ಹಾಗೆ ದುಡಿಸಿಕೊಳ್ಳುತ್ತಿ... ಕರಿ ಬಂಡೆ 'ನಾನೆ ಗೆಲ್ಲುವುದು' ಎಂದು ಭ್ರಮೆಯಲ್ಲಿದ್ದರೆ, ಎತ್ತು 'ನಾನೆ ಶ್ರೇಷ್ಠನಾಗುತ್ತೇ... ಎಂದು ದಿನ-ರಾತ್ರಿ ಕನಸು ಕಾಣುತ್ತಿದೆ.

■ ಡಾ. ವಿಜಯಕುಮಾರ ಎಂ ಬೋ...

'ಭಕ್ತ'ರ ಭಜನೆಯೆಂಬುದು ಲೊಳಲೊಟ್ಟೆ?

ಇತ್ತೀಚಿಗೆ ಸಾಮಾನ್ಯ ಚರ್ಚೆಗಳಲ್ಲಿ ಹಾಗು ರಾಜಕೀಯ ವಲಯದಲ್ಲಿ ಸಾಮಾನ್ಯವಾದೊಂದು ಪದ ಭಾರೀ ಎನ್ನುವಂತೆ ಬಳಕೆಯಲ್ಲಿದೆ. ಅದೇ 'ಭಕ್ತರು' ಎನ್ನುವ ಪದ. ಈ ಪದವನ್ನು ಸಂಬಂಧಿತ ವ್ಯಕ್ತಿಯ ಕುರಿತಾಗಿ ಯಾರು ಹುಟ್ಟುಹಾಕಿದ್ದೋ ಗೊತ್ತಿಲ್ಲ. ಸಚಿನ್ ತೆಂಡೂಲ್ಕರ್‌ನನ್ನು ನೇರಾನೇರ ದೇವರು ಎಂದು ಕರೆದಂತೆ ಆ ಲೆವೆಲ್ಲಿಗೆ ವ್ಯಕ್ತಿಯನ್ನು ಪುಣ್ಯಕ್ಕಿಲ್ಲಿ ಬಿಂಬಿಸಹೋಗದಿದ್ದರೂ ಪರೋಕ್ಷವಾಗಿ ಅದೇ ಅರ್ಥವನ್ನು ಕೊಡುವ ಕುರುಡು ಭಜಕರನ್ನು ಉದ್ದೇಶಿಸಿ ನೀಡಲಾದ ಈ 'ಭಕ್ತ' ಬಿರುದನ್ನು ಎಷ್ಟರಮಟ್ಟಿಗೆ ಒಪ್ಪಲು ಸಾಧ್ಯ? ಫೇಸ್ ಬುಕ್ಕಿನಲ್ಲೊಬ್ಬ ಭಕ್ತಾಗ್ರೇಸರ "ನಾನು ನೇರವಾಗಿ ಮೋದಿಯ ಮೂತ್ರ ಕುಡಿಯುತ್ತೇನೆ" ಎಂದು ಹೆಮ್ಮೆಯಿಂದ ಬರೆದುಕೊಳ್ಳುತ್ತಾನೆ. ಮೋದಿಯನ್ನು ಕಾಮಿಕ್ಸ್‌ನ, ಸಿನಿಮಾಗಳ ಅತಿಮಾನುಷ ಹೀರೋ ಎಂದು ನಂಬುವವರಿಗೇನೂ ಕೊರತೆಯಿಲ್ಲ, ಆ ವ್ಯಕ್ತಿಯ ಎಲ್ಲವನ್ನೂ ಕುರುಡಾಗಿ ಸಮರ್ಥಿಸಿಕೊಳ್ಳುವವರು ವಿರೋಧಿಸುವವರನ್ನು ಹಳಿಗ್ಗೈಯ್ಯುವ ಮಟ್ಟಕ್ಕೆ ಹೋಗ್ತುತ್ತಾರೆ. ಅಷ್ಟೆ ಯಾಕೆ, ತಮ್ಮ 'ದೇವರಿಗಾಗಿ ದೇಗುಲವನ್ನೂ ಕಟ್ಟಿದ'ಂತ ಸುದ್ದಿ ಹಿಂದೆ ಬಂದಿತ್ತು, ಇವರನ್ನೆಲ್ಲ ಭಕ್ತರು ಎನ್ನಬಹುದೇ? ಊಹೂಂ ಖಂಡಿತಾ ಸಾಧ್ಯವಿಲ್ಲ.

ವಿಶ್ವದಲ್ಲಿ ಭೂಕಂಪ, ನೆರೆ, ರೋಗ ರುಜಿನಗಳಿಗಿಂತಲೂ ಹೆಚ್ಚು ಮನುಷ್ಯ ಬಲಿಯಾದದ್ದು ಧಾರ್ಮಿಕ, ಸಾಮಾಜಿಕ ಹಾಗು ಪ್ರಾದೇಶಿಕ ದ್ವೇಷಾಸೂಯೆಗಳ ತಾಕಲಾಟಗಳ ... ಇಂದ ಎನ್ನುವುದು ಐತಿಹಾಸಿಕ ಸತ್ಯ. ... ನಾಗರಿಕ ಜಗತ್ತಿನ ಕರಾಳ ಉಪ ಉತ್ಪನ್ನ ...




ಶಾಪವೆನ್ನಬಹುದು. ನಾವೇ ಕಟ್ಟಿಕೊಂಡ ದೇಶ ಭಾಷೆ ಜಾತಿ ಧರ್ಮಗಳ ವಿಷಯದಲ್ಲಿ ನಾವೇ ಬಹು ಬೇಗನೆ ಉನ್ಮಾದಕ್ಕೊಳಗಾಗಬಲ್ಲೆವು. (ಹೊರದೇಶದಲ್ಲಿ ನಾವು ಭಾರತೀಯರಾಗಿ ಗುರುತಿಸಿಕೊಂಡರೆ, ಕಾವೇರಿಯಂತ ವಿಚಾರ ಎದುರಾದಾಗ ಕರ್ನಾಟಕದಲ್ಲಿ ಕನ್ನಡಿಗರಾಗಿ ತಮಿಳುನಾಡಿನಲ್ಲಿ ತಮಿಳಿಗರಾಗಿ ಜನ ಯೋಚಿಸುತ್ತಾರೆಯೇ ಹೊರತು ಭಾರತೀಯರಾಗಿ ಅಲ್ಲ) ಕೆಲ ಬಿಸಿ ರಕ್ತದವರು ಇಂಥದ್ದಕ್ಕೆಲ್ಲ ನೇರಾನೇರ ಪ್ರತಿಕ್ರಿಯೆ ತೋರ ಹೊರಟರೆ ಇನ್ನು ಕೆಲವರ ಸ್ಥಿತಿ ಒಳಗೊಳಗೇ ಸುಪ್ತಾವಸ್ಥೆಯ ಮ...ದಲ್ಲಿರುತ್ತದೆ.

ನಿಮಗೆ ಗೊತ್ತಿರಬಹುದು ಎಂಭತ್ತರ ದಶಕದ ಕೊನೆ ಹಾಗು ತೊಂಭತ್ತರ ಆರಂಭದಲ್ಲಿ ಭಾರತದಲ್ಲಿ ಮೇಲೆ ಹೇಳಿದಂಥಾದ್ದೇ ಒಂದು ದೇವರ ಆವಿರ್ಭಾವ ನಡೆದಿತ್ತು. (ಈಗ ಆ ದೇವರನ್ನು ಪೂಜಿಸುವವರಿರಲಿ, ಮೂಸಿ ನೋಡುವವರೂ ಇಲ್ಲ) ಆವತ್ತು ಇವತ್ತಿನ ಮೊಬೈಲ್ ಹಾಗು ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸಪ್ ಇರಲಿ, ಸಾಮಾನ್ಯ ಫೋನೂ ಕೂಡ ಕೇವಲ ಸಿರಿವಂತರಿಗಷ್ಟೇ ಸೀಮಿತವಾಗಿತ್ತು, ಅಂಥಾ ಕಾಲದಲ್ಲೇ ಓರ್ವ ವ್ಯಕ್ತಿ ಕೇವಲ ರಥಯಾತ್ರೆ ಮೂಲಕ ಇಡೀ ಭಾರತವನ್ನೇ ಇದೇರೀತಿ ಉನ್ಮಾದಕ್ಕೊಳಪಡಿಸಿ ಮೆರೆದಿದ್ದ. ಆತನೇ ನಂತರ ದೇಶದ ಉಪ ಪ್ರಧಾನಿಯಾದ ಲಾಲ್ ಕೃಷ್ಣ ಅಧ್ವಾಣಿ... ಜನ್ಮ ಭೂಮಿ ಹೆಸರಲ್ಲಿ ರಥಯಾತ್ರೆ ನಡೆಸಿ ... ಧಾರ್ಮಿಕ ಅಸಹನೆ ಬಿತ್ತಿ ಒಂದು ಸಮುದಾಯದ... ಜನತೆಯನ್ನು ಉನ್ಮಾದಕ್ಕೊಳಪಡಿಸಿದ ಪರಿಣಾಮ ... ನಿಂತಿಲ್ಲ. ಮತೀಯವಾದಿ ದೇಶಭಕ್ತರ ಕಣ್ಮಣಿಯ... ಮೆರೆದ 'ಉಕ್ಕಿನ ಮನುಷ್ಯ-2' ಬಿರುದಾಂಕಿತ ಅ... ಕೊನೆಗೆ ಇದೇ ಬಿಡಿಸಲಾಗದ ಉರುಳಾಗಿ ... ಹೊರಬರಲು ಆತ ಪಟ್ಟಪಾಡು ಅಷ್ಟಿಷ್ಟಲ್ಲ, ಮು... ಪ್ರೀತಿಗಳಿಸಲು ಪಾಕ್‌ನಲ್ಲಿ ಜಿನ್ನಾರನ್ನು ಹೊಗ... ಭಕ್ತರಿಂದಲೇ ತಾನು ಉಗಿಸಿಕೊಳ್ಳಬೇಕಾಗಿ ... ಇತಿಹಾಸ. ವಿದೇಶದಲ್ಲಿನ ಕಪ್ಪು ಹಣ ... ಜೇಬಿಗಿಳಿಯುವ ಕನಸು ಟುಸ್ಸಾದಂತೆ ಇತ್ತೀಚಿನ ಬದಲಾವಣೆಯ ಬೇಜವಾಬ್ದಾರಿತನವನ್ನು ನಿಧಾನವಾಗಿಯಾದರೂ ಅರ್ಥ ಮಾಡಿಕೊಳ್ಳುತ್ತಿದ... ಸಂಗತಿಯ ಸಮರ್ಥಕರು ಭವಿಷ್ಯದ ಉಜ್ವಲತೆಯ ... ಕಾಲ್ಪನಿಕ ಸಿನಿಮಾವನ್ನು ಮುಗ್ಧರ ಮುಂದಿಟ್ಟು... ಲಗಾಟಿ ಹೊಡೆದರೂ ನಾಳಿನ ದಿನಗಳಲ್ಲಿ ಇದು ... ಕುರಿತಾಗಿ ಒಳ್ಳೆಯ ಅಭಿಪ್ರಾಯವನ್ನು ಉಳಿಸಿಹೋಗದೆನ್ನುವುದು ಖಂಡಿತ.

ಹಿಂದೆ ಉಕ್ಕಿನ ಮನುಷ್ಯ-2 ತನ್ನ ಇಮೇಜಿನಿಂದ ಹೊರಬರಲು ಪಡಿಪಾಟಲು ... ಈ ವ್ಯಕ್ತಿಗೂ 'ಅಂದರಿಕಿ ಮಂಚಿವಾಡು' ಎನಿಸಿ... ತವಕ ಹುಟ್ಟದಿದ್ದೀತೇ? ಆಗ ಈ ಭಕ್ತ ಗಡಣದ ಭ್ರ... ಯಾವ ರೀತಿಯಲ್ಲಿ ತಿರುಗಿ ನಿಲ್ಲುತ್ತವೆ ಎನ್ನುವುದಕ್ಕೆ ಪ್ರತ್ಯಕ್ಷ ದರ್ಶಿಗಳಾಗುತ್ತೇವೆ.

■ ಶಂಕರ್ ಬ್ರಹ್ಮ...
ಈ ಮೇಲ್ ...



ಯೋಗೇಶ್ ಮಾಸ್ಟರ್

ಸುಡಾಣದ ಹೂರಣ

ಅಧ್ಯಾತ್ಮಕ್ಕೆ ಧಾರ್ಮಿಕತೆಯುಂಟೇ?

ಹಿಂದೂ ಅಧ್ಯಾತ್ಮ ಮೇಳ

ಹಿಂದೂ ಅಧ್ಯಾತ್ಮ ಮತ್ತು ಸೇವಾ ಫೌಂಡೇಷನ್ 14ರಿಂದ 18(2016)ರವರೆಗೆ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಹಿಂದೂ ಅಧ್ಯಾತ್ಮ ಮತ್ತು ಸೇವಾ ಮೇಳ ಆಯೋಜಿಸಿದೆ ಎಂಬ ಸುದ್ದಿಯನ್ನು ಓದಿ ಚಿಂತನೆಯ ಪ್ರಕಾಶವಮುಖವನ್ನು ಮತ್ತಷ್ಟು ಕಮರುವಂತಹ ಭಾವನೆಗಳನ್ನು ನೋಡಿ ಗಾಬರಿಯಾಯಿತು. ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಧರ್ಮ, ದೇವರು, ಪ್ರೇಮ ಮತ್ತು ಸಂಬಂಧ ಈ ಪರಿಕಲ್ಪನೆಗಳನ್ನು ಅತ್ಯಂತ ತಪ್ಪಾಗಿ ಅರ್ಥೈಸುತ್ತಾ ಬರಲಾಗಿದೆ.

ಈ ಹಿಂದೂ ಅಧ್ಯಾತ್ಮ ಮೇಳದಲ್ಲಿ ವೇಣುವಾದಕ ಪ್ರವೀಣ್ ಗೋಡ್ಖಿಂಡಿಯಂತಹ ಕಲಾವಿದರಿಂದ ಹಿಡಿದು, ಶಂಕರ್‌ನಂತಹ ಚಲನಚಿತ್ರ ನಿರ್ದೇಶಕರವರೆಗೂ ಕರೆಸಲಾಗುತ್ತಿದೆ. ಇವರೆಲ್ಲರ ನಡುವೆ ಚಕ್ರವರ್ತಿ ಸೂಲಿಬೆಲೆಯಂತಹ ಅಭ್ಯಾಗತರು ಕೂಡ. ಅನೇಕ ಕಲಾವಿದರು ಚಿಂತಕರು ಭಾಗವಹಿಸುವ ಈ ಸಭೆಯಲ್ಲಿ ಅಧ್ಯಾತ್ಮವನ್ನು ಹಿಂದೂ ಅಧ್ಯಾತ್ಮವೆಂದು ಹೇಗೆ ಅರ್ಥೈಸುವರು ಎಂಬುದೇ ನನಗೆ ಅಚ್ಚರಿ.

ಎಲ್ಲದಕ್ಕಿಂತ ಮುಖ್ಯವಾಗಿ ಧರ್ಮವನ್ನೇ ಹಿಂದೂ ಧರ್ಮೀಯರು ತಪ್ಪಾಗಿ ಅರ್ಥೈಸಿಕೊಂಡಿರುವುದು. ಹಿಂದೂ ಧರ್ಮದೊಡನೆ ಗುರುತಿಸಿಕೊಳ್ಳುವವರಿಗೆ ಇರುವ ಒಂದು ದೊಡ್ಡ ಸಮಸ್ಯೆ ಎಂದರೆ, ಹಿಂದೂ ಎಂಬ ಜೀವನ ಪದ್ಧತಿಯಲ್ಲಿ ಧರ್ಮವೆಂದು ಏತಕ್ಕೆ ಹೇಳುತ್ತಾರೆಂದೂ, ಯಹೂದೀ ಕ್ರೈಸ್ತ ಮತ್ತು ಇಸ್ಲಾಂನಂತಹ ಸ್ಥಾಪಕ ಧರ್ಮಗಳಲ್ಲಿ ಧರ್ಮವೆಂದು ಏತಕ್ಕೆ ಹೇಳುತ್ತಾರೆಂದೂ ತಿಳಿಯದೇ ಹೋಗಿರುವುದು. ಹಾಗಾಗಿಯೇ ಧರ್ಮವೆಂಬ ಶಬ್ದವು ಬಹಳವೇ ಅಪವ್ಯಾಖ್ಯಾನಕ್ಕೆ ಒಳಗಾಗಿರುವುದು.

ಸ್ಥಾಪಕ ಧರ್ಮಗಳಲ್ಲಿ ಧರ್ಮವೆಂದರೆ ಮಾರ್ಗವೆಂಬ ಅಥವಾ ಆಚಾರ ವಿಚಾರಗಳಾಗಿದ್ದು ಅವರನ್ನು ಅವರು ನಂಬಿರುವ ದೇವರನ್ನು ಅಥವಾ ದೇವರ ಸ್ಥಾನವನ್ನು ತಲುಪುವುದಾಗಿದ್ದರೆ, ಭಗವದ್ಗೀತೆ ಮತ್ತು ಅದಕ್ಕಿಂತ ಹಳೆಯ ಉಪನಿಷತ್ತುಗಳಲ್ಲಿ ಧರ್ಮವೆಂಬುದನ್ನು ಅರ್ಥೈಸಿರುವುದು ಮಾರ್ಗವೆಂಬ ಅರ್ಥದಲ್ಲಿ ಅಲ್ಲ, ಬದಲಾಗಿ ಸ್ವಭಾವ ಅಥವಾ ಮೂಲಗುಣ ಎಂಬ ಅರ್ಥದಲ್ಲಿ. ಹಾಗಾಗಿಯೇ ನಾವುಗಳೂ ಇಂದಿಗೂ ನಮ್ಮಯ ಆಡುಮಾತುಗಳಲ್ಲಿ ಗುಣಧರ್ಮ ಎಂಬ ಜೋಡುಪದವನ್ನು ಬಳಸುತ್ತೇವೆ. ಯಾವುದೇ ವಸ್ತುವಿನ ಅಥವಾ ಜೀವಿಯ ಸ್ವಾಭಾವಿಕ ಅಥವಾ ನೈಸರ್ಗಿಕ ಗುಣವನ್ನು, ಸಾರಸತ್ವವನ್ನು ಧರ್ಮ ಎಂದು ಕರೆಯುವುದು.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್

ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ

ಈ ಮಾತಿನಲ್ಲಿಯೂ ತನ್ನ ಧರ್ಮವು ಸಂಪತ್ತು ಎನ್ನುತ್ತಾ ಪರಧರ್ಮವು ಭಯವನ್ನುಂಟುಮಾಡುವುದು ಎಂದು ಹೇಳುವುದು ತನ್ನ ಗುಣವನ್ನು ಬಿಟ್ಟು, ತನ್ನ ನೈಸರ್ಗಿಕ ಸ್ವಭಾವವನ್ನು ತೊರೆದುಹೋಗುವಂತಹ ಮನಸ್ಥಿತಿಯನ್ನೇ ಉದ್ದೇಶಿಸಿರುವುದು. ಹೊರತಾಗಿ ಯಾವುದೇ ಸ್ಥಾಪಕ ಧರ್ಮದ ಸೂಚಕ ಶಬ್ದವು ಇಲ್ಲಿಲ್ಲ.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ

ಅಹಂಕಾರವಿಮೂಢಾತ್ಮಾ ಕರ್ತಾ ಹಮಿತಿಮನ್ಯತೇ

ಪ್ರಕೃತಿಯು ಗುಣಗಳಿಂದ ಎಲ್ಲ ಕರ್ಮಗಳೂ ಮಾಡಲ್ಪಡುತ್ತಿದ್ದರೂ ಅಹಂಕಾರದಿಂದ ಮೂಢನಾದವನು ನಾನೇ ಮಾಡುತ್ತಿರುವವನು ಎಂದು ತಿಳಿಯುವನು.

ಸ್ವಭಾವ ಎಂದರೇನದು?

ಪ್ರಾಕೃತಿಕವಾಗಿ ಅಥವಾ ನೈಸರ್ಗಿಕವಾಗಿ ತನ್ನಲ್ಲಿ ಕೆಲವು ಬಗೆಯ ಗುಣಗಳಿದ್ದು ಅವುಗಳನುಸಾರ ಮನುಷ್ಯನು ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾನೆ. ಆದರೆ ಆ ಕೆಲಸಗಳನ್ನು ನಾನು ಇಚ್ಛಿಸಿದ್ದರಿಂದ ಅಥವಾ ತನ್ನ ಮನೋಶಕ್ತಿ ಅಥವಾ ದೇಹಶಕ್ತಿಯಿಂದ ಮಾಡುತ್ತಿದ್ದೇನೆ ಎಂದು ಮನುಷ್ಯ ಅಹಂಕಾರಪಡುತ್ತಾನೆ ಎಂದು ಹೇಳುವಾಗ ಬಹಳ ಎಚ್ಚರಿಕೆಯಿಂದ ಸ್ವಭಾವ ಅಥವಾ ಗುಣಗಳನ್ನು ಗಮನಿಸಬೇಕಾಗುತ್ತದೆ. ಮೂಲತಃ ಇರುವಂತಹ ಸ್ವಭಾವಕ್ಕೂ ರೂಢಿಯಿಂದ ಮಾಡಿಕೊಂಡಿರುವಂತಹ ಸ್ವಭಾವವನ್ನು ಬೇರೆ ಮಾಡಿ ನೋಡುವ ಕುಶಲತೆಯನ್ನು ಹೊಂದಬೇಕಾಗುತ್ತದೆ.

ಸ್ವಭಾವವನ್ನು ಕೂಡ ಅತೀ ಎಚ್ಚರಿಕೆಯಿಂದ ವಿವೇಚಿಸಬೇಕಾಗುತ್ತದೆ. ಅದೇನೆಂದರೆ, ಒಂದು ಮೂಲತಃವಾಗಿ ಪ್ರಕೃತಿದತ್ತವಾದ, ನೈಸರ್ಗಿಕವಾಗಿ ಸ್ವಾಭಾವಿಕವಾಗಿರುವ ಸ್ವಭಾವವು ಒಂದಿದ್ದು ಮತ್ತೊಂದು ಹೊರಗಿನ ಪ್ರಭಾವಗಳಿಂದ ಕೆಲವು ಗುಣಗಳು ಅಥವಾ ನಡವಳಿಕೆಗಳು ಕಾಣಿಸುವಂತಾಗಿದ್ದು, ಅದನ್ನು ಸತತವಾಗಿ ನೋಡುತ್ತಾ ಅನುಸರಿಸುತ್ತಾ ಕೊನೆಗೆ ಅದನ್ನೇ ಬಳಸಿಕೊಳ್ಳುತ್ತಾ ಅದನ್ನೇ ರೂಢಿ ಮಾಡಿಕೊಂಡು ಸ್ವಭಾವವನ್ನಾಗಿಸಿಕೊಳ್ಳುವುದು.


ಸಣ್ಣ ಉದಾಹರಣೆಯೊಂದಿಗೆ ಇದನ್ನು ಹೇಳುವುದಾದರೆ ಮುಕ್ತವಾಗಿ ಕೊಡುವಿಕೆ ಮತ್ತು ತನಗೇ ಬೇಕೆಂದು ಸಂಗ್ರಹಿಸುವಿಕೆ.

ಪ್ರಕೃತಿಯಲ್ಲಿ ನಿಸರ್ಗ ಸಹಜವಾಗಿರುವ ಸೂರ್ಯನಿಂದ ಹಿಡಿದು ಗಾಳಿ, ನೀರು, ಗಿಡಮರಗಳು, ಹೂಗಳು ಎಲ್ಲವೂ ಮುಕ್ತವಾಗಿ ಮತ್ತು ಸ್ವಾಭಾವಿಕವಾಗಿ ತಮ್ಮಲ್ಲಿರುವ ಗುಣಗಳನ್ನು ಮತ್ತು ಫಲಗಳನ್ನು ನೀಡುತ್ತಿರುತ್ತವೆ. ಆದರೆ, ಮನುಷ್ಯ ನೀಡುವಾಗ ಲೆಕ್ಕಾಚಾರಗಳನ್ನು ಹಾಕುತ್ತಾನೆ. ತಾನು ಯಾರಿಕೆ ಕೊಡಲಿ ಅಥವಾ ಬೇಡ. ಎಷ್ಟು ಕೊಡಲಿ, ಪಾತ್ರರೋ ಅಪಾತ್ರರೋ, ಎಲ್ಲವನ್ನೂ ಕೂಡ ತಾಳೆ ಹಾಕುತ್ತಾನೆ. ಕೊಡಲು ಮತ್ತು ಕೊಡದಿರಲು ತನ್ನದೇ ಆದ ಕಾರಣಗಳನ್ನು ನೀಡುತ್ತಾನೆ. ಇದು ಅವನ ರೂಢಿಯಾಗಿರುವ ಸ್ವಭಾವ. ಹೊರಗಿನ ಪ್ರಭಾವಗಳಿಂದ ಸಮಾಜ ಮತ್ತು ಕುಟುಂಬ ಇವುಗಳನ್ನು ಸತತವಾಗಿ ನೋಡುತ್ತಾ ಅವುಗಳಿಂದ ಪ್ರೇರಿತನಾಗಿ ಅಳವಡಿಸಿಕೊಂಡಿರುವ ಕೃತಕ ಸ್ವಭಾವ.

ಆದರೆ ಅವನ ನಿಜವಾದ ಸ್ವಭಾವವೆಂದರೆ ಅವನು ಪ್ರಕೃತಿಯಲ್ಲಿರುವ ಯಾವುದೇ ವಸ್ತುಗಳಂತೆ ಮತ್ತು ಪ್ರಾಣಿಗಳಂತೆ ಮುಕ್ತವಾಗಿರುವುದು. ಮನುಷ್ಯನಿಗೆ ಆಲೋಚಿಸುವ ಸಾಮರ್ಥ್ಯ ಬಂದಿದೆ. ಅದೇ ಅವನ ಶಕ್ತಿ. ಅದರಿಂದಲೇ ಅವನು ಇಂತಹ ಅತ್ಯುನ್ನತ ನಾಗರಿಕತೆಯನ್ನು ಹೊಂದಿರುವುದು ಮತ್ತು ಅಭಿವೃದ್ಧಿಯನ್ನು ಸಾಧಿಸಿರುವುದು; ಹೀಗೆಲ್ಲಾ ಹೇಳುತ್ತಾರೆ. ಆದರೆ ದೊಡ್ಡ ದುರಂತವೆಂದರೆ ಅವನ ಆಲೋಚಿಸುವ ಸಾಮರ್ಥ್ಯವೇ ಅವನ ಇಷ್ಟು







ಅಧೋಗತಿಗೆ ತಂದಿಟ್ಟಿರುವುದು. ನಾಗರಿಕತೆ ಎಂದು ಯಾವುದನ್ನು ಹೇಳುತ್ತಾನೋ ಅದು ಪ್ರಾಕೃತಿಕವಾಗಿ ಅವನ ಬಹುದೊಡ್ಡ ದುರಂತ ಮತ್ತು ಜೀವನದ ವೈಫಲ್ಯ.

ಸ್ವಧರ್ಮ ಎಂದು ಭಗವದ್ಗೀತೆಯ ಕರ್ಮಯೋಗದಲ್ಲಿ ಮತ್ತು ಸಾಂಖ್ಯಯೋಗದಲ್ಲಿ ವಿಶ್ಲೇಷಿಸಲಾಗಿರುವ ಅನೇಕ ವಿಚಾರಗಳು ಈ ದಿಸೆಯಲ್ಲಿ ನೋಡಿದರೆ ಅನೇಕ ಒಳನೋಟಗಳು ದೊರಕುವವು.

ಸ್ವಧರ್ಮ ಎಂದರೆ ನಮ್ಮ ಹಿಂದೂ ಧರ್ಮ

ವಿದ್ಯೆ ಇರಲಿ, ಇಲ್ಲದಿರಲಿ, ಬುದ್ಧಿ ಇರಲಿ, ಇಲ್ಲದಿರಲಿ, ಶ್ರೀಮಂತನಾಗಿರಲಿ, ಬಡವನಾಗಿರಲಿ ಮುಸಲ್ಮಾನರಲ್ಲಿ ಒಗ್ಗಟ್ಟಿದೆ, ಅವರ ಧರ್ಮಕ್ಕೆ ಏನಾದರೂ ಅಪಚಾರವಾಗುವಂತಾದರೆ ಅವರೆಲ್ಲರೂ ವ್ಯಗ್ರವಾಗಿ ಒಗ್ಗಟ್ಟಾಗಿ ಬಂದು ಯಾರನ್ನಾದರೂ ಸಂಹಾರ ಮಾಡುವಷ್ಟು ಬಲ ಪ್ರದರ್ಶಿಸುತ್ತಾರೆ. ಅವರು ಅಷ್ಟು ಕ್ರೋಧಾವೇಶದಿಂದ ತಮ್ಮ ಧರ್ಮದ ಮೇಲೆ ನಡೆಯುವ ಯಾವುದೇ ದಾಳಿಯನ್ನು ತಡೆಯಲು ಮತ್ತು ಪ್ರತಿದಾಳಿಯನ್ನು ಮಾಡಲು ಅವರಲ್ಲಿರುವ ಒಗ್ಗಟ್ಟೇ ಕಾರಣ ಎಂಬ ಮಾತುಗಳು ಸಾಧಾರಣ ಹಿಂದೂಗಳಲ್ಲಿ ಜನಜನಿತವಾಗಿದ್ದು, ಅವರ ಮೇಲೆ ದಾಳಿ ಅಥವಾ ಪ್ರತಿದಾಳಿಗೆ ನಮ್ಮಲ್ಲಿ ಅಂತಹ ಒಗ್ಗಟ್ಟಿಲ್ಲ ಹಾಗೂ ನಾವೂ ಅವರಂತೇ ಒಗ್ಗಟ್ಟಾಗಬೇಕು ಎಂಬ ಬ್ರಿಲಿಯಂಟ್ ಐಡಿಯಾ ಹುಟ್ಟು ಹಾಕಿದ್ದೇ ಹಿಂದೂತ್ವವಾದಿಗಳ ಸಂಘಟನೆಗಳು. ಅದರಿಂದಲೇ ಚಕ್ರವರ್ತಿ ಸೂಲಿಬೆಲೆಯಂತಹ ಅನೇಕ ಪ್ರಚಂಡವಾಗ್ಮಿಗಳು ತಮ್ಮ ಕರಳು ಕಿತ್ತು ಬರುವಂತಹ ಭಾಷಣಗಳನ್ನು ಮಾಡುತ್ತಾ ಹಿಂದೂ ರಾಷ್ಟ್ರ, ದೇಶಭಕ್ತಿ, ಮುಸ್ಲಿಂ ಪ್ರತಿರೋಧ ಇತ್ಯಾದಿಗಳನ್ನು ವ್ಯಾಪಕವಾಗಿ ಹರಡುತ್ತಾ ವಿದ್ಯೆ ಇರಲಿ, ಇಲ್ಲದಿರಲಿ, ಬುದ್ಧಿ ಇರಲಿ, ಇಲ್ಲದಿರಲಿ, ಶ್ರೀಮಂತನಾಗಿರಲಿ, ಬಡವನಾಗಿರಲಿ ಒಗ್ಗಟ್ಟಿನ ಮಂತ್ರ ಹೇಳುತ್ತಾ ಉನ್ಮತ್ತತೆಯನ್ನು ಸೃಷ್ಟಿಸಿ ಹಿಂದೂ ಧರ್ಮದ ನೆಲೆಯಲ್ಲಿ ಒಂದಾಗಿಸುತ್ತಾ ಇರುವುದು. ಮುಸಲ್ಮಾನರಲ್ಲಿ ಧರ್ಮಕ್ಕೆ ಎಂದರೆ ಒಗ್ಗಟ್ಟಾಗುತ್ತಾರೆ, ಹೋರಾಡುತ್ತಾರೆ ಎಂಬ ಜನಜನಿತ ಉಕ್ತಿಯನ್ನೇ ಯುಕ್ತಿಯನ್ನಾಗಿಸಿಕೊಂಡ ಕೀರ್ತಿ ಮಾತ್ರ ಹಿಂದೂತ್ವವಾದಿಗಳಿಗೆ ಸಲ್ಲುತ್ತದೆ. ಅದು ಯಶಸ್ವಿಯೂ ಆಗಿದ್ದು ಹಿಂದೂ ಧರ್ಮದ ಮತ್ತು ಭಾರತೀಯ ಸಮಾಜದ ದುರಂತ.

ಆದರೆ ಗೀತೋಪನಿಷದ್‌ಗಳಲ್ಲಿ ಹೇಳಿರುವಂತಹ ಧರ್ಮಕ್ಕೂ ಹಿಂದೂತ್ವವಾದಿಗಳು ಹೇಳುವಂತಹ ಧರ್ಮಕ್ಕೂ ಕ್ರೈಸ್ತ ಇಸ್ಲಾಂನಂತಹ ಸ್ಥಾಪಕ ಧರ್ಮಗಳಿಗೂ ಏನೇನೂ ಸಂಬಂಧವಿಲ್ಲ, ಇದನ್ನು ಹೇಳುವವರು ಯಾರು? ಧಾರ್ಮಿಕ ಆಚರಣೆ ವಿಚಾರಗಳನ್ನು ಮೀರಿರಬೇಕಾದ ಆಧ್ಯಾತ್ಮಿಕ ಮತ್ತು ವಿರಕ್ತ ಮಠಗಳು ಹಿಂದೂತ್ವದ ಸಂಘಟನೆಗಳ ಜೊತೆಗೆ ಕೈಜೋಡಿಸಿದಾಗ, ಸಾಮಾಜಿಕ ಸಮಾನತೆ ಮತ್ತು ಜಾತ್ಯತೀತ ಸಮಾನತೆಗಳನ್ನು ಹೊಂದುವ ಉದ್ದೇಶದ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುವಂತಹ ಪಕ್ಷಗಳು ಕೂಡ ಇವುಗಳ ಜೊತೆ ಶಾಮೀಲಾದಾಗ, ಮನುಷ್ಯರನ್ನು ಪರಸ್ಪರ ಒಂದುಗೂಡಿಸುವಂತಹ ಸಂಮೋಹಕ ತಂತ್ರವನ್ನು ಅಭ್ಯಾಸ ಮಾಡುವ ಕಲಾವಿದರೂ ಕೂಡ ಇವರ ಜೊತೆ ಸಹಭಾಗಿಗಳಾದಾಗ ಧಾರ್ಮಿಕತೆಯ ಪರೆಗಳನ್ನು ಕಳಚುವವರು ಯಾರು?

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ

ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ

ಮನುಷ್ಯನು ಜೀರ್ಣವಾದ ವಸ್ತ್ರಗಳನ್ನು ಬಿಟ್ಟು ಬೇರೆ ಹೊಸವಸ್ತ್ರಗಳನ್ನು ಹೇಗೆ ಧರಿಸುವನೋ ಅದರಂತೆಯೇ ದೇಹಿಯು (ಆತ್ಮನು) ಜೀರ್ಣವಾದ ಶರೀರವನ್ನು ಬಿಟ್ಟು ಬೇರೆ ಹೊಸ ಶರೀರವನ್ನು ಪಡೆಯುವನು ಎಂದು ಹೇಳುತ್ತಾ ಆತ್ಮಕ್ಕೆ ಸಾವಿಲ್ಲ, ಅದಕ್ಕೇನೂ ಆಗದು. ಅದು ಚೈತನ್ಯ. ಅದು ವಿಶ್ವದಲ್ಲಿರುವ ಪ್ರಾಕೃತಿಕವಾದ ಗಾಳಿ, ಬೆಳಕು, ನೀರಿನ ಆಧಾರಾಂಶದ ರೀತಿಯಲ್ಲಿರುವ ಯಾವುದೇ ಬಗೆಯ ಚೈತನ್ಯದಂತೆ ಎಂದು ಹೇಳುತ್ತಾ ವಿಯೋಗದಿಂದ ಉಂಟಾಗುವ ವಿಷಾದ ಮತ್ತು ವಿರಹಗಳಿಗೆ ಬರಿಯ ಸಾಂತ್ವನ ಹೇಳುವುದಷ್ಟೇ ಅಲ್ಲದೇ ಬಿಂದುವನ್ನು ಸಿಂಧುವಾಗಿಸುವರಿತೆಹ ಅಥವಾ ಹನಿ ನೀರನ್ನು ಸಾಗರಕ್ಕೆ ಸೇರಿಸಿ ಸಾಗರದ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಾಗುವಂತಹ ಆಲೋಚನಾ ಕ್ರಮವನ್ನು ಬೆಳೆಸಲು ಯತ್ನಿದವರ್‍ಯಾರೋ ಹೇಳಿದ್ದು ಹೀಗೆ,

"ನೈನಂಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ ನಚೈನಂಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ, ಅಚ್ಛೇದ್ಯೋಯಮದಾಹ್ಯೋಯಮಕ್ಲೇದ್ಯೋಶೋಷ್ಯ ಏವ ಚ, ನಿತ್ಯಃ ಸರ್ವಗತಃ ಸ್ಥಾಣುರಚಲೋಯಂ ಸನಾತನಃ"

ಈ ಆತ್ಮವನ್ನು ಶಸ್ತ್ರಗಳು ಕಡಿದುಹಾಕಲಾರದು, ಅಗ್ನಿಯು ಸುಡುವುದಿಲ್ಲ. ನೀರು ತೋಯಿಸಲಾಗದು, ಗಾಳಿ ಒಣಗಿಸುವುದಿಲ್ಲ. ಹಾಗೆಯೇ ಈ ಆತ್ಮನು ಭೇದಿಸಲ ಸಾಧ್ಯನೂ, ಸುಡದವನೂ, ಒಣಗದವನೂ ಆಗಿರುವನಲ್ಲದೆ ನಿತ್ಯನೂ ಸರ್ವವ್ಯಾಪಿಯೂ ಸ್ಥಿರನೂ ಅಚಲನೂ ಸನಾತನನೂ ಆಗಿರುವನು.

ಇದು ಆದಿ ಅಂತ್ಯವಿಲ್ಲದ ಸನಾತನವಾದಂತಹ ವಸ್ತುವಿನ ಕಲ್ಪನೆ. ಇದಕ್ಕೆ ಇರಬಹುದೆಂಬ ಸ್ವಭಾವವನ್ನೇ, ಗುಣಮೂಲವನ್ನೇ ಧರ್ಮವೆನ್ನುವುದು. ಸಂಕುಚನದಿಂದ ವಿಕಸನಕ್ಕೆ ಒಯ್ಯಲು ಅಗತ್ಯವಿರುವ ಮಾರ್ಗವನ್ನೇ ಆಧ್ಯಾತ್ಮ ಮಾರ್ಗವೆಂದೂ ಕರೆಯುವುದು. ಹೊರತು, ಯಾವುದೇ ಸ್ಥಾಪಕ ಧರ್ಮವನ್ನಾಗಲಿ, ಧರ್ಮೀಯನನ್ನಾಗಲಿ ಮಾಡುವಂತಹ ಆಶಯವನ್ನು ನಮ್ಮ ಪುರಾತನ ಋಷಿಗಳು ಹೊಂದಿರಲಿಲ್ಲ, ಅದು ಅವರ ಬಯಕೆಯೂ ಆಗಿರಲಿಲ್ಲ, ಇದು ಇಂದಿನ ಜನಕ್ಕೆ ಅರ್ಥವೇ ಆಗದಂತೆ ಅಥವಾ ಆ ವಿಷಯಗಳೇ ತಲುಪದಂತೆ ಧಾರ್ಮಿಕತೆಯ ಅಫೀಮನ್ನು ಉಣ್ಣಿಸುತ್ತಾ ಬರುತ್ತಿರುವುದಕ್ಕೆ ನಾವು ಸಾಕ್ಷಿಯಾಗಿದ್ದೇವೆ.

ಬ್ರಾಹ್ಮಣತ್ವ ಮತ್ತು ಬ್ರಾಹ್ಮಣ್ಯ

ಇನ್ನು ಇತ್ತೀಚೆಗೆ ಬೆಳಗಾವಿಯಲ್ಲಿ ಬ್ರಾಹ್ಮಣ ಸಮ್ಮೇಳನವೊಂದು ನಡೆದು ಅಲ್ಲಿ ತ್ರಿಮತಸ್ಥರು ಒಂದಾಗಿ ಬ್ರಾಹ್ಮಣ್ಯವನ್ನು ಉಳಿಸಬೇಕೆಂಬ ಧ್ವನಿ ಎದ್ದಿತ್ತು.

ಹಿಂದೂ ಧರ್ಮವನ್ನು ಸಂಕುಚಿತಗೊಳಿಸುವ ಮಾರ್ಗದಲ್ಲಿಯೇ ಬ್ರಾಹ್ಮಣತ್ವವನ್ನೂ ಸಂಕುಚಿತಗೊಳಿಸುವ ಮಹಾನುಭಾವರು ಅಲ್ಲಿದ್ದರು.

ಜನ್ಮನಾ ಜಾಯತೇ ಶೂದ್ರಃ, ಕರ್ಮಣಾ ಜಾಯತೇ ದ್ವಿಜಃ ಎನ್ನುತ್ತಾ ಅಂದಿನವರು (ಇವರರ್ಥದಲ್ಲಿ ಸನಾತನಿಗಳು) ಬ್ರಾಹ್ಮಣನಿಗೆ ಹುಟ್ಟಿದ ಮಾತ್ರಕ್ಕೆ ಬ್ರಾಹ್ಮಣನಾಗಲಾರ, ಬ್ರಹ್ಮಜ್ಞಾನಂತು ಬ್ರಾಹ್ಮಣಃ ಅಂದರೆ ಬ್ರಹ್ಮಜ್ಞಾನವಿರುವವನೇ ಬ್ರಾಹ್ಮಣನಾಗುತ್ತಾನೆ. ದ್ವಿಜ ಎಂದರೆ ಎರಡನೆಯ ಬಾರಿ "ಸಂಸ್ಕಾರದ ಫಲವಾಗಿ" ಪಡೆಯುವ ಮರುಹುಟ್ಟಿನಿಂದ ಎರಡನೇ ಬಾರಿ ಜನಿಸಿದ ದ್ವಿಜನಾಗುತ್ತಾನೆ.

ಸಂಸ್ಕಾರಕ್ಕೆ ಅಂದರ ಪಡೆದ ಹೊಸ ತಿಳಿವಳಿಕೆಗೆ ಬದ್ಧವಾಗಿ ಅದರ ಅರಿವಿನ ಹರವನ್ನು ವಿಸ್ತಾರಗೊಳಿಸಿಕೊಳ್ಳುತ್ತಾ ಆ ಮಾರ್ಗದಲ್ಲಿ ವಿಕಾಸ ಹೊಂದುವಂತಹ ದೀಕ್ಷೆಯನ್ನು ಎಲ್ಲಾ ಮಾರ್ಗಸ್ಥರೂ ಬಹು ಗೌರವದಿಂದ ನೋಡುತ್ತಾರೆ.

ಯೆಹೂದ್ಯರ ನಾಯಕರಲ್ಲಿ ಒಬ್ಬನಾಗಿದ್ದ ನಿಕೋದಮನೆಂಬ ಫರಿಸಾಯನು ಯೇಸುವಿನ ಜೊತೆಗೆ ಮಾತಾಡುವಾಗಲೂ ಕೂಡ ಯೇಸು ಇಂತಹ ಎರಡನೇ ಹುಟ್ಟಿನ ಬಗ್ಗೆ ಹೇಳುತ್ತಾನೆ.

ಒಬ್ಬನು ಹೊಸದಾಗಿ ಹುಟ್ಟದಿದ್ದರೆ ದೇವರ ಸಾಮ್ರಾಜ್ಯವನ್ನು ಸೇರಲಾರನು ಎಂದು ಹೇಳುತ್ತಾ ಶರೀರದಿಂದ ಹುಟ್ಟಿದ್ದು ಶರೀರಮಯ, ದೇವರಿಂದ ಹುಟ್ಟಿದ್ದು ದೈವಮಯ ಎಂದು ಪ್ರಾಕೃತಿಕವಾಗಿ ದೊರಕಿರುವ ಲೌಕಿಕ ಶರೀರದಿಂದಾಚೆಗೆ ಪ್ರಾಕೃತಿಕವಾಗಿಯೇ ಇರುವಂತಹ ಮೂಲ ಚೈತನ್ಯಕ್ಕೆ ಒಯ್ಯುವಂತಹ ಅರಿವಿನ ದೀಕ್ಷೆಯ ಬಗ್ಗೆ ಮಾತಾಡುತ್ತಾನೆ.


"ಗಾಳಿ ತೋಚಿದ ಕಡೆ ಬೀಸುತ್ತದೆ. ಅದರ ಶಬ್ದ ನಿನಗೆ ಕೇಳುತ್ತದೆ. ಆದರೆ ಅದು ಎಲ್ಲಿಂದ ಬರುತ್ತದೆ ಮತ್ತು ಎಲ್ಲಿಗೆ ಹೋಗುತ್ತದೆ ಎಂಬುದು ನಿನಗೆ ತಿಳಿಯದು" ಎಂದು ಹೇಳುವ ಯೇಸು, ಗ್ರಹಿಸಲಾಗದ ಚೈತನ್ಯದ ಮೂಲದ ಬಗ್ಗೆ ಮಾತಾಡುತ್ತಾನೆ. ತಮ್ಮ ಲೌಕಿಕ ಗ್ರಹಿಕೆಗಳು ಮತ್ತು ಅರ್ಥೈಸುವಿಕೆಗಳು ಸೀಮಿತ ಎಂಬುದನ್ನೂ ಸೂಚಿಸುತ್ತಾನೆ.

ಬ್ರಾಹ್ಮಣತ್ವದಲ್ಲಿಯೂ ಕೂಡ ಎರಡನೇ ಬಾರಿ ಹುಟ್ಟಿದವನು ದ್ವಿಜನಾಗುತ್ತಾನೆ ಎಂದು ಹೇಳುವುದು ಹೀಗೆಯೇ.

ಛಾಂದೋಗ್ಯೋಪನಿಷತ್ತಿನ ಗೌತಮನಂತೆ ಸತ್ಯವನ್ನು ಹೇಳುವವನೇ ಬ್ರಾಹ್ಮಣ (ನೈತದ್ ಅಬ್ರಾಹ್ಮಣೋ ವಿವಿಕ್ತುಮ್ ಅರ್ಹತಿ ಸಮಿದಮ್ ಸೋಮ್ಯಾಹರೋಪ ತ್ವ ನೇಷ್ಯೆ ನ ಸತ್ಯದಗಾ ಇತಿ) ಅಥವಾ ಮಹಾಭಾರತದ ವನಪರ್ವದಲ್ಲಿ ವಿದುರ ಹೇಳುವಂತೆ ಹುಟ್ಟಿನಿಂದ, ಸಂಧ್ಯಾವಂದನೆ ಇತ್ಯಾದಿ ಕರ್ಮಗಳಿಂದ ಬ್ರಾಹ್ಮಣತ್ವ ಲಭಿಸದು. ಅದು ಕೇವಲ ಸದಾಚಾರದಿಂದ ಮಾತ್ರ ಲಭ್ಯ ಎನ್ನುವಂತಹ ಬ್ರಾಹ್ಮಣತ್ವವನ್ನು ಉದಾತ್ತಗೊಳಿಸುವ ಬದಲು ಇನ್ನೂ ತ್ರಿಮತಸ್ಥರು ಒಂದಾಗಬೇಕು, ಅಧಿಕಾರ ಗದ್ದುಗೆ ಹಿಡಿಯಬೇಕು ಅಂತ ಮಾತಾಡ್ತಿರೋದು ನೋಡಿದರೆ, ಮಹಾಭಾರತದ ಕಾಲಕ್ಕಿಂತ, ಉಪನಿಷತ್ತುಗಳ ಕಾಲಕ್ಕಿಂತ ಈ ಬ್ರಾಹ್ಮಣರೆನಿಸಿಕೊಂಡವರು ಜಾರುತ್ತಾಹೋಗುತ್ತಿದ್ದಾರೆ ಎಂದು ಅನಿಸುತ್ತದೆ. ಇನ್ನೂ ಬ್ರಾಹ್ಮಣ್ಯದ ಶ್ರೇಷ್ಠತೆಯ ವ್ಯಸನದಿಂದ ಬಿಡುಗಡೆಯೇ ಹೊಂದಿಲ್ಲವೆಂಬುದು ತಿಳಿಯುತ್ತದೆ.

ತಾನು ನರಕಕ್ಕೆ ಹೋದರೂ ಉಳಿದವರೆಲ್ಲಾ ಸ್ವರ್ಗಕ್ಕೆ ಹೋಗಲೆಂದು ಗೋಪುರ ಹತ್ತಿ ಉಪದೇಶಿತ ಮಂತ್ರವನ್ನು ಜೋರಾಗಿ ಕೂಗಿ ಹೇಳಿದ, ತಳವರ್ಗದವರಿಗೂ ವೈಷ್ಣವ ದೀಕ್ಷೆಯನ್ನು ಕೊಟ್ಟು, ಆಗಿನ ಸಾಮಾಜಿಕ ಅವಮಾನಗಳಿಂದ ದಲಿತರನ್ನು ಕಾಪಾಡಿ ತಮ್ಮ ಶ್ರದ್ಧೆಯ ಧಾರ್ಮಿಕತೆಯನ್ನು ಅನುಸರಿಸಲು ಅನುವು ಮಾಡಿಕೊಟ್ಟ ರಾಮಾನುಜಾಚಾರ್ಯರನ್ನೂ ತ್ರಿಮತಸ್ಥರ ಹೆಸರಲ್ಲಿ ಸೇರಿಸಿಕೊಳ್ಳುವಂತಹ ಧಾರ್ಷ್ಟ್ಯ ತೋರದಿದ್ದರೆ ಒಳ್ಳೆಯದು. ಬಸವಣ್ಣನವರು ಮಾಡುವಂತಹ ಧಾರ್ಮಿಕ ಸಾಮಾಜಿಕ ಕ್ರಾಂತಿಯನ್ನೇ ರಾಮಾನುಜರೂ ಮಾಡಹೊರಟರೂ, ಅವರಿಗೆ ಇದ್ದಂತಹ ರಾಜಕೀಯ ಮತ್ತು ಧಾರ್ಮಿಕ ಸಮಾಜದ ವಾತಾವರಣ ಬೇರೆಯೇ ಇದ್ದುದರಿಂದ ಅದು ಬೇರೆಯೇ ರೂಪ ಪಡೆಯಿತು. ■

ಮೋದಿಯಂತಹ ದೀಡ್-ಪಂಡಿತ್ ಕೈಯಲ್ಲಿ ದೇಶ ಸಿಕ್ಕ





ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದ ಇಂದಿನ ವರೆಗೂ ಆಗಿಹೋಗಿರುವ ಪ್ರಧಾನ ಮಂತ್ರಿಗಳಲ್ಲಿ ಕೇವಲ ಮನಮೋಹನ್ ಸಿಂಗ್ ಒಬ್ಬರನ್ನು ಹೊರತು ಪಡಿಸಿ ಬೇರೆ ಪ್ರಧಾನ ಮಂತ್ರಿಗಳು ಅರ್ಥಶಾಸ್ತ್ರದ ಉನ್ನತ ವ್ಯಾಸಂಗ ಮಾಡಿದವರಲ್ಲ, ನೆಹರು ತಮ್ಮ ಹೆಸರಿನ ಮುಂದೆ ಬ್ಯಾರಿಸ್ಟರ್ ಎಂಬ ಪದವಿ ಹಾಕುತ್ತಿದ್ದರೂ ಅವರು ಕಾನೂನು ವ್ಯಾಸಂಗ ಪೂರ್ಣ ಮಾಡಿರಲಿಲ್ಲ. ಕೇವಲ ಲಾಲ್ ಬಹದ್ದೂರ್ ಶಾಸ್ತ್ರಿ ಮಾತ್ರ ವ್ಯಾಸಂಗ ಪೂರ್ಣ ಮಾಡಿದ್ದು, ಉಳಿದ ಹೆಚ್ಚಿನವರು ಕೇವಲ ಪದವಿ ಅಥವಾ ಅದಕ್ಕಿಂತ ಕಡಿಮೆ ವ್ಯಾಸಂಗ ಮಾಡಿದವರು. ಹಾಗೆ ನೋಡಿದರೆ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಪದವಿಯನ್ನೂ ಪೂರ್ಣ ಮಾಡಿರಲಿಲ್ಲ, ನಮ್ಮ ದೇವೇಗೌಡರೂ ಅಷ್ಟೇ. ಆದರೆ ಇವರೆಲ್ಲಾ ದೇಶಕ್ಕೆ ಹಾಗೂ ಜನತೆಗೆ ಸಂಬಂಧಪಟ್ಟ ವಿಷಯದಲ್ಲಿ ಗಹನ ನಿರ್ಣಯಗಳನ್ನು ತೆಗೆದುಕೊಳ್ಳುವ ಮುಂಚೆ ಸಂಬಂಧಪಟ್ಟ ಇಲಾಖೆಯ ಅನುಭವಿ ಸೆಕ್ರಟರಿ, ನುರಿತ ಅರ್ಥ ಶಾಸ್ತ್ರಜ್ಞರು ಮತ್ತು ರಿಸರ್ವ್ ಬ್ಯಾಂಕಿನಿಂದ ತಪ್ಪದೇ ಸಲಹೆ ಕೇಳುತ್ತಿದ್ದರು. ಇಂದಿರಾ ಗಾಂಧಿಯಂತಹ ಅಪಾರ ಧೈರ್ಯದ ವ್ಯಕ್ತಿ ಸಹ ಬ್ಯಾಂಕ್ ರಾಷ್ಟ್ರೀಕರಣ ಮತ್ತು ರಾಜಧನ ರದ್ದು ಮಾಡುವ ಮುಂಚೆ ಅರ್ಥಶಾಸ್ತ್ರಜ್ಞರನ್ನು ಮತ್ತು ರಿಸರ್ವ್ ಬ್ಯಾಂಕನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. (ತುರ್ತುಪರಿಸ್ಥಿತಿ ಹೇರುವ ವಿಷಯದಲ್ಲಿ ಮಾತ್ರ ಅವರು ಯಾರನ್ನೂ ಕೇಳದೇ ದೊಡ್ಡ ತಪ್ಪು ಮಾಡಿ ನಂತರ ಅದರ ಕೆಟ್ಟ ಫಲ ಅನುಭವಿಸಿದರು).

ಆದರೆ ಈಗ ನೋಟು ರದ್ದತಿಯಂತಹ ಅತೀ ದೀರ್ಘ ಪರಿಣಾಮ ಬೀರುವ ಯೋಜನೆಯ ಬಗ್ಗೆಯೂ ಮೋದಿ ಯಾವುದೇ ಪರಿಣಿತರ ಸಲಹೆ ಕೇಳದೆ ಕೇವಲ ತಾವು ಮೂವರೇ - ಅಂದರೆ ಮೋದಿ, ಅಮಿತ್ ಶಾ ಮತ್ತು ಜೇಟ್ಲಿ - ಕೂಡಿ ಇಂತಹ ದೇಶದ ಪ್ರತಿಯೊಂದು ಕ್ಷೇತ್ರವನ್ನೂ ಆಘಾತಗೊಳಿಸುವ ನೋಟು ರದ್ದು ಯೋಜನೆ ಪ್ರಕಟಿಸಿದರು. ಅವರು ಕೇವಲ 72 ಗಂಟೆಗಳಲ್ಲಿ ನಮ್ಮ ದೇಶಕ್ಕೆ ಬೇಕಾಗುವಷ್ಟು ನೋಟುಗಳನ್ನು ಛಾಪಿಸುವುದು ಸಾಧ್ಯವೆಂದು ತಿಳಿದಿದ್ದ ಅಜ್ಞಾನಿಗಳು. ಹಳೆಯ ನೋಟಿನಷ್ಟೇ ಸಂಖ್ಯೆಯಲ್ಲಿ ಹೊಸ ನೋಟು ಛಾಪಿಸುವ ಕೆಲಸದ ಅಗಾಧತೆ ಹಾಗೂ ನಮ್ಮ ಎಲ್ಲಾ ಸೆಕ್ಯುರಿಟಿ ಪ್ರೆಸ್‌ಗಳ ಕೆಪಾಸಿಟಿಯ ಇತಿಮಿತಿ ಬಗ್ಗೆ ಸ್ವಲ್ಪವೂ ಜ್ಞಾನ ಅವರಿಗೆ ಇರಲಿಲ್ಲ,

ಈಗ ನೋಡಿದರೆ 72 ಗಂಟೆ ಬಿಡಿ 72 ದಿನಗಳಲ್ಲೂ ರದ್ದಾದ ಪ್ರಮಾಣದಷ್ಟು ನೋಟು ಛಾಪಿಸುವುದು ಸಾಧ್ಯವಿಲ್ಲವೆಂದು ತಿಳಿದು ಬಂದಮೇಲೆ ಈ ಮೂವರೂ ಈಗ ತಮ್ಮ ತಪ್ಪನ್ನು ಮುಚ್ಚಿಡಲು ಜನರಿಗೆ ದೇಶಭಕ್ತಿ, ತಾಳ್ಮೆ, ತ್ಯಾಗದ ಬೋಧನೆಗೆ ಇಳಿದಿದ್ದಾರೆ. ನಿಜವಾಗಿ ಈ ಮುವರೂ ಅರ್ಥಶಾಸ್ತ್ರಜ್ಞರಲ್ಲ, ಜೈಟ್ಲಿ ಕಾನೂನು ಪದವೀಧರರು. ಅಮಿತ್ ಶಾ ಕೇವಲ ಪಿಯೂಸಿವರೆಗೆ ಮಾತ್ರ ಕಲಿತು ಶೇರ್ ಮಾರ್ಕೆಟ್ಟಿನಲ್ಲಿ ಬ್ರೋಕರ್ ಕೆಲಸ ಮಾಡುತ್ತಿದ್ದವನು, ಮೋದಿಯ ವಿದ್ಯಾರ್ಹತೆಯಂತೂ ಪ್ರಶ್ನಾರ್ಹ.

ಹಾಗೆ ನೋಡಿದರೆ ರಾಹುಲ್ ಗಾಂಧಿ ಮತ್ತು ಮೋದಿ ಇಬ್ಬರೂ 10ನೇ ಕ್ಲಾಸ್ ವರೆಗೆ ಕಲಿತಿರುವುದು ಮಾತ್ರ ಅಧಿಕೃತ. ಆದರೆ ಆರೆಸ್ಸೆಸ್ ಸೇರಿದ ನಂತರ ಮೋದಿ ಧಾರ್ಮಿಕ ಉನ್ಮಾದ ಮತ್ತು ಮುಸ್ಲಿಂ ದ್ವೇಷ ತೋರಿಸಿ ಬಿಜೆಪಿಯಲ್ಲಿ ಮೇಲೇರಿ ಇಂದಿನ ಸ್ಥಾನಕ್ಕೆ ಬಂದರು. ಆದರೆ ಇಂತಹ ರಾಜಕೀಯ ಜಾಣ್ಮೆ, ನೀಚ ತಂತ್ರಗಾರಿಕೆ ಗೊತ್ತಿಲ್ಲದ್ದ ರಾಹುಲ್ ಗಾಂಧಿ ಮಾತ್ರ ಇತರರು ಕೈ ಹಿಡಿದು ಮೇಲೆಬ್ಬಿಸಲು ಪ್ರಯತ್ನಿಸಿದರೂ ಅವರು ಇದ್ದಲ್ಲೇ ಇದ್ದಾರೆ. ಆದರೂ ಒಂದು ವೇಳೆ ರಾಹುಲ್ ಗಾಂಧಿ ಮೋದಿಯ ಈಗಿನ ಸ್ಥಾನದಲ್ಲಿ ಇರುತ್ತಿದ್ದರೂ ಈಗ ಮೋದಿ ಮಾಡಿರುವಂತಹ ಪ್ರಮಾದ ರಾಹುಲ್ ಗಾಂಧಿಯಿಂದ ಬಹುಶಃ ಆಗುತ್ತಿರಲಿಲ್ಲ, ಕಾರಣ ರಾಹುಲ್ ಗಾಂಧಿಗೆ ತನ್ನ ಬೌದ್ಧಿಕ ಶಕ್ತಿಯ ಇತಿಮಿತಿ ಗೊತ್ತಿದೆ. ತಾನೇ ಮಹಾ ಬುದ್ಧಿವಂತ ಎಂದು ರಾಹುಲ್ ಭಾವಿಸಿಲ್ಲ, ಹಾಗಾಗಿ ಅವರು ಆರ್ಥಿಕ ತಜ್ಞರನ್ನು ಕೇಳದೇ ಇಂತಹ ದೊಡ್ಡ ನಿರ್ಣಯ ಕೈಗೊಳ್ಳುತ್ತಲೇ ಇರಲಿಲ್ಲ.


ನಿಜ ಬುದ್ಧಿವಂತನ ಕೈಯಲ್ಲಿ ದೇಶ ಸಿಕ್ಕರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ, ಆದರೆ ಮೋದಿಯಂತಹ ದೀಡ್-ಪಂಡಿತ್ (ಮರಾಠಿಯಲ್ಲಿ ಒಂದೂವರೆ ಬುದ್ಧಿವಂತ ಎಂಬ ಅನ್ವರ್ಥ) ಕೈಯಲ್ಲಿ ದೇಶ ಸಿಕ್ಕರೆ ಆರ್ಥಿಕ ಅಪಾಯ ನಿಶ್ಚಿತ.

ಒಂದು ತಿಂಗಳಿಂದಲೂ ಆಗುತ್ತಿರುವ ಹೊಸ ನೋಟುಗಳ ಭಾರೀ ಕೊರತೆಯು ಸರಕಾರದ ತಪ್ಪು ಲೆಕ್ಕಾಚಾರದಿಂದಾಗಿ ಆದುದಲ್ಲ, ಅದು ಬ್ಯಾಂಕುಗಳಲ್ಲಿಯ ಭ್ರಷ್ಟಾಚಾರದಿಂದಾಗಿ ಕೊರತೆ ಆದದ್ದು ಎಂದು ಹೇಳಿ ಕೇಂದ್ರ ವಿತ್ತ ಸಚಿವಾಲಯ ತನ್ನ ತಪ್ಪನ್ನು ಬ್ಯಾಂಕುಗಳ ತಲೆಯ ಮೇಲೆ ಹೊರಿಸಿ ತಾನು ಪಾರಾಗುವ ಪ್ರಯತ್ನ ಮಾಡುತ್ತಿದೆ. ಹಾಗಾದರೆ ನೋಟು ರದ್ದತಿಯು ಭ್ರಷ್ಟಾಚಾರವನ್ನು ಮಟ್ಟ ಹಾಕುತ್ತದೆ ಎಂದು ಅಡಿಗಡಿಗೆ ಮೋದಿ ಮತ್ತು ಬಿಜೆಪಿಯವರು ಹೇಳುತ್ತಿದ್ದದ್ದು ಸಂಪೂರ್ಣ ಉಲ್ಟಾ ಆಯಿತು ಎಂದು ಸರಕಾರವೇ ಒಪ್ಪಿಕೊಂಡಿದೆ ಎಂದಾಯಿತು. ಅಂದರೆ ಹಳೆ ನೋಟು ರದ್ದತಿ ಹಾಗೂ ಹೊಸ ನೋಟು ಚಲಾವಣೆಯು ಭ್ರಷ್ಟಾಚಾರ ಕಡಿಮೆ ಮಾಡುವ ಬದಲು ಭ್ರಷ್ಟಾಚಾರ ಹೆಚ್ಚೇ ಮಾಡಿತು ಎಂದು ಸರಕಾರವೇ ಅಧಿಕೃತವಾಗಿ ಒಪ್ಪಿಕೊಂಡಂತಾಯಿತು.

ಅಷ್ಟೇ ಅಲ್ಲ, ನೋಟು ರದ್ದತಿಯಾದ ಮೇಲೆ ಹಿಂದಿನ ಒಂದು ತಿಂಗಳಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿಗಳು ನಮ್ಮ ಕಾರ್ಯನಿಮಿತ್ತ ವಿವಿಧ ಕೇಂದ್ರ ಮತ್ತು ರಾಜ್ಯ ಸರಕಾರಿ ಕಚೇರಿಗಳಿಗೆ ಭೇಟಿ ಕೊಡುವಾಗ ಕಂಡಿದ್ದೇನೆಂದರೆ ಯಾವೊಂದು ಸರಕಾರಿ ಕಚೇರಿಯಲ್ಲಿಯೂ ಲಂಚಗುಳಿತನ ಒಂಚೂರೂ ಕಡಿಮೆಯಾಗಿಲ್ಲ, ಆರ್‌ಟಿಓ ಕಚೇರಿಯ ಹೊರಗಡೆ ಅದೇ ಹಳೆಯ ಬ್ರೋಕರ್‌ಗಳು ಎಂದಿನಂತೆ ರಾಜಾರೋಷವಾಗಿ ತಮ್ಮ ಲಂಚದ ವ್ಯವಹಾರ ನಡೆಸುತ್ತಲೇ ಇದ್ದಾರೆ.


ಇಂತಹದೆಲ್ಲಾ ಮೋದಿ ಮತ್ತು ಪಿಂಡಗಳಿಗೆ ಗೊತ್ತಿಲ್ಲವೆಂದೇನೂ ಅಲ್ಲ, ಗುಜರಾತಿಗಳ ರಕ್ತದಲ್ಲಿಯೇ ವ್ಯಾಪಾರ, ಲಾಭ ಮತ್ತು ಕಮಿಷನ್ ಎಂಬ ಹಸಿರು ಕಣಗಳು ಹುಟ್ಟಿನಿಂದ ಇರುವುದರಿಂದ ಅವರು ತಮ್ಮ ಹೆತ್ತ ತಾಯಿಗೂ ಯಾವುದೇ ಕೆಲಸ ಲಾಭ ಮತ್ತು ಕಮಿಷನ್ ಇಲ್ಲದೇ ಮಾಡಿಕೊಡುವುದಿಲ್ಲ ಎಂಬ ಮಾತು ಮುಂಬೈಯಲ್ಲಿ ಬ್ರಿಟಿಷರ ಕಾಲದಿಂದಲೂ ಚಾಲ್ತಿಯಲ್ಲಿದೆ. ಹಾಗಾಗಿ ಒಟ್ಟಾರೆ ಈ ಗುಜರಾತಿ ಮೋದಿಯ ಸರಕಾರದ ನೋಟು ರದ್ದತಿಯ ಒಳ ಉದ್ದೇಶವೆಲ್ಲಾ ಪೇಟಿಎಂ ಮತ್ತು ರಿಲಯನ್ಸ್-ಜಿಯೋ-ಮನೀ ಇಂತಹ ಇ-ವ್ಯಾಲೆಟ್ ಡಿಜಿಟಲ್ ಪೇಮೆಂಟ್ ಕಂಪನಿಗಳಿಗೆ ಭಾರೀ ಲಾಭ ಒದಗಿಸುವುದೇ ಆಗಿತ್ತು ಎಂಬುದು ಈಗೀಗ ಜನರಿಗೆಲ್ಲಾ ಅರ್ಥವಾಗುತ್ತಿದೆ. ಗುಜರಾತಿಗಳು ಕೇವಲ ತಮ್ಮವರ ಲಾಭ ಮಾತ್ರ ನೋಡಿಕೊಳ್ಳುವುದರಲ್ಲಿ ಚಾಣಾಕ್ಷರು ಎಂಬುದು ಸುಳ್ಳಲ್ಲ.

- ಜಿ. ರವಿಕಿರಣ, ಮೈಸೂರು



ಭಕ್ತರ ಸೋಷಿಯಲ್ ಮೀಡಿಯಾದಲ್ಲಿ ಮೋದಿ ತಲ್ಲೀನ

ಪ್ರಧಾನಿ ಮೋದಿಯವರು ಮೊನ್ನೆ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ನೋಟು ರದ್ದತಿಯನ್ನು ವೈದಿಕ ಯಜ್ಞಕ್ಕೆ ಹೋಲಿಸಿದ್ದು ಸೂಕ್ತವಾಗಿದೆ. ಕಾರಣ ವೈದಿಕ ಯಜ್ಞ ವ್ಯರ್ಥ ಎಂದು ಯುಗಯುಗಗಳಿಂದ ಸಾಬೀತಾಗಿದೆ. ಈಗ ಮೋದಿಯವರು ನೋಟು ರದ್ದತಿಯಿಂದ ಮುಂದೊಂದು ದಿನ ದೇಶದ ಕಲ್ಯಾಣವಾಗುತ್ತದೆ ಎಂದು ಜನರಿಗೆ ಆಕಾಶ ತೋರಿಸಿ ಕಿವಿಗೆ ಹೂ ಇಟ್ಟಂತೆ, ಯಜ್ಞ-ಯಾಗಗಳಿಂದಲೂ ಲೋಕ ಕಲ್ಯಾಣವಾಗುತ್ತದೆ ಎಂದು ಹಿಂದಿನ ಮೂರು ಸಾವಿರ ವರ್ಷಗಳಿಂದ ವೈದಿಕರು ಮುಗ್ಧ ಜನರ ಮೂಗಿಗೆ ತುಪ್ಪ ಸವರಿ ಮೋಸ ಮಾಡುತ್ತಲೇ ಇದ್ದಾರೆ.




ಹಿಂದಿನ ಕಾಲದಲ್ಲಿ ಮುಗ್ಧ ಜನರನ್ನು ದೇವರ ಹೆಸರಲ್ಲಿ ಮೋಸ ಮಾಡಿ ಸಮಾಜದ ಮೇಲೆ ತಮ್ಮ ಹಿಡಿತ ಬಲಗೊಳಿಸಲು ವೈದಿಕರು ಯಜ್ಞ ಯಾಗ ಮಾಡುತ್ತಿದ್ದರು. ಯಜ್ಞದಿಂದ ಕೇವಲ ಕಟ್ಟಿಗೆ ಸುಟ್ಟು ಪರಿಸರ ನಾಶ ಮಾಡಿ, ಸೀರೆ ಬಟ್ಟೆ ಬೆಂಕಿಯಲ್ಲಿ ಸುಟ್ಟು, ಪ್ರಾಣಿ ಬಲಿ ಕೊಟ್ಟು, ಹೊಗೆಯಿಂದ ವಾಯು ಮಾಲಿನ್ಯ ಹೆಚ್ಚಿಸಲಾಗುತ್ತಿತ್ತು ಅಷ್ಟೇ. ಈಗಿನ ನೋಟು ರದ್ದತಿಯೂ ಯಜ್ಞದಷ್ಟೇ ನಿರುಪಯೋಗಿ ಆಗಿದೆ.

ನೋಟು ರದ್ದತಿಯಿಂದ ಭ್ರಷ್ಟಾಚಾರ ಹೇಗೆ ಕಡಿಮೆ ಆಗಬಲ್ಲದು ಮೋದಿಯವರೇ? ಎಲ್ಲಾ ಸರಕಾರಿ ಕಚೇರಿಗಳಲ್ಲಿ "ಈಗ ಹಳೆ ನೋಟಿನಲ್ಲಿ ಲಂಚ ಸ್ವೀಕರಿಸಲಾಗುವುದಿಲ್ಲ, ಕೇವಲ ಹೊಸ ನೋಟಿನಲ್ಲಿ ಮಾತ್ರ ... ಗುತ್ತದೆ" ಎಂಬ ಬೋರ್ಡ್ ಸರಕಾ... ಹಾಕುವುದಷ್ಟೇ ಬಾಕಿ ಇದೆ. ಕಾರಣ ... ಕಚೇರಿಯಲ್ಲೂ ನೋಟು ರದ್ದತಿಯಿಂದಾ... ಕಡಿಮೆಯಾಗಿಲ್ಲ, ಭಯೋತ್ಪಾದನೆಗೂ ಹ... ಬಳಕೆಯಾಗುತ್ತಿದೆ ಎಂಬುದಕ್ಕೆ, ಸಾಕ್ಷಿ... ಕಾಶ್ಮೀರದಲ್ಲಿ ಜೀವಂತ ಹಿಡಿಯಲ್ಪಟ್ಟ ಒ... ಹತ್ತಿರ ಹೊಸ ಎರಡು ಸಾವಿರದ ... ನೋಟುಗಳು ಸಿಕ್ಕಿವೆ. ಬ್ಯಾಂಕುಗಳ... ಆಧಾರದಲ್ಲಿ ಕೋಟ್ಯಾಂತರ ರೂಪಾಯಿ ... ನೋಟಿಗೆ ಬದಲಾವಣೆ ಆಗಿ ಬಿಟ್ಟಿದೆ ... ಬೆಂಗಳೂರಿನಲ್ಲಿ ಸಿಕ್ಕಿ ಬಿದ್ದ ಕೆಲವರ... ಹಾಗಿರುವಾಗ ನೋಟು ರದ್ದತಿಯಿಂ... ಭಯೋತ್ಪಾದನೆ ಮತ್ತು ಕಪ್ಪು ಹಣ... ನಾಶವಾಗಲಿವೆ ಎಂದು ಮೋದಿ ಹೇಳಿದ... ಈಗಾಗಲೇ ಸಾಬೀತಾಗಿದೆ. ಆದರೂ ... ಸರ್ಕಸ್ ನಡೆಸಿ ಜನರನ್ನು ಮಂಗ ಮಾಡಲು... ಇದ್ದಾರೆ.

ಕೃಷಿಕರಿಗೆ, ಕಾರ್ಮಿಕರಿಗೆ ... ವ್ಯಾಪಾರಿಗಳಿಗೆ ನೋಟು ರದ್ದ... ಪ್ರಯೋಜನ ಆಗಲಿದೆ ಎಂದು ... ಶುದ್ಧ ಸುಳ್ಳು ಎಂದು ಈಗಾಗಲೇ ... ಸಣ್ಣ ವ್ಯಾಪಾರಿಗಳು ಚಿಲ್ಲರೆ ಇ... ಕುಸಿದು ಭಾರಿ ನಷ್ಟ ಅನುಭವಿಸಿ... ಹೆಚ್ಚಿನ ಎಟಿಎಮ್‌ಗಳಲ್ಲಿ ಕೇವಲ ... ನೋಟುಗಳೇ ಸಿಗುತ್ತಿರುವಾಗ ಸಣ... ಚಿಲ್ಲರೆ ಎಲ್ಲಿಂದ ತರಬೇಕ... ಬೀಜಗೊಬ್ಬರ ಕೊಳ್ಳಲಾಗದೇ ... ನಿಲ್ಲಿಸಿಬಿಟ್ಟಿದ್ದಾರೆ. ಅವರಿಗೆ ಈ ಋತುವಿನ ... ನಷ್ಟವಾಗಲಿದೆ. ಇನ್ನು ಕಾರ್ಮಿಕರ ... ಘೋರವಾಗಿದೆ. ಎಷ್ಟೋ ಕಟ್ಟೋಣ... ಉದ್ಯಮಗಳು ಬೇಡಿಕೆ ಕುಸಿದು ಬಂದ... ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಹಿಂದಿನ ಒಂದು ತಿಂಗಳಲ್ಲಿ ಸುಮಾ... ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ... ವರದಿಯಾಗಿದೆ. ಹಾಗಿರುವಾಗ ನೋಟು... ಇವರಿಗೆಲ್ಲಾ ಭಾರಿ ಪ್ರಯೋಜನವಾಗಿದೆ ... ಹೇಳಿದ್ದು ಯಾವ ಆಧಾರದಲ್ಲಿ?

ಇವನೆಂತಹ ಬಡ ಫಕೀರ

ಭಾರತದಲ್ಲಿ ಒಬ್ಬ ಅತ್ಯಂತ ಬಡ ಫಕೀರನಿದ್ದಾನೆ. ಅವನು ಸೆಲ್ಫೀ ತೆಗೆದುಕೊಳ್ಳಲು ಬಳಸುವುದು ... ಬೆಲೆಯ ಆಪಲ್ ಫೋನ್, ಶರ್ಟಿಗೆ ಹಾಕುವ ವಜ್ರದ ಬಟನ್ ಬೆಲೆ ಒಂದು ಲಕ್ಷ, ಕೈಗೆ ಕಟ್ಟುವ ವ... ವಾಚ್ ಬೆಲೆ 25 ಲಕ್ಷ, ಕಿಸೆಯಲ್ಲಿ 40 ಸಾವಿರದ ಪೆನ್ನು, ಕಣ್ಣಿಗೆ 50 ಸಾವಿರದ ಕನ್ನಡಕ, ನಿತ್ಯ ಉಪ... ಐದು ಸಾವಿರ ಬೆಲೆಯ ಅಣಬೆ, ನಿತ್ಯ ಉಡಲು 25 ಸಾವಿರದ ಬಟ್ಟೆ, ವಿದೇಶಕ್ಕೆ ಹೋಗುವಾಗ ಹಾ... ಬೆಲೆ ಹತ್ತು ಲಕ್ಷ, ಒಮ್ಮೆ ಹಾಕಿದ ಈ ಸೂಟು ಎರಡನೇ ಸಾರಿ ಹಾಕುವುದಿಲ್ಲ, ಓಡಾಡೋಕೆ 250 ಕೋ... ಖಾಸಗಿ ವಿಮಾನ, ರಸ್ತೆ ಸವಾರಿಗೆ ಎಂಟು ಕೋಟಿ ಬೆಲೆಯ ವಿದೇಶಿ ಕಾರು, ಹೊದ್ದು ಕೊಳ್ಳಲು ಐ... ಶಾಲು, ಕಾಲಿಗೆ ಒಂದೂವರೆ ಲಕ್ಷದ ಬೂಟು, ತನ್ನದೇ ಮುಖ ಹೊತ್ತ ವಿವಿಧ ಜಾಹೀರಾತಿಗೆ 11... ಖರ್ಚು, ಜುಜಬಿ ಕುಡಿಯೋ ನೀರಿಗೆ ವರ್ಷಕ್ಕೆ 90 ಕೋಟಿ. ಇಷ್ಟೊಂದು ಬಡ ಫಕೀರನನ್ನು ಹೊಂದಿ... ಮಾತೆ ನಿಜಕ್ಕೂ ಧನ್ಯಳು. ಇನ್ನು ಈ ಫಕೀರ ಯಾವಾಗ ಬೇಕಾದರೂ ಅಧಿಕಾರ ಬಿಟ್ಟು ತನ್ನ ಜೋಳಿಗೆ... ಹಿಮಾಲಯಕ್ಕೆ ಹೋಗಲು ತಯಾರಂತೆ. ಇವನಲ್ಲಿ ಯಾವುದೇ ವೈಯಕ್ತಿಕ ಸ್ವಾರ್ಥ ಇಲ್ಲವಂತೆ. ಹಾಗಾ... ಫಕೀರನ ಜೋಳಿಗೆಯೂ ಅವನ ... ಸೂಟಿನಂತೆ ಚಿನ್ನದ ದಾರದಿಂದ ... ಪೋಣಿಸಿ ಹೆಣೆದ ಜೋಳಿಗೆ ಇ...




ಫಕೀರನ ಉಪಮೆ ಹೇಳಿ ... ಪೆಕರ ಮಾಡಿರುವ ಈತನ ಫ... ಏನೆಂದರೆ ಗುಜರಾತಿನಲ್ಲಿ ಅಧಿಕಾರ ... ಘಟಿಸಿರುವ ಘೋರ ನರಮೇ... ಎನ್ಕೌಂಟರ್, ಮುಖ್ಯಮಂತ್ರಿ... ಪ್ರತಿಸ್ಪರ್ಧಿಯಾದ ತನ್ನದೇ ಪಕ್ಷದ ಹರೇನ್ ಪಾಂಡ್ಯಾರ ಸುಪಾರಿ ಹತ್ಯೆ, ಗುಜರಾತ್ ಗ್ಯಾಸ್ ಕರ್ಮಕಾಂಡ, ... ತನಿಖೆ ತಾರ್ಕಿಕ ಅಂತ್ಯ ಕಂಡರೆ ತಾನು ನಿಜವಾದ ಫಕೀರನಾಗಿ ಕಮಂಡಲ ಹಿಡಿದುಕೊಂಡು ಜೈ... ನಿಜವಾಗಿಯೂ ಹೋಗಬೇಕಾಗುತ್ತದೆ ಎಂಬುದು. ದೊಡ್ಡ ಕಾರ್ಪೊರೇಟ್ಸ್‌ಗಳಿಗೆ ಹಾಗೂ ಬ್ಯಾಂಕ್ ಮ... ಲಾಭ ಮಾಡಿಕೊಡಲು ಭಾರತದ 130 ಕೋಟಿ ಜನರ ಮೇಲೆ ಹೇರಿರುವ ನೋಟು ರದ್ದತಿಯಿಂದಾ... ಚುನಾವಣೆಗಳಲ್ಲಿ ತನ್ನ ಪಕ್ಷದ ಸೋಲು ನಿಶ್ಚಿತ ಎನಿಸಿರುವಾಗ ಫಕೀರನ ಫಿಕರಿ ಹೆಚ್ಚುತ್ತಿದೆ.

ಒಮ್ಮೆ ಒಬ್ಬ ಫಕೀರ ಸೆಕ್ಯೂರಿಟಿಯ ಕಣ್ಣು ತಪ್ಪಿಸಿ ಹ್ಯಾಂಗರ್‌ನಲ್ಲಿ ನಿಲ್ಲಿಸಿದ್ದ ಒಂದು ಖಾಸಗಿ ವಿಮಾ... ಹೊಕ್ಕ, ಅಲ್ಲಿ ಯಾರೂ ಇರಲಿಲ್ಲ, ಆದರೆ ಕಾಕ್‌ಪಿಟ್ಟಿನಲ್ಲಿ "ವಿಮಾನ ಹೇಗೆ ಹಾರಿಸುವುದು" ಎಂಬ ... ಕೈಪಿಡಿ ಇತ್ತು, ಫಕೀರ ಪೈಲೆಟ್ ಸೀಟಿನಲ್ಲಿ ಕುಳಿತು ಕುತೂಹಲದಿಂದ ಆ ಕೈಪಿಡಿಯಲ್ಲಿ ಹೇಳಿರುವಂತೆ ... ಮಾಡುತ್ತಾ ಹೋದ. ವಿಮಾನ ಆಕಾಶಕ್ಕೆ ಏರಿ ಹಾರಾಡತೊಡಗಿತು. ಕಡೆಗೆ ವಿಮಾನ ಹಾರಿಸಿದ್ದು ಸಾ... ಫಕೀರ ಕೈಪಿಡಿ ತೆರೆದು 'ಹಾರಾಡುವ ವಿಮಾನ ನೆಲಕ್ಕೆ ಇಳಿಸುವುದು ಹೇಗೆ' ಎಂಬ ಪುಟಕ್ಕೆ ಬಂದ... ಆದರಲ್ಲಿ: 'ವಿಮಾನ ಇಳಿಸುವುದನ್ನು ಕಲಿಯಲು ಪುಸ್ತಕದಂಗಡಿಗೆ ಹೋಗಿ ಎರಡನೇ ಕೈಪಿಡಿ ಖರೀ... ಎಂದು ಬರೆದಿದ್ದನ್ನು ಓದಿ ಫಕೀರ ತನ್ನ ಹುಚ್ಚಾಟದಿಂದ ಆದ ಪ್ರಮಾದಕ್ಕೆ ತಲೆಚಚ್ಚಿಕೊಂಡ. ನಮ್ಮ ... ನೋಟು ರದ್ದತಿಯ ಅವಸ್ಥೆಯೂ ಹೀಗೇ ಆಗಿದೆ ಪಾಪ.

-ಹರೀಶ್ ಎಂ ರೈ

ಮೋದಿಯೇ 'ವರ್ಷದ ವ್ಯಕ್ತಿ' ಆಗಲು ಲಾಯಕ್ಕು

ಒಂದು ವರ್ಷದ ಅವಧಿಯಲ್ಲಿ 'ಒಳ್ಳೆಯ ಅಥವಾ ಕೆಟ್ಟ' (ಧನಾತ್ಮಕ ಅಥವಾ ನಕಾರಾತ್ಮಕ) ಕಾರಣಗಳಿಂದ ಸುದ್ದಿಯಲ್ಲಿರುವ ಹಾಗೂ ಪ್ರಪಂಚದ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿಗಳನ್ನು ಅಮೆರಿಕದ ಟೈಮ್ ನಿಯತಕಾಲಿಕೆ 'ವರ್ಷದ ವ್ಯಕ್ತಿ' ಗೌರವಕ್ಕೆ ಆಯ್ಕೆ ಮಾಡುತ್ತದೆ. ಪತ್ರಿಕೆಯ ಸಂಪಾದಕರೇ ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರಾದರೂ, ಓದುಗರಿಂದಲೂ ಅಭಿಪ್ರಾಯವನ್ನು ಕೇಳಲಾಗುತ್ತದೆ. ಆ ಕಾರಣಕ್ಕೆ ಉತ್ತರ ಕೊರಿಯಾದ ಕ್ರೂರ ವಿಕ್ಷಿಪ್ತ ಸರ್ವಾಧಿಕಾರಿ ಕಿಮ್ ಜೊಂಗ್ ಉನ್ ಸಹ ಸ್ಪರ್ಧೆಯಲ್ಲಿ ಇದ್ದರು. ಕೆಟ್ಟ ಕಾರಣಗಳಿಗಾಗಿ ವರ್ಷದ ವ್ಯಕ್ತಿಯನ್ನು ಆರಿಸುವುದಾದರೆ ಮೋದಿಯವರೇ ವರ್ಷದ ವ್ಯಕ್ತಿಯಾಗಲು ಸೂಕ್ತ, ಕಾರಣ ಕಿಮ್ ಜೊಂಗ್ ಉನ್ ಉತ್ತರ ಕೊರಿಯಾದ ಕೇವಲ ಮೂರು ಕೋಟಿ ಜನರನ್ನು ಕಾಡಿದರೆ, ಡೊನಾಲ್ಡ್ ಟ್ರಂಪ್ ಅಮೆರಿಕದ 33 ಕೋಟಿ ಜನರನ್ನು ಮಾತ್ರ ಕಾಡಿದ್ದರು. ಆದರೆ ನಮ್ಮ ನರೇಂದ್ರ ಮೋದಿಯವರು ನೋಟು ರದ್ಧತಿ ಮುಖಾಂತರ ಒಂದೇ ಏಟಿಗೆ 130 ಕೋಟಿ ಜನರನ್ನು ಸತತ ಒಂದು ತಿಂಗಳಿಂದ ಭೀಕರವಾಗಿ ಕಾಡುತ್ತಿದ್ದಾರೆ ಹಾಗೂ ಇನ್ನೂ ಎರಡು ಮೂರು ತಿಂಗಳು ಹೀಗೆ ಕಾಡಲಿರುವರು. ಈಗ ಹೇಳಿ ನಕಾರಾತ್ಮಕ ಕಾರಣಗಳಿಗಾಗಿ ವರ್ಷದ ವ್ಯಕ್ತಿಯಾಗಲು ಯಾರು ಹೆಚ್ಚು ಸೂಕ್ತ? ಮೋದಿಯೇ ಅಥವಾ ಟ್ರಂಪೇ?



ಮೋದಿಗೆ 'ಟೈಮ್ ವರ್ಷದ ವ್ಯಕ್ತಿ' ಆಗಿ ಅತೀ ಹೆಚ್ಚು ವೋಟು ಸಿಕ್ಕಿದ್ದರೂ ಕೊನೆಗೆ ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು 'ಟೈಮ್ ವರ್ಷದ ವ್ಯಕ್ತಿ' ಆಗಿ ಟೈಮ್ ಪತ್ರಿಕೆಯ ಸಂಪಾದಕ ಮಂಡಳಿ ಘೋಷಿಸಿದೆ. ಈ ಸುದ್ದಿ ಬಂದಿದ್ದೇ ತಡ ನಮ್ಮ ಮೋದಿಯ ಪಾದಪೂಜಕರು ತಮ್ಮ ವದಂತಿ ಫ್ಯಾಕ್ಟರಿಯಿಂದ ಹೊಸ ವದಂತಿಗಳನ್ನು ಉತ್ಪಾದಿಸಲು ಶುರು ಮಾಡಿದ್ದಾರೆ. ಅದರಲ್ಲಿ ಮುಖ್ಯ ವದಂತಿ ಏನೆಂದರೆ ಮೋದಿ ಹಿಂದೂ ಆದುದರಿಂದ ಕ್ರೈಸ್ತ ಮಿಷನರಿಗಳು ಕುತಂತ್ರ ಮಾಡಿ ಮೋದಿಗೆ ಪ್ರಶಸ್ತಿ ತಪ್ಪಿಸಿದ್ದೆಂದು ಸಂಘಿಗಳು ವದಂತಿ ಹಬ್ಬಿಸುತ್ತಿದ್ದಾರೆ. ಆದರೆ ಇವರು ಗಮನಿಸಬೇಕಾದುದೇನೆಂದರೆ ಅಮೆರಿಕದ ಅಧ್ಯಕ್ಷ ಚುನಾವಣೆಗೆ ಮುಂಚೆ ಇದೇ ಭಾರತದ ಹಿಂದೂತ್ವವಾದಿಗಳು ಡೊನಾಲ್ಡ್ ಟ್ರಂಪ್ ಹಿಂದೂ ಪರವಾಗಿದ್ದು ಮುಸ್ಲಿಮರ ವಿರುದ್ಧ ಇರುವುದರಿಂದ ಅಮೆರಿಕದ ಎಲ್ಲಾ ಹಿಂದೂ ನಾಗರಿಕರು ಡೊನಾಲ್ಡ್ ಟ್ರಂಪ್‌ಗೆ ಬೆಂಬಲ ಕೊಟ್ಟು ಹಿಲರಿ ಕ್ಲಿಂಟನ್ ಸೋಲುವಂತೆ ನೋಡಿಕೊಳ್ಳಬೇಕು ಎಂದು ಫರ್ಮಾನ್ ಹೊರಡಿಸಿದ್ದರು. ಜತೆಗೆ ಅಮೆರಿಕದಲ್ಲಿ ಹಾಗೂ ಭಾರತದಲ್ಲಿ ಸಂಘಿಗಳು ಅನೇಕ ಯಜ್ಞ ಯಾಗ ಪೂಜೆಗಳನ್ನು ಮಾಡಿ ಅಧ್ಯಕ್ಷ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲ್ಲಬೇಕೆಂದು ಎಲ್ಲಾ ಹಿಂದೂ ದೇವರಲ್ಲಿ ಬೇಡಿಕೊಂಡಿದ್ದರು. ಆದರೆ ಈಗ ಟೈಮ್ ಪ್ರಶಸ್ತಿ ಮೋದಿ ಕೈತಪ್ಪಿ ಡೊನಾಲ್ಡ್ ಟ್ರಂಪ್‌ಗೆ ಸಿಕ್ಕ ಕೂಡಲೇ ಭಾರತದ ಸಂಘಿಗಳಿಗೆ ಡೊನಾಲ್ಡ್ ಟ್ರಂಪ್ ಜಾತಿಯಿಂದ ಕ್ರೈಸ್ತರು ಎಂದು ಒಮ್ಮೆಲೇ ನೆನಪಾಗಿಬಿಟ್ಟಿತು. ಮೇಲಾಗಿ ಕೇಂದ್ರ ಸಚಿವ ಅನಂತಕುಮಾರ್ ಮೋದಿಯವರು ಟೈಮ್ ವರ್ಷದ ವ್ಯಕ್ತಿಯಾಗಿ ಆಯ್ಕೆ ಆಗಿಬಿಟಿದ್ದಾರೆ ಎಂದು ಸದನದೊಳಗೆಯೇ ಘೋಷಿಸಿ ಅಪಹಾಸ್ಯಕ್ಕೊಳಗಾದರು. ಕುರುಡು ವ್ಯಕ್ತಿಪೂಜೆಯ ಭರದಲ್ಲಿ ನಮ್ಮ ರಾಜಕಾರಣಿಗಳು ಹೇಗೆ ವಿವೇಚನೆ ಕಳೆದುಕೊಳ್ಳುತ್ತಾರೆ ಎಂಬುದಕ್ಕೆ ಅನಂತಕುಮಾರ್ ಸಾಕ್ಷಿ.

ಕೇವಲ ಒಂದು ತಿಂಗಳ ಹಿಂದೆ ಮೋದಿಯವರ ಹೆಸರು ಈ ಬಾರಿಯ ಟೈಮ್ ಸ್ಪರ್ಧೆಯಲ್ಲಿ ಇದೆ ಎಂದು ಘೋಷಣೆಯಾದ ಕೂಡಲೇ ಅಮೆರಿಕದ ಈ ಟೈಮ್ ಮ್ಯಾಗಜೀನಿಗೆ ಭಾರತೀಯ ಮೂಲದ ಆನ್‌ಲೈನ್ ಚಂದಾದಾರರ ಸಂಖ್ಯೆ ಒಮ್ಮೆಲೇ ಕೋಟಿಗಟ್ಟಲೆ ಏರಿತ್ತಂತೆ. ಇಂತಹ ಅಸ್ವಾಭಾವಿಕ ಏರಿಕೆ ಕೇವಲ ಮೋದಿಯನ್ನು ಗೆಲ್ಲಿಸುವ ಸಲುವಾಗಿ ಮೋದಿಯ ಕುರುಡು ಭಕ್ತರಿಂದಾಗಿ ತಾತ್ಕಾಲಿಕ ಏರಿಕೆ ಆಗಿದ್ದು ಎಂದು ಟೈಮ್ ತೀರ್ಪುಗಾರರಿಗೆ ಸುಳಿವು ಸಿಕ್ಕಿದ್ದರಿಂದ ಓದುಗರ ತೀರ್ಪನ್ನು ಸಂಪಾದಕ ಮಂಡಳಿ ಒಪ್ಪಿಕೊಳ್ಳದಿರಲು ಕಾರಣವಾಗಿರಬೇಕು ಎನ್ನಲಾಗುತ್ತಿದೆ. ಏನೇ ಆಗಲಿ ನೋಟು ರದ್ಧತಿಯಿಂದಾಗಿ ಭಾರತದ ಎಲ್ಲಾ 130 ಕೋಟಿ ಜನರು ತೊಂದರೆಗೊಳಗಾಗಿದ್ದರಿಂದ ಈ ನಕಾರಾತ್ಮಕ ವಿಷಯಕ್ಕಾದರೂ ಮೋದಿಯವರನ್ನು ಟೈಮ್ ವರ್ಷದ ವ್ಯಕ್ತಿಯಾಗಿ ಆರಿಸಬೇಕಿತ್ತು. ಒಂದೇ ಏಟಿಗೆ ಎಲ್ಲಾ 130 ಕೋಟಿ ಜನರನ್ನು ತಮ್ಮ ದೈನಂದಿನ ಕೆಲಸ ಬಿಡಿಸಿ ಮಕ್ಕಳನ್ನು ಉಪವಾಸ ಕೆಡುವಿ ಬ್ಯಾಂಕಿನೆದುರು ನಿಲ್ಲಿಸಿ 85 ಜನರು ಬ್ಯಾಂಕ್ ಸರತಿಯಲ್ಲಿಯೇ ಸಾಯುವಂತೆ ಮಾಡಿದ್ದೇನು ಸಣ್ಣ ಸಾಧನೆಯೇ?


- ಬಿ. ಅನಿಲ್‌ಕುಮಾರ್ ಪೂಜಾರಿ, ಕುಂದಾಪುರ

ಮೋದಿಯವರು ಪತ್ರಿಕೆಗಳನ್ನು ಓದುವ ಅಭ್ಯಾಸ ಇಟ್ಟುಕೊಳ್ಳಬೇಕು. ಅದನ್ನು ಬಿಟ್ಟು ಅವರು ತಮ್ಮ ಭಕ್ತರ ಸೋಷಿಯಲ್ ಮೀಡಿಯಾದಲ್ಲಿ ಹಾಗೂ ಸೆಲ್ಫಿಯಲ್ಲಿ ತಲ್ಲೀನರಾದರೆ ಅವರಿಗೆ ನಮ್ಮ ದೇಶದ ನೈಜ ಆರ್ಥಿಕ ಸ್ಥಿತಿ ಅರ್ಥ ಆಗುವುದಾದರೂ ಹೇಗೆ ಸಾಧ್ಯ?

-ಆರ್. ಜಗದೀಶ್, ಸುಳ್ಯ

ಮೋದಿಗೆ ಇಲ್ಲ ಸಾಮಾಜಿಕ ಕಾಳಜಿ

ಏನೇ ಆಗಲಿ ಮೋದಿಯವರು ಮಾಡಿರುವ ನೋಟು ರದ್ಧತಿಗೆ ನಾವು ಥ್ಯಾಂಕ್ಸ್ ಹೇಳಲೇ ಬೇಕು. ಯಾಕೆಂದರೆ ಇದರಿಂದಾಗಿ ಸ್ವತಃ ಬಿಜೆಪಿಯಲ್ಲಿರುವ ಪ್ರಜ್ಞಾವಂತರಿಗೆ ತಮ್ಮ ನೇತಾರ ಮೋದಿಯ ವಿವೇಕ ಹಾಗೂ ಬೌದ್ಧಿಕ ಶಕ್ತಿಯ ಬಗ್ಗೆ ಅಪನಂಬಿಕೆ ಹುಟ್ಟಿಬಿಟ್ಟಿದೆ. ಮೋದಿ ಯಾವುದೇ ವಿಷಯದಲ್ಲೂ ತಪ್ಪು ಮಾಡುವುದೇ ಇಲ್ಲ ಎಂದು ಭಾವಿಸಿದ್ದವರು ಈಗ ಆ ಭ್ರಮೆಯಿಂದ ಹೊರ ಬಂದಿದ್ದಾರೆ. ಹಾಗಾಗಿ ಮೋದಿಗೆ ಪರ್ಯಾಯ ನೇತಾರ



ಈಗಿನಿಂದಲೇ ತಯಾರು ಮಾಡಿದರೆ ಒಳಿತು ಇಲ್ಲದಿದ್ದರೆ 2019 ರ ಚುನಾವಣೆಯಲ್ಲಿ ಅಧಿಕಾರ ತಮ್ಮ ಪಕ್ಷದ ಕೈ ತಪ್ಪಬಹುದು ಎಂಬ ಆತಂಕ ಬಿಜೆಪಿಯ ಪ್ರಜ್ಞಾವಂತರಲ್ಲಿ ಈಗ ಮೂಡಿದೆ.

ಮೋದಿ ಚಿಕ್ಕಂದಿನಲ್ಲಿ ಚಹಾ ಮಾರಿದ್ದು ನಿಜವೇ? ಎಂಬ ಸಂಶಯ ಈಗ ಪ್ರತಿಯೊಬ್ಬರ ಮನದಲ್ಲಿಯೂ ಏಳುತ್ತಿದೆ. ಯಾಕೆಂದರೆ ಒಂದು ವೇಳೆ ಮೋದಿ ಚಹಾ ಮಾರಿದ್ದು ನಿಜವಾಗಿದ್ದರೆ ಸಣ್ಣ ಪುಟ್ಟ ವ್ಯಾಪಾರಿಗಳು ಹಾಗೂ ಸ್ವಉದ್ಯೋಗಿಗಳು ಎಷ್ಟು ಕಷ್ಟಪಟ್ಟು ಒಂದೊಂದು ರೂಪಾಯಿ ಕಮಾಯಿಸುತ್ತಾರೆ ಎಂಬ ಅರಿವು ಮೋದಿಗಿರುತ್ತಿತ್ತು. ಒಬ್ಬ ಚಹಾ ಮಾರುವ ಹುಡುಗ ರೇಲ್ವೆ ಟ್ರೇನಿನಲ್ಲಿ ಚುರುಕಾಗಿ ಓಡಾಡಿ ಪ್ರಯಾಣಿಕರಿಂದ ನಗದು ಹಣ ಪಡೆದು ಇಪ್ಪತ್ತು ನಿಮಿಷದಲ್ಲಿ ಹತ್ತು ಕಪ್ ಚಹಾ ಮಾರುತ್ತಾನೆ ಎಂದು ಇಟ್ಟುಕೊಳ್ಳಿ, ಒಂದು ವೇಳೆ ಅವನೂ ಸ್ವೈಪ್ ಮಶಿನ್ ಹಿಡಿದುಕೊಂಡು ಚಹಾ ಮಾರಲು ತೊಡಗಿದರೆ ಆ ಹುಡುಗ ಇಪ್ಪತ್ತು ನಿಮಿಷದಲ್ಲಿ ಕೇವಲ ಐದಾರು ಚಹಾ ಮಾತ್ರ ಮಾರಲು ಸಾಧ್ಯ. ಜತೆಗೆ ಬ್ಯಾಂಕುಗಳೇನು ಇಂತಹ ಆನ್ಲೈನ್-ಡಿಜಿಟಲ್ ಪೇಮೆಂಟ್ ಸೇವೆ ಬಿಟ್ಟಿಯಾಗಿ ಕೊಡುವುದಿಲ್ಲ, ಬ್ಯಾಂಕುಗಳು ಕ್ರೆಡಿಟ್ ಕಾರ್ಡ್-ಡೆಬಿಟ್ ಕಾರ್ಡ್ ಉಪಯೋಗಕ್ಕೆ ವ್ಯಾಪಾರಿಯಿಂದ ಶೇ.0.5 ಯಿಂದ ಶೇ.2.5 ವರೆಗೂ ತಮ್ಮ ಕಮಿಷನ್ ಕಟ್ ಮಾಡಿ ಉಳಿದ ಹಣ ಮಾತ್ರ ವ್ಯಾಪಾರಿಯ ಖಾತೆಗೆ ಜಮಾ ಮಾಡುವುದು. ಒಬ್ಬ ಚಹಾ ಮಾರಾಟಗಾರ ನೂರು ರೂಪಾಯಿಯ ಚಹಾ ಮಾರಿ ಹಣವನ್ನು ಡೆಬಿಟ್ ಕಾರ್ಡ್ ಮೂಲಕ ಪಡೆದರೆ ಅವನ ಖಾತೆಗೆ ಬ್ಯಾಂಕ್ ಕೇವಲ 98 ರೂಪಾಯಿ ಮಾತ್ರ ಜಮಾ ಮಾಡಿ ಎರಡು ರೂಪಾಯಿ ತನ್ನ ಕಮಿಷನ್ ಎಂದು ಕಟ್ ಮಾಡುತ್ತದೆ. ಚಹಾ ಮಾರಾಟಗಾರನಿಗೆ ಹೀಗೆ ಎರಡು ತರಹದ ನಷ್ಟವಾಗುತ್ತದೆ. ಮೊದಲನೆಯ ನಷ್ಟ ಹತ್ತು ಚಹಾ ಮಾರುವ ಬದಲು ಕೇವಲ ಐದು ಚಹಾ ಮಾತ್ರ ಮಾರಲು ಸಾಧ್ಯವಾಗಿದ್ದು, ಎರಡನೇ ನಷ್ಟ ಬ್ಯಾಂಕಿನವರಿಗೆ ಎರಡು ರೂಪಾಯಿ ಕಮಿಷನ್ ಕೊಡಬೇಕಾಗಿರುವುದು. ಇದೆಲ್ಲ ಪ್ರಧಾನಿಗೆ ಗೊತ್ತಿದೆಯೇ?

ಮೋದಿ ತನ್ನ ಎಂಟನೇ ವರ್ಷದಿಂದ 18 ನೇ ವರ್ಷದವರೆಗೆ ರೇಲುಗಳಲ್ಲಿ ಚಹಾ ಮಾರಿದ್ದಾಗಿ ಹೇಳುತ್ತಾರೆ. (ಅಂದರೆ 1958 ರಿಂದ 1968 ರ ವರೆಗೆ). ಆಗ ಒಂದು ಕಪ್ ಚಹದ ಬೆಲೆ ಕೇವಲ ಐದು ನಯಾ ಪೈಸೆ ಮಾತ್ರ ಇದ್ದಿದ್ದು. ಮಾನವನ ಜೀವನದಲ್ಲಿ ಎಂಟರಿಂದ 18 ವರ್ಷದ ವರೆಗಿನ ವಯಸ್ಸಿಗೆ ಇಂಪ್ರೆಶನೇಬಲ್ ಪ್ರಾಯ ಎನ್ನುತ್ತಾರೆ. ಅಂದರೆ ಆಗ ಅನುಭವಕ್ಕೆ ಬಂದ ಸುಖ-ಕಷ್ಟಗಳೆಲ್ಲಾ ಆ ವ್ಯಕ್ತಿಯ ಮಾನಸಿಕತೆಯ ಮೇಲೆ ಪ್ರಭಾವ ಬೀರಿ ಅವನ ಒಟ್ಟು ವ್ಯಕ್ತಿತ್ವವನ್ನು ರೂಪಿಸುತ್ತವೆ ಹಾಗೂ ಅದು ಜೀವನವಿಡೀ ಅವನ ನಡೆನುಡಿ ಭಾವನೆ ವರ್ತನೆಗಳ ಮೇಲೆ ಪ್ರಭಾವ ಬೀರುತ್ತಾ ಇರುತ್ತದೆ ಎಂಬುದು ಮನೋವಿಜ್ಞಾನಿಗಳ ಅಂಬೋಣ. ಮೋದಿಗೆ ಆ ಪ್ರಾಯದಲ್ಲಿ ನಿಜವಾದ ಬಡತನ ಹಾಗೂ ಕಷ್ಟನಷ್ಟಗಳ ನೈಜ ಅನುಭವ ಆಗಿದ್ದರೆ ಸಣ್ಣ ವ್ಯಾಪಾರಿಗಳ ಹಾಗೂ ಬಡ ರೈತರ ಬವಣೆ ಅವರಿಗೆ ಸುಲಭವಾಗಿ ಅರ್ಥವಾಗುತ್ತಿತ್ತು ಮತ್ತು ಅದರ ಪ್ರಭಾವದಿಂದ ನೋಟು ರದ್ದತಿಯಂತಹ ನಿರ್ಣಯ ಅವರು ಕೈಗೊಳ್ಳುತ್ತಲೇ ಇರಲಿಲ್ಲ. ಜತೆಗೆ ಅವರು ಡಿಜಿಟಲ್ ಪೇಮೆಂಟ್ ಕಂಪನಿಗಳ ಸೇಲ್ಸ್ ಮ್ಯಾನ್ ಸಹ ಆಗುತ್ತಿರಲಿಲ್ಲ. ನೂರಕ್ಕೆ ನೂರು ವಿದ್ಯಾವಂತರಿರುವ ಅಮೆರಿಕದಂತಹ ಮುಂದುವರಿದ ದೇಶದಲ್ಲಿಯೂ ಶೇ.50 ರಷ್ಟು ವ್ಯವಹಾರಗಳು ಈಗಲೂ ನಗದಿನಲ್ಲಿ ನಡೆಯುವಾಗ ಅಮೆರಿಕಕ್ಕಿಂತ ಬಹಳ ಹಿಂದೆ ಇರುವ ಹಾಗೂ ಶೇ.40 ನಿರಕ್ಷರಿಗಳಿರುವ ಭಾರತದಲ್ಲಿ ಅಂತಹ ನಗದುರಹಿತ ಆರ್ಥಿಕತೆ ಎಂದಾದರೂ ಸಾಧ್ಯವೇ? ಮೋದಿಯ ಕ್ಯಾಶ್-ರಿಚ್ ಬ್ರೇನ್-ಲೆಸ್ ಬಜರಂಗದಳ, ರಾಮಸೇನೆ ಮುಂತಾದ ಕೇಸರಿ ಪಡೆಗಳ ಅರೆ-ಸಾಕ್ಷರ ಕಾಲಾಳುಗಳಲ್ಲಿಯೇ ಹೆಚ್ಚಿನವರಲ್ಲಿ ಡೆಬಿಟ್ ಕಾರ್ಡುಗಳು ಇಲ್ಲದಿರುವಾಗ ಇತರ ಬಡ ಮೀನುಗಾರ ಅಥವಾ ಕೂಲಿ ಕಾರ್ಮಿಕರಲ್ಲಿ ಡೆಬಿಟ್ ಕಾರ್ಡು ಇರಲು ಸಾಧ್ಯವೇ? ಭಾರತದ ಗ್ರಾಮೀಣ ಜೀವನ ಹತ್ತಿರದಿಂದ ನೋಡದಿದ್ದ ಮೋದಿಯಂತವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ ಬಿಡಿ.

-ವೀರಪ್ಪ ದಿ. ಎನ್, ಮಡಿಕೇರಿ

ಜಯಲಲಿತಾರ ನೆನಪಿಗಾಗಿ

ಯೌವನದ ಸಹಜ ಆಶೆಗಳೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ಜಯಲಲಿತಾ ಖ್ಯಾತಿಯ ಅಮಲೇರಿಸಿಕೊಂಡಿರಬಹುದಾದಂತೇ, ಪ್ರೀತಿಯ ಬಗ್ಗೆ ಕನಸುಗಳ ಕಟ್ಟಿಕೊಂಡಿರುವುದಿಲ್ಲ ಎಂದು ಹೇಳಲಾಗದು. ಅಂತೆಯೇ ಅದೆಲ್ಲಾ ಬೇಸರವಾಗುತ್ತಿದೆ ಅನ್ನಿಸದೇ ಬರೀ ಕ್ರಶ್‌ನ ಮಟ್ಟ ಮೀರಿ ಸಾಧನೆಯಾಗುತ್ತಿಲ್ಲಾ ಅನ್ನಿಸತೊಡಗಿದಾಗ, ಅವತ್ತಿನ ವಿವಾಹಿತ ಮೇರು ನಟನ ಸಾಂಗತ್ಯದಲ್ಲಿ ಬದುಕು



ಕಂಡುಕೊಂಡರು. ಅದು ಆಕೆಗಿದ್ದ ಅನಿವಾರ್ಯತೆಯೋ ಅಥವಾ ಹುಚ್ಚು ಪ್ರೇಮವಾಗಿ ಬದಲಾಗಿದ್ದ ಆಕರ್ಷಣೆಯೋ ಬಲ್ಲವರಾರು.

ಅಂತಹದ್ದೊಂದು ಜೀವನವನ್ನ ಒಪ್ಪಿಕೊಂಡು ನಿಭಾಯಿಸುವ ದರ್ದು ಅಂತ ಚಿಕ್ಕ ವಯಸ್ಸಿಗೇ ಬಂದಾಗ ಬಹುಶಃ ಜಯಲಲಿತಾ ವಿಚಲಿತರಾಗಿರಲೇಬೇಕು. ಅಂತಹ ವಿಚಲಿತ ಸ್ಥಿತಿಯ ಮನೋಸಂಕಲ್ಪಗಳೇ ಆಕೆಯನ್ನ ಗಟ್ಟಿಗೊಳಿಸುತ್ತಾ ಹೋಗಿರಬೇಕು. ಹಾಗೆ ಹುಟ್ಟಿದ ಗಟ್ಟಿತನವೇ ಕೇವಲ ನಟಿಯಾಗಿ ಬದುಕು ಸವೆಸಿಬಿಡಬಹುದಾಗಿದ್ದ ಸಂದರ್ಭಗಳಿಂದ ಆಕೆಯನ್ನ ಹೊರತಂದಿದ್ದು. ಆದರೆ ಅವರಲ್ಲಿ ಈ ಗಟ್ಟಿತನವನ್ನ ಮೀರಿ ಹುಟ್ಟುತ್ತಿದ್ದ ಅಮ್ಮನಾಗಬೇಕೆಂಬ ಹೆಣ್ತನದ ಸಹಜ ತುಡಿತವಿತ್ತಲ್ಲ ಅದು ಎಲ್ಲವನ್ನ ಮೀರಿ ಸಾಧ್ಯತೆಗಳಿಗೆ ಒಡ್ಡಿಕೊಳ್ಳುವಂತೆ ಮಾಡಿತು... ಮತ್ತು ಅದು ರಾಜಕೀಯವಲ್ಲದೇ ಮತ್ತೇನೂ ಆಗಿರಲು ಸಾಧ್ಯವಿರಲಿಲ್ಲ.

ಹಾಗೇ ಬದುಕಲು ಯತ್ನಿಸಿದ ಜಯಲಲಿತಾಗೆ ಎದುರಾದ ಸವಾಲುಗಳಿಗೇನೂ ಕಮ್ಮಿ ಇರಲಿಲ್ಲ. ಈ ಮಧ್ಯೆ ಪ್ರಾಣಸಖನ ಮುನಿಸು ಬೇರೆ, ಆದರೂ ಬೇರೆ ದಾರಿಗಳೇ ಇರಲಿಲ್ಲ.

ಸಖನ ನಿರ್ಗಮನದ ದಿನ ಆಕೆಯಲ್ಲಿದ್ದ ತಾಕಲಾಟ ಗಳೆಷ್ಟೋ ಬಲ್ಲವರಾರು. ಆಕೆಯನ್ನ ಅಕ್ಷರಶಃ ಬಲಪ್ರಯೋಗ ದಿಂದ ದೂರವಿಟ್ಟ ಕ್ಷಣದಲ್ಲೂ ಆಕೆ ಅಂದು ಕೊಂಡಿರಬೇಕು, ನಾನು 'ಅಮ್ಮ'ನಾಗಬೇಕು. ಆಗ ಆಕೆ ನಿಜಕ್ಕೂ ಮುಗ್ಧತೆಯಿಂದ ಹೊರಬಂದು ವಾಸ್ತವಿಕತೆಗೆ ಹತ್ತಿರಾಗಿ ಯೋಚಿಸಿರಬೇಕು, ಹಾಗಾಗಿಯೇ ತನ್ನ ಸಖನಂತೆಯೇ ತಾನೂ ಜನರ ಅಮ್ಮನಾಗಬೇಕು ಎಂಬ ನಿಶ್ಚಯಕ್ಕೆ ಬಂದುಬಿಟ್ಟಿದ್ದರು. ಅದು ರಾಜಕೀಯದಿಂದಲೇ ಮಾತ್ರ ಎಂದೂ ಕೂಡ ಆಕೆಯ ನಿಶ್ಚಯವಾಗಿತ್ತು.

ಆಮೇಲೆ ಆಕೆಯನ್ನ ಯಾರೂ ತಡೆಯಲಾಗಲಿಲ್ಲ.

ಹೌದು, ರಾಜಕೀಯಕ್ಕೆ ಪೂರ್ಣ ತೊಡಗಿಸಿಕೊಂಡಾಗ ವಿರೋಧಿಗಳು ಕಾಲೆಳೆದರೂ ಸಹಜ ತಪ್ಪುಗಳೊಂದಿಗೇ ಬೆಳೆಯುತ್ತಾ ಹೋದರು. ತನ್ನೆಲ್ಲಾ ತಾಪತ್ರಯಗಳಿಂದಾಗಿ ಖಾಸಗಿಯಾಗಿ ಬಿಕ್ಕಿ ಬಿಕ್ಕಿ ಅತ್ತಿರಬಹುದಾದ ಆಕೆ ತನ್ನಲ್ಲಿನ ಹೆಬ್ಬಯಕೆಯಿಂದಾಗಿ ನಿಬ್ಬೆರಗಾಗುವಂತೆ ಮಾಗಿ ಮುತ್ಸದ್ಧಿಯಾದರು. ಎಲ್ಲವನ್ನೂ, ಎಲ್ಲರನ್ನೂ ಆ ಮೂಲಕ ಸಾರ್ವಜನಿಕ ಬದುಕನ್ನು ನಿಭಾಯಿಸುವ ಕಲೆ ಆಕೆಗೆ ಸಿದ್ಧಿಸುತ್ತಾ ಹೋಯಿತು.

ಅಪ್ಪಟ ಗೃಹಿಣಿಯಂತೆ, ಬದುಕಬೇಕೆಂಬ ಕನಸು ಕೈಗೂಡದಿದ್ದಾಗ ಎಲ್ಲಿಯೂ ಕಣ್ಣೀರಿಡಲಿಲ್ಲ. ನೋವೆಂಬಂತೆ ಎಲ್ಲಿಯೂ ಬಿಂಬಿಸಲಿಲ್ಲ, ಅಮ್ಮನಾಗಬೇಕೆಂಬ ತುಡಿತ ಅವನ್ನೆಲ್ಲಾ ಮೀರಿದ್ದಾಗಿತ್ತು.

ಒಮ್ಮೆ ಅಚ್ಚರಿಯಾಗುವಂತೆ, ಧೈರ್ಯದಿಂದ ಹೇಳಿದ್ದರು "ನಾನು ಪ್ರೇಮಿಯಾದೆ ಆದರೆ ಹೆಂಡತಿಯಾಗಲಾಗಲಿಲ್ಲ, ಅದು ಬಹುಶಃ ನನ್ನ ಜೀವನದಲ್ಲಿ ಇರಲಿಲ್ಲವೇನೋ, ಆದರೆ ನಾನು 'ಅಮ್ಮ'ನಾಗುತ್ತೇನೆ."

ಇದನ್ನ ಅಪ್ಪಟ ಪ್ರಬುದ್ಧೆಯಂತೆ, ನಿಷ್ಕಲ್ಮಷತೆಯಿಂದ, ದೃಢವಾಗಿ ಹೇಳಿದ್ದರು ಮತ್ತು ಆ ಹಂಬಲದಿಂದಲೇ ಅಮ್ಮನಾಗುತ್ತಾ ಹೋದರು..

ಯಾರು ಏನೇ ಅಂದರೂ ಸತ್ತ ದಿನ ಎಲ್ಲರ ಅಮ್ಮನೇ ಆಗಿದ್ದರು..

ಒಂದು ಹೆಣ್ಣಿನ ಸಾರ್ಥಕ ಬದುಕೆಂದರೆ ಇದಲ್ಲದೇ ಮತ್ತಿನ್ನೇನು.

-ಎಂ.ಪ್ರಸನ್ನ ಕುಮಾರ್, ಈ ಮೇಲ್ ಮೂಲಕ

ಜಯಾ ಸಾಧಿಸಿದ್ದು ಏನನ್ನು?

ಜಯಲಲಿತಾ ತೀರಿಕೊಂಡಾಗ ತಮಿಳುನಾಡಿನ ಮುಗ್ಧ ಬಡಜನತೆಯ ಮುಗಿಲು ಮುಟ್ಟುವ ರೋದನ ಎಂತಹವರ ಮನಸ್ಸನ್ನೂ ಕರಗಿಸುತ್ತಿತ್ತು. ಆದರೆ ಉಕ್ಕಿನ ಮಹಿಳೆಯಂತೆ 3-4 ಸಾರಿ ಆ ನಾಡಿನ ಮುಖ್ಯಮಂತ್ರಿಯಾಗಿ ಜಯಲಲಿತಾ ಮಾಡಿದ್ದಾದರೂ ಏನು? ಆ ಜನರ ದಾರಿದ್ರ್ಯವನ್ನು ನಿವಾರಿಸಲು ಸಾಧ್ಯವಿರಲಿಲ್ಲವೇ? ಖಂಡಿತ ಸಾಧ್ಯವಿತ್ತು. ಅವರಿಗೆಲ್ಲಾ ಉಚಿತ ವಿದ್ಯಾಭ್ಯಾಸವನ್ನು ಕೊಡಬಹುದಿತ್ತು, ಉಚಿತ ಮೆಡಿಕಲ್ ಸೌಲಭ್ಯ ಒದಗಿಸಬಹುದಿತ್ತು, ಉಹೂಂ, ಅವುಗಳನ್ನು ಕೊಡಲಿಲ್ಲ, ಅವುಗಳನ್ನು ಕೊಟ್ಟಿದ್ದರೆ ಈಗ ಅವರು ಜಯಲಲಿತಾರನ್ನು ಬರೀ ಗೌರವಿಸುತ್ತಿದ್ದರು, ಅಷ್ಟೇ... ರೋದಿಸುತ್ತಿರಲಿಲ್ಲ, ರೋದಿಸಿ ಇಡೀ ವಿಶ್ವಕ್ಕೆ "ಅಮ್ಮ ದೊಡ್ಡವಳು, ಅವಳನ್ನು ಕಳಕೊಂಡ್ಬಿಟ್ವಿ" ಅಂತ ಕೂಗಿ



ಕೂಗಿ ಹೇಳುತ್ತಿರಲಿಲ್ಲ... ಅದಕ್ಕೇ ಅಮ್ಮ ಅವರಿಗೆಲ್ಲಾ ಒದಗಿಸಿದ್ದು ಅಮ್ಮ ಕ್ಯಾಂಟೀನ್, ಅಮ್ಮ ಮೊಬೈಲ್, ಅಮ್ಮ ಲ್ಯಾಪ್‌ಟಾಪ್, ಅಮ್ಮ ಉಪ್ಪು ಅಮ್ಮ ಕುಡಿಯುವ ನೀರು, ಅಮ್ಮ ಸಿನಿಮಾ ಮಂದಿರ... ಮುಂತಾದವುಗಳನ್ನು, ಇವುಗಳೆಲ್ಲ ಬಡವರನ್ನು ಬಡವರಾಗಿಯೇ ಉಳಿಸುವ ಮಾರ್ಗಗಳೆಂದು ಬಿಡಿಸಿ ಹೇಳಬೇಕಿಲ್ಲ, ಇವುಗಳೆಲ್ಲ ಓಟು ಮಾಡುವಾಗ ಹಣಕ್ಕೆ ಕೈ ಚಾಚುವಂತೆ ಮಾಡುವ ವಿಧಾನಗಳು..

ಜನರನ್ನು ನಿಜವಾಗಿಯೂ ಉದ್ಧಾರ ಮಾಡುವ ಸಾಧನಗಳೆಂದರೆ 1.ವಿದ್ಯಾಭ್ಯಾಸ, 2.ಮೆಡಿಕಲ್ ಫೆಸಿಲಿಟಿ, 3.ಭ್ರಷ್ಟಾಚಾರ ನಿರ್ಮೂಲನೆ, 4.ಸರ್ಕಾರಿ ಕೆಲಸ ಮಾಡಿಸಲು ಕಂಟ್ರಾಕ್ಟ್ ಸಿಸ್ಟಂ ನಿರ್ಮೂಲನೆ... ಮುಂತಾದವು. ಜಯಲಲಿತಾ ಇವುಗಳಲ್ಲಿ ಯಾವನ್ನೂ ಮಾಡಲಿಲ್ಲ, ಭಾರತದಲ್ಲಿ ಬೇರೆಯವರೂ ಮಾಡಿಲ್ಲ, ಆದರೆ ಬೇರೆಯವರು ಇಷ್ಟೊಂದು ಸ್ವಾರ್ಥಿಗಳಲ್ಲ, ನಾವು ಇದನ್ನೂ ಗಮನಿಸಬೇಕು.

- ವೀರಭದ್ರಪ್ಪ, ಬೆಂಗಳೂರು

ಕನಕನಾದ ದುನಿಯಾ ವಿಜಯ್



'ಮಾಸ್ತಿಗುಡಿ' ದುರಂತದ ಅಂತಿಮ ತೀರ್ಪು ಹೊರಬೀಳುವವರೆಗೆ ಯಾವುದೇ ಸಿನಿಮಾದಲ್ಲಿ ನಟಿಸದಂತೆ ದುನಿಯಾ ವಿಜಯ್‌ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೇಳಿತ್ತು. ಈ ಮಾತನ್ನು ಅವರೂ ಒಪ್ಪಿಕೊಂಡಿದ್ದಾರೆ. ಆದರೆ, ಈ ನಡುವೆ ಅವರು ಹೊಸ ಸಿನಿಮಾದಲ್ಲಿ ನಟಿಸಲಿದ್ದಾರೆ ಅನ್ನುವ ಸುದ್ದಿ ಹೊರಬಿದ್ದಿದೆ. ಆರ್.ಚಂದ್ರು ನಿರ್ದೇಶನದ 'ಕನಕ' ಸಿನಿಮಾಗೆ ವಿಜಯ್ ನಾಯಕ. ಸಾಂಗ್ ಕಂಪೋಸ್ ಸೇರಿದಂತೆ ಮತ್ತಿತರ ಕೆಲಸಗಳು ಈಗಾಗಲೇ ಶುರುವಾಗಿವೆ. ಡಾ.ರಾಜ್‌ಕುಮಾರ್ ಅಭಿಮಾನಿಯಾಗಿ ವಿಜಯ್ ಕಾಣಿಸಿಕೊಳ್ಳಲಿದ್ದಾರಂತೆ. ನಿರ್ದೇಶಕರೇನೋ ಸಿನಿಮಾ ಶೂಟಿಂಗ್ ಗೂ ರೆಡಿಯಾಗಿದ್ದಾರೆ. ಆದರೆ, ವಿಜಯ್ ನಟಿಸಲು ವಾಣಿಜ್ಯ ಮಂಡಳಿ ಅನುಮತಿ ಕೊಡುತ್ತಾ ಅನ್ನುವ ಪ್ರಶ್ನೆ ಈಗ ಉದ್ಭವಿಸಿದೆ. ಅನುಮತಿ ಸಿಗದೇ ಇದ್ದರೆ ನಾಯಕ ಬದಲಾವಣೆ ಆಗುತ್ತಾ ಅನ್ನುವುದನ್ನೂ ಕಾದು ನೋಡಬೇಕಿದೆ. ನಿರ್ದೇಶಕ ಚಂದ್ರು ಹೇಳುವಂತೆ, ಈ ಸಿನಿಮಾ 'ಮಾಸ್ತಿಗುಡಿ' ದುರಂತಕ್ಕೂ ಮುನ್ನ ಆಗಬೇಕಿತ್ತಂತೆ. ಉದಯ್ ಮತ್ತು ಅನಿಲ್ ಕೂಡ ಇದರಲ್ಲಿ ನಟಿಸಲು ಒಪ್ಪಿಕೊಂಡಿದ್ದರಂತೆ. ಅವರಿಗಾಗಿಯಾದರೂ ಈ ಸಿನಿಮಾ ಮಾಡುತ್ತೇನೆ ಅಂತಿದ್ದಾರೆ ನಿರ್ದೇಶಕರು.

ಸ್ಕೂಲ್ ಹುಡುಗಿಯಾದ ರಚಿತಾ

'ಭರ್ಜರಿ' ನಂತರ ರಚಿತಾ ರಾಮ್ ವಿಐಪಿ ಸಿನಿಮಾದಲ್ಲಿ ನಟಿಸಲಿದ್ದಾರೆ ಅನ್ನುವ ಸುದ್ದಿ ಹರಡಿತ್ತು, ಆದರದು ನಿಜ ಆಗುವಂತೆ ಕಾಣುತ್ತಿಲ್ಲ. ಈ ರೀತಿಯ ರೂಮರ್ ಹರಡಿದ್ದರೂ ನಿರ್ದೇಶಕರಾಗಲಿ ಅಥವಾ ಸ್ವತಃ ರಚಿತಾ ಆಗಲಿ ಪ್ರತಿಕ್ರಿಯಿಸುತ್ತಲೂ ಇಲ್ಲ. ಅಲ್ಲಿಗೆ ರಚಿತಾ ಕೈಯಲ್ಲಿ ಒಂದೇ ಒಂದು ಸಿನಿಮಾ ಕೂಡ ಇಲ್ಲ ಅನ್ನುವ ಹೊತ್ತಲ್ಲಿ, ಸೂಪರ್‌ಸ್ಟಾರ್ ಉಪೇಂದ್ರ ಜತೆ ನಟಿಸಲು ಅವಕಾಶ ಸಿಕ್ಕಿದೆ.

ಕೆ.ಮಾದೇಶ ನಿರ್ದೇಶನದ ಇನ್ನೂ ಹೆಸರಿಡದ ಚಿತ್ರದಲ್ಲಿ ರಚಿತಾ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದೂ ಸ್ಕೂಲ್ ಹುಡುಗಿಯಾಗಿ ಅನ್ನುವುದು ಮತ್ತೊಂದು ವಿಶೇಷ. ಸದಾ ರಿಮೇಕ್ ಸಿನಿಮಾದಲ್ಲೇ ಬ್ಯುಸಿಯಾಗುವ ನಿರ್ದೇಶಕರು ಈ ಬಾರಿ ಸ್ವಮೇಕ್ ಚಿತ್ರವನ್ನೇ ಮಾಡಲು ಮನಸು ಮಾಡಿದ್ದಾರೆ. ನಿರ್ಮಾಪಕಿ ವಿಜಯಲಕ್ಷ್ಮಿ ಅರಸ್ ಬರೆದಿರುವ ಕತೆಯನ್ನೇ ಸಿನಿಮಾ ಮಾಡುತ್ತಿದ್ದಾರೆ. ಕತೆಯ ಜತೆ ಭಾರೀ ಬಜೆಟ್ ನೀಡಿರುವ ನಿರ್ಮಾಪಕಿ ವಿಜಯಲಕ್ಷ್ಮಿ, ಚಿತ್ರರಂಗದಲ್ಲಿ ತಮ್ಮ ಅದೃಷ್ಟ ಪರೀಕ್ಷೆಗೂ ಮುಂದಾಗಿದ್ದಾರೆ.

ಸದಾ ಗ್ಲಾಮರ್ ಪಾತ್ರಗಳ ಮೂಲಕವೇ ಗುರುತಿಸಿಕೊಂಡಿರುವ ರಚಿತಾಗೆ ಈ ಸಿನಿಮಾದಲ್ಲಿ ತುಂಬಾ ವಿಶೇಷ ಪಾತ್ರ ಸಿಕ್ಕಿದೆಯಂತೆ. ಸ್ಕೂಲ್ ಹುಡುಗಿಯಾಗಿ ಕಾಣಿಸಿಕೊಳ್ಳಬೇಕಿದ್ದರಿಂದ ಅದಕ್ಕಾಗಿ ಸಖತ್ ತಯಾರಿಯನ್ನೂ ಮಾಡಿಕೊಳ್ಳಲಿದ್ದಾರಂತೆ.



ಜತೆಯಾದ 'ಮಮ್ಮಿ' ಜ



'ಮಮ್ಮಿ' ಸಿನಿಮಾ ಥಿಯೇಟರ್‌
ಮಾಡುತ್ತಿದೆ. ತಮಿಳು ಮತ್ತು ತೆಲುಗು ಸಿನಿ
ಈ ಚಿತ್ರಕ್ಕೆ ಬೇಡಿಕೆ ಬಂದಿದೆ. ಹಾಗಾಗಿ ನಿರ್ದೇ
ಮತ್ತೊಂದು ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾ
ಪ್ರಿಯಾಂಕ ಉಪೇಂದ್ರ ಅವರನ್ನೇ
ಆಯ್ಕೆ ಮಾಡಿಕೊಂಡಿದ್ದು, ಕೈ
ಬಾರಿ ಸಿನಿಮಾ ಮಾಡಲಿದ್ದಾರೆ
ನಡೆದ ನೈಜ ಘಟನೆಯನ್ನು
ಕೊಂಡಿರುವ ನಿರ್ದೇಶಕರು,
ಅಂಡ್ ಥ್ರಿಲ್ಲರ್ ಮಾದರಿ
ದ್ದಾರಂತೆ. ಪ್ರಿಯಾಂಕಾ ಅವರಿಗೆ ಚಾಲೇಂಜ್ ನೀಡುವಂತ
ಬರೆದುಕೊಂಡಿದ್ದಾರಂತೆ. ಈಗಾಗಲೇ ತಮ್ಮ ಕತೆಯನ್ನು ಪ್ರಿಯಾಂ
ಕತೆ ಕೇಳಿ ಅವರೂ ಥ್ರಿಲ್ ಆಗಿದ್ದಾರಂತೆ. ಚಿತ್ರಕ್ಕೆ ಇನ್ನೂ ಹೆಸ
ಪ್ರಧಾನ ಸಿನಿಮಾ ಇದಾಗಿದ್ದರಿಂದ, ಅದಕ್ಕೆ ಹೋಲುವಂತಹ
ಹುಡುಕುತ್ತಿದ್ದಾರಂತೆ ಲೋಹಿತ್. ನಾಯಕಿಯ ಹೆಸರನ್ನೇ ಚಿತ್ರಕ್ಕೆ
ಕೂಡ ಇದೆಯಂತೆ. ಸದ್ಯ 'ಮಮ್ಮಿ' ಸಿನಿಮಾ ಎರಡನೇ ವಾರ
ಕಾಣುತ್ತಿದೆ. ಈ ಚಿತ್ರವು ಐವತ್ತು ದಿನ ಕಾಣುವ ಹೊತ್ತಿಗೆ ಹ
ಶೂಟಿಂಗ್ ಶುರು ಮಾಡುವ ಆಲೋಚನೆ ಇವರದ್ದು.

ಧ್ರುವ ಹಾದಿ ತಪ್ಪಿದ ಮಗ


ಯಶ್ ನಂತರ ಹೊಸ ಪ್ರೇಕ್ಷಕರನ್ನು ಹುಟ್ಟುಹಾಕಿದವರು ಧ್ರುವ ಸರ್ಜಾ. ಅವರು ನಟಿಸಿದ ಎರಡೂ ಸಿನಿಮಾಗಳು ಶತದಿನ ಪ್ರದರ್ಶನ ಕಂಡವು. ಈ ಗೆಲುವೇ ಅವರಿಗೆ ಮುಳುವಾದಂತೆ ಕಾಣುತ್ತಿದೆ. ಎರಡೂ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಕಲೆಕ್ಷನ್ ಮಾಡಿದವು. ಹಾಗಾಗಿ ನಿರ್ಮಾಪಕರು ಸಹಜವಾಗಿಯೇ ಧ್ರುವ ಮನೆಮುಂದೆ ಸಾಲುಗಟ್ಟಿ ನಿಂತರು.



ಆದರೆ, ಧ್ರುವ ಅವರ ವರ್ತನೆಯಲ್ಲಿ ಮಾತ್ರ ಭಾರೀ ಬದಲಾವಣೆ ಕಂಡಿದೆಯಂತೆ. ಅವರಿಡುವ ಡಿಮಾಂಡ್ ಮತ್ತು ನಿರ್ದೇಶಕರ ಜತೆ ನಡೆದುಕೊಳ್ಳುವ ರೀತಿಯಿಂದಾಗಿ ಸ್ವತಃ ನಿರ್ದೇಶಕರೇ ಅವರಿಗೆ ಕತೆ ಹೇಳಲು ಹಿಂದೇಟು ಹಾಕುತ್ತಿದ್ದಾರಂತೆ. ಹಾಗಾಗಿ ಎರಡು ವರ್ಷಗಳಿಂದ ಅವರು ಒಂದೇ ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. 'ಭರ್ಜರಿ' ಸಿನಿಮಾದ ಶೂಟಿಂಗ್ ಶುರುವಾಗಿ ಎರಡು ವರ್ಷಗಳು ಮುಗಿಯುತ್ತಾ ಬಂದರೂ, ಇನ್ನೂ ಆ ಸಿನಿಮಾ ಕಂಪ್ಲೀಟ್ ಆಗಿಲ್ಲ, ಅಲ್ಲದೇ ಮತ್ತೊಂದು ಸಿನಿಮಾ ಅವರನ್ನು ಹುಡುಕಿಕೊಂಡು ಬಂದಿಲ್ಲ. ಹೀಗಾಗಿ ಥೇಟ್ ಹಾದಿ ತಪ್ಪಿದ ಮಗನಂಥದ್ದಾಗಿದ್ದಾರೆ ಧ್ರುವ. ಕತೆ ಕೇಳುವ ಮತ್ತು ಹಣಕಾಸಿನ ವಿಚಾರದಲ್ಲಿ ಅರ್ಜುನ್ ಸರ್ಜಾ ತಲೆ ಹಾಕುತ್ತಿದ್ದರೂ, ಧ್ರುವನನ್ನು ಸರಿದಾರಿಗೆ ತರುವುದಕ್ಕೆ ಕಷ್ಟ ಆಗುತ್ತಿದೆ ಅಂತಾರೆ ಧ್ರುವನನ್ನು ಬಲ್ಲವರು. ಹೊಸ ತಲೆಮಾರಿನ ನಟರಲ್ಲಿ ಧ್ರುವನಿಗೆ ಒಳ್ಳೆಯ ಅವಕಾಶ ಸಿಕ್ಕಿದೆ. ಅಭಿಮಾನಿಗಳು ಕೂಡ ಇದ್ದಾರೆ. ಕೂಡಲೇ ಎಚ್ಚೆತ್ತುಕೊಳ್ಳಬೇಕು ಅನ್ನುವುದು ಅವರ ಹಿಂದಿನ ಸಿನಿಮಾ ಮಾಡಿದ ನಿರ್ದೇಶಕರ ಮಾತು.

ರೌಡಿಯಾದ ಯೋ

ಲೂಸ್‌ಮಾದ ಖ್ಯಾತಿಯ ಯೋಗಿಗೆ ರೌಡಿಯ ಪ
ನಿರ್ದೇಶಕ ಆರ್ಯ ಮಹೇಶ್. 'ಕೋಲಾರ' ಚಿತ್ರದಲ್ಲಿ
ರೌಡಿಯೊಬ್ಬನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. 90ರ ದಶಕದ



ಭೂಗತ ಜಗತ್ತನ್ನು ಆಳಿದ ರೌಡಿ ತಂಗಂ ಆಗಿ ಯೋಗಿ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇಡೀ ಸಿನಿಮಾ ತಂಗಂನ ಕರಾಳ ಬದುಕನ್ನು ಅನಾವರಣ ಮಾಡುವುದರಿಂದ, ಘಟನೆಗಳು ನಡೆದ ಸ್ಥಳಕ್ಕೆ ಹೋಗಿ ಚಿತ್ರೀಕರಣ ಮಾಡಿದ್ದಾರಂತೆ ನಿರ್ದೇಶಕರು. ಸಿನಿಮಾದ ಕತೆಯೇ ವಿಭಿನ್ನವಾಗಿದೆಯಂತೆ. ಪೊಲೀಸರಿಗೆ ತಂಗಂ ರೌಡಿಯಾಗಿದ್ದ ಆದರೆ ಅವನ ತಾಯಿಗೆ ಆತ ಒಳ್ಳೆಯ ಮಗನಾಗಿದ್ದ. ಹಾಗಾಗಿ ಎರಡೂ ಆ್ಯಂಗಲ್‌ನಲ್ಲೂ ಸಿನಿಮಾ ಮೂಡಿ ಬರಲಿದೆ.

ಸಿನಿಮಾದ ಬಹುತೇಕ ಕತೆಯನ್ನು ತಂಗಂ ತಾಯಿಯೇ
ಹೇಳಿದ್ದಾರಂತೆ. ಹಾಗಾಗಿ ಯಾವುದೇ ದೃಶ್ಯವನ್ನು ಸಿನಿಮಟಿಕ್
ಮಾಡಿಲ್ಲ ಅಂದಿದ್ದಾರೆ ನಿರ್ದೇಶಕರು. ಈಗಾಗಲೇ ಈ ರೀತಿಯ
ಮಾಡಿರುವ ಯೋಗಿ 'ಕೋಲಾರ' ಚಿತ್ರಕ್ಕಾಗಿ ಒಂದಷ್ಟು
ಮಾಡಿಕೊಂಡಿದ್ದಾರಂತೆ. ತಂಗಂ ರೀತಿಯಲ್ಲೇ
ದೇಹ ಬೆಳೆಸಿಕೊಂಡಿದ್ದಾರಂತೆ. ಅ
ಓವರ್ ಕೂಡ ಆಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com